# ಎಲ್ಲಿದೆ ಶಿವಾಪುರ?

## ಓದಿಗೆ ಮೊದಲು

'ಅಕ್ಕಕ್ಕು ಹಾಡುಗಳೇ' ಬಂದ ಸುಮಾರು ಹದಿನೈದು ವರ್ಷಗಳ ತರುವಾಯ ಈ ಸಂಕಲನ ಬರುತ್ತಿದೆ. ಈ ಮಧ್ಯೆ ಕವಿತೆಯಲ್ಲಿಯೇ ಆತ್ಮಚರಿತ್ರೆ ಬರೆಯಬೇಕೆಂದು ಕೆಲವು ಪದ್ಯಗಳನ್ನು ಬರೆದೆ, ಆದರೆ ಬರೆಯುವ ಪ್ರತಿಯೊಂದು ಪದ್ಯವೂ ಆತ್ಮಚರಿತ್ರೆಯೇ ಆಗಿರುವುದರಿಂದ ಪ್ರತ್ಯೇಕವಾಗಿ ಆತ್ಮಚರಿತ್ರೆಯೊಂದನ್ನು ಬರೆಯುವ ಅಗತ್ಯ ಕಾಣಲಿಲ್ಲ.

ಕವಿತೆಗಳನ್ನು ಕಾಲಾನುಕ್ರಮದಲ್ಲಿ ಅನುಕ್ರಮಿಸಬೇಕೆಂಬ ಆಲೋಚನೆಯೂ ಸರಿ ಕಾಣಲಿಲ್ಲ. ಪಶ್ಚಿಮದ ಇತಿಹಾಸದ ಕಲ್ಪನೆಯನ್ನೇ ಒಪ್ಪದವರಿಗೆ ಕಾಲಾನುಕ್ರಮ ಎನ್ನುವುದು ಕೃತಕವೆನ್ನಿಸಿ ಅದನ್ನೂ ಬಿಟ್ಟೆ. ಇಲ್ಲಿನ ಕವನಗಳನ್ನು ಘೋಡಗೇರಿ, ಹಂಪಿ, ಅಮೆರಿಕ ಹಾಗೂ ಆಕಾಶ-ಬಯಲು ಎಂದು ವಿಂಗಡಿಸಿ ಕೊಟ್ಟಿದ್ದೇನೆ.

***

ನಾನು ಹುಟ್ಟಿ ಬೆಳೆದ ಊರು ಘೋಡಗೇರಿ. ನಮ್ಮೂರ ಬಳಿಯ ಪಾಶ್ಚಾಪುರದಲ್ಲಿದ್ದ ಒಬ್ಬ ಮುಸ್ಲಿಂ ದೊರೆ ತನ್ನ ಕುದುರೆ ಕಟ್ಟುವುದಕ್ಕಾಗಿ ಕಟ್ಟಿಸಿದ ಕೇರಿ ಘೋಡಗೇರಿ.

ಈಗಿನ ಘೋಡಗೇರಿಯ ಪಶ್ಚಿಮದಲ್ಲಿ ಸುಮರು ಒಂದು ಮೈಲು ದೂರದಲ್ಲಿ ಹಿರಣ್ಯಕೇಶಿ ಮತ್ತು ಘಟಪ್ರಭಾ ನದಿಗಳು ಕೂಡುವ ಕೂಡಲ ಸಂಗಮ ಇದೆ. ಅಲ್ಲಿ ಒಂದು ಊರಿತ್ತು. ಅದೇ ಶಿವಾಪುರ. ನಮ್ಮ ಪೂರ್ವಜರಿದ್ದದ್ದು ಈ ಊರಿನಲ್ಲಿ. ಆದರೆ ಮೇಲಿಂದ ಮೇಲೆ ಬರುವ ಪ್ರವಾಹದಿಂದಾಗಿ ಆ ಶಿವಾಪುರವನ್ನು ಬಿಟ್ಟು ಈಗಿನ ಘೋಡಗೇರಿಗೆ ಬಂದು ನೆಲೆ ನಿಂತರು. ಕುರುಬರ ಹಾಡಿನಲ್ಲಿ ಈ ಸಂಗತಿ ಇದೆ.

ಆದರೆ ನಾನು ಕಾವ್ಯದಲ್ಲಿ ಉಪಯೋಗಿಸುವುದು ಸಾಂಕೇತಿಕ ಶಿವಾಪುರವನ್ನು. ಅಂದಿನ ಕೂಡಲ ಸಂಗಮದ ಶಿವಾಪುರ ಈಗಿನ ಘೋಡಗೇರಿ , ಹಾಗೂ ನಾವು ಕಟ್ಟಬೇಕೆಂದ ಕನಸಿನ ಶಿವಾಪುರ-ಈ ಮೂರೂ ಸೇರಿದ ಸಾಂಕೇತಿಕ ಶಿವಾಪುರದ ಶೋಧನೆ ನನ್ನ ಕವಿತೆ.

ಮಿತ್ರರಾದ ಮಾಧವ ಕುಲಕರ್ಣಿ ಅವರ ಒತ್ತಾಸೆ ಇಲ್ಲದಿದ್ದರೆ ಈ ಸಂಕಲನವೂ ಇಷ್ಟು ಬೇಗ ಬರುತ್ತಿರಲಿಲ್ಲ. ಅವರಿಗೂ ಸಕಾಲಕ್ಕೆ ಉತ್ಸಾಹದಿಂದ ಪ್ರಕಟಿಸಲು ಮುಂದೆ ಬಂದ ಮಿತ್ರ ರವಿಕುಮಾರ್ ಅವರಿಗೂ ವಂದನೆಗಳು. ಮುನ್ನುಡಿ ಬರೆದ ಅನಂತಮೂರ್ತಿ ಅವರಿಗೆ, ಈ ಪದ್ಯಗಳನ್ನು ಆಗಾಗ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದ ಸಂಪಾದಕರಿಗೆ, ಮುಖ್ಯವಾಗಿ ಸೃಜನಶೀಲ ಲೇಖಕರೂ ಆದ ಲಕ್ಷ್ಮಣ ಕೊಡಸೆ, ಪದ್ಮರಾಜ ದಂಡಾವತಿ, ವಿವೇಕ ಶಾನುಭಾಗ ಹಾಗೂ ಶ್ರೀಮತಿ ಪೂರ್ಣಿಮಾ ಅವರಿಗೆ ವಂದನೆಗಳು.

**ಚಂದ್ರಶೇಖರ ಕಂಬಾರ**

ಬೆಂಗಳೂರು

ಡಿಸೆಂಬರ್ ೨೦೦೯

# ನುಡಿವ ಬೆಡಗು

ಶ್ರೀ ಚಂದ್ರಶೇಖರ ಕಂಬಾರರ ಈ ಸಂಕಲನ ಅವರ ಹಿಂದಿನ ಸಂಕಲನ ಪ್ರಕಟವಾಗಿ ಹದಿನೈದು ವರ್ಷಗಳ ನಂತರ ಪ್ರಕಟಗೊಳ್ಳುತ್ತಿದೆ. ಎಲ್ಲ ರೀತಿಯಿಂದಲೂ ಮಹತ್ವದ ಸಂಕಲನವಿದು. ಈ ಸಂಕಲನದ ವಿಶೇಷತೆಯೆಂದರೆ ಅವರ ಬದುಕಿನ ಮುಖ್ಯ ಘಟನೆಗಳ ಮಧ್ಯೆ ಮರೆತು ಅಥವಾ ನೇಪಥ್ಯಕ್ಕೆ ಸರಿದ ಪುಟ್ಟ ಪುಟ್ಟ ವಿಷಯಗಳೇ ಕವಿತೆಗಳಾಗಿರುವುದು. ಹೀಗಾಗಿ ಇವುಗಳಿಗೆ ತನ್ನದೇ ಆದ ಮಹತ್ವ ಲಭ್ಯವಾಗಿದೆ .

ಈ ಸಂಕಲನದ ಮತ್ತೊಂದು ವಿಶೇಷತೆಯೆಂದರೆ ವೈವಿಧ್ಯತೆಯದು. ಅಂದರೆ ಶ್ರೀ ಕಂಬಾರರ ಜೀವನದ ವಿಸ್ತಾರವಾದ ಹರವು ಇಲ್ಲಿಯ ಕವಿತೆಗಳಲ್ಲಿ ಮೈದಾಳಿರುವುದರಿಂದ ಸಹಜವಾಗಿಯೇ ಅಪಾರ ವೈವಿಧ್ಯತೆಯಿಂದ ಕೂಡಿದೆ. ಅಷ್ಟೇ ಅಲ್ಲ ಸಹಜವಾಗಿ ಮೂಡಿಬಂದಿದೆ.

***

ಈ ಸಂಕಲನವನ್ನು ಪ್ರಕಟಿಸಲು ಅನುಮತಿ ನೀಡಿದ ಶ್ರೀ ಚಂದ್ರಶೇಖರ ಕಂಬಾರರಿಗೆ, ಮತ್ತು ತಮ್ಮ ಅನಾರೋಗ್ಯದ ನಡುವೆಯೂ ಮುನ್ನುಡಿ ಬರೆದುಕೊಟ್ಟ ಶ್ರೀ ಯು.ಆರ್. ಅನಂತಮೂರ್ತಿ ಅವರಿಗೆ, ಅಕ್ಷರವಿನ್ಯಾಸ ಮಾಡಿಕೊಟ್ಟಿರುವ ಶ್ರೀಧರ್ ಮತ್ತು ಮುಖಪುಟದ ಕಲಾವಿದ ಸುಭಾಷ್ ಕಮ್ಮಾರ್, ಮುದ್ರಿಸಿದ ಹೂವಪ್ಪ ಅವರಿಗೆ, ನಮ್ಮ ಕೆಲಸವನ್ನು ಬೆಂಬಲಿಸುತ್ತಿರುವ ಎಲ್ಲ ಹಿರಿಯರಿಗೆ, ಗೆಳೆಯರಿಗೆ ಧನ್ಯವಾದಗಳು.

**ನ. ರವಿಕುಮಾರ**

ಅಭಿನವ ಪರವಾಗಿ

# ಆಚಾರ್ಯ ಅನಂತಮೂರ್ತಿ

ಗರಿಗರಿ ಬಟ್ಟೆಯ ಆಡಂಬರದ ನಡೆಯುವರು,
ತೊಳಗುವ ನುಡಿಗಳನೆಸೆವ ಸೊಗಸುಗಾರರು,
ದಡ್ಡಶಿಷ್ಯರಿಗೆ ಗಾರೆ ಅರೆಯುವ ಕೆಲಸ ಹಚ್ಚಿ
ಜಾಣರಿಗೆ ಕನ್ನಡ ಗುಡಿಕಟ್ಟುವ ಜವಾಬ್ದಾರಿಯ ನೀಡಿ,
ಖುದ್ದಾಗಿ ಕೋಲು ಮೇಸ್ತ್ರಿಯ ಕೆಲಸ
ಮಾಡುತ್ತಾ ನಿಂತವರು.
ಮುಂದೆ ಯಾರೇ ಅಂದರೆ-ದೇವರೂ,
ಅಥವಾ ದೇಶದ ಅಧ್ಯಕ್ಷ ಬಂದರೂ
ಎದುರು ಬೆಂಚಿನಲಿ ಕೂರಿಸಿ ಕನ್ನಡ ಕೊರೆವವರು!

ಮಾತಾಡಿದರೆ ಇವರು ಗರಿಗಟ್ಟಿ ಹಾರುತ್ತಾವೆ
ಹೆಸರು ಗೊತ್ತಿಲ್ಲದ ಎಷ್ಟೋ ವಲಸಿಗ ಹಕ್ಕಿ.
ಇವರು ಯಾರು ಹೇಳಿ?

ಉಡುಪಿಯ ಉಪಾಧ್ಯಾಯ-
ಆಚಾರ್ಯ ಯು.ಆರ್. ಅನಂತಮೂರ್ತಿ.

**ಅವರಿಗೆ ಗೌರವಪೂರ್ವಕ ಅರ್ಪಣೆ**

# ಕಂಬಾರರ ಕಾವ್ಯ

ನನ್ನ ಸಮಕಾಲೀನ ಲೇಖಕರಲ್ಲಿ ವಿಶಿಷ್ಟರಾದ ಚಂದ್ರಶೇಖರ ಕಂಬಾರರ ಕಾವ್ಯದ ಮ್ಯಾಜಿಕನ್ನು ನಾನು ಯಾವತ್ತೂ ವಿಶ್ಲೇಷಿಸದಂತೆ ಅನುಭವಿಸಿದ್ದೇನೆ. ವಿಶ್ಲೇಷಣೆಗೆ ಸಿಗುವಂತೆ ಯೋಚಿಸಿ ಬರೆಯುವ ಕವಿ ಕಂಬಾರರಲ್ಲ. ಇಂಗ್ಲಿಷ್‌ನ ಬಹುದೊಡ್ಡ ಕಾದಂಬರಿಕಾರ ಹೆನ್ರಿ ಜೇಮ್ಸ್ ಬಗ್ಗೆ ಎಲಿಯೆಟ್ ಒಂದು ಮಾತು ಹೇಳುತ್ತಾನೆ: 'ನಮ್ಮ ಕಾಲದಲ್ಲಿ ಈತನೊಬ್ಬನಿಗೆ ಮಾತ್ರ ಅಬ್‌ಸ್ಟ್ರಾಕ್ಟ್ (abstract) ಆಗಿ ಯಾವ ಅಭಿಪ್ರಾಯಗಳೂ ಹೊಳೆಯುವುದಿಲ್ಲ. ಅವನು ಎಲ್ಲವನ್ನೂ ನಿಜದ ವಸ್ತುಗಳನ್ನಾಗಿಯೇ ಕಾ ಣುತ್ತಾನೆ.'

ಕಂಬಾರರನ್ನು ಬೇಂದ್ರೆಗೆ ಹೋಲಿಸುವುದುಂಟು. ಇದು ಸರಿಯಲ್ಲ. ಕಂಬಾರರು ಮೈಮರೆತು ಆಧ್ಯಾತ್ಮಿಕವಾದ ತುಡಿತದಲ್ಲಿ ಬರೆಯುವವರಲ್ಲ. ಅವರಿಗೆ ಆತ್ಮದಷ್ಟೇ ದೇಹವೂ ನಿಜ. ಆದರೆ ಜಡವೆಂದು ನಾವು ತಿಳಿಯುವ ಜಗತ್ತು ಇವರ ಕಾವ್ಯದೊಳಗೆ ಕುಣಿದಾಡಿಕೊಂಡು ಪ್ರವೇಶಿಸುತ್ತದೆ. ಬೇಂದ್ರೆಯಲ್ಲಿ-ಹಿನ್ನೆಲೆಯಲ್ಲಿ ಹೊಳೆಯುತ್ತದೆ.

ನಾನು ಅಡಿಗರಲ್ಲೂ, ಕಂಬಾರರಲ್ಲೂ ಒಂದು ಸಂಗತಿಯನ್ನು ಗುರುತಿಸಿದ್ದೇನೆ. ಅಡಿಗರ ಕವಿತೆಗಳ ನಾಯಕ ಕೆಲವೊಮ್ಮೆ ಸರ್ಕಸ್‌ನ ಬಫೂನನಂತೆ ತನ್ನನ್ನೇ ಗೇಲಿಮಾಡಿಕೊಳ್ಳಬಲ್ಲ. ಸರ್ಕಸ್‌ನ ಉಳಿದ ಪಾತ್ರಗಳು ದೇಹಾಪಾಯ ಲೆಕ್ಕಿಸದೆ ಮಾಡುವ ಎಲ್ಲ ಸಾಹಸಗಳನ್ನು ತಾನೇ ಮಾಡಿ ತೋರಿಸಿ ಬಫೂನ್ ಸಾಹಸಪ್ರಿಯರಾದ ನಮ್ಮ ದಡ್ಡತನ ನೋಡಿ ನಗುತ್ತಾನೆ. ಅವನು ಎಲ್ಲರಿಗಿಂತ ಕೀಳೂ ಹೌದು. ಎಲ್ಲರಿಗಿಂತ ಮೇಲೂ ಹೌದು. ಕಂಬಾರರ ಪಾತ್ರಗಳು ಅಡಿಗರಿಗಿಂತಲೂ ಹೆಚ್ಚಾಗಿ ತನ್ನನ್ನೇ ತಾನು ಹಾಸ್ಯಮಾಡಿಕೊಳ್ಳಬಲ್ಲವರು. ಅಡಿಗರಿಗಾದರೂ ನೇರವಾಗಿ ಹೇಳಿಕೊಳ್ಳುವ ವೈಯಕ್ತಿಕ ಆರ್ತತೆಯ ಹಲವು ಭಾವನಾತ್ಮಕ ವಿಷಯಗಳಿವೆ. ಕಂಬಾರರಿಗೂ ಇವೆ. ಆದರೆ ಅವೆಲ್ಲವೂ ಹಾಸ್ಯದ ಮುಖವಾಡ ತೊಟ್ಟು ನಮಗೆ ಎದುರಾಗುತ್ತವೆ. ಯಾಕೆ ಇಡೀ ಜಗತ್ತನ್ನೇ ಅವಾಕ್ಕಾಗಿಸಿದ ಮಾವೋತ್ಸೆ ತುಂಗ ಈ ಕವಿಯ ನಾಯಕನಿಗೆ ದೇವತಾ ಸದೃಶನಾದ ಆತ್ಮರತ ಮೂರ್ಖನೂ, ಹೀಗೆ ನಮಗೆ ತೋರುವುದಕ್ಕಾಗಿ ತುಡಿಯುವ ಬಫೂನನೂ ಆದ ಒಬ್ಬ ವ್ಯಕ್ತಿಯಾಗುತ್ತಾನೆ. ನಾನು ಚೀನಾಕ್ಕೆ ಹೋದಾಗ ನನಗೆ ಅನ್ನಿಸಿತ್ತು-ಕಂಬಾರರಂತೆ ಚೀನೀಯರು ಬರೆಯಬಲ್ಲವರಾಗಿದ್ದರೆ ಮಾವೋನಿಂದ ಎಂದಾದರೂ ಬಿಡುಗಡೆ ಪಡೆಯಬಹುದಿತ್ತು ಎಂದು.

ಕಂಬಾರರನ್ನು ಎಲ್ಲಿ ಎತ್ತಿ ಓದಿದರೂ ವಕ್ರ ನೋಟದಿಂದ ಕಂಡ ಸತ್ಯಗಳೇ ಎದುರಾಗುತ್ತವೆ. ಈ ಕಂಬಾರ-ಲೋಕದಲ್ಲಿ ಸತ್ಯವನ್ನು ಯಾರೂ ಮರೆ ಮಾಚುವಂತಿಲ್ಲ. ಇಲ್ಲಿ ಬರುವ ವ್ಯಕ್ತಿಗಳು ಅತಿ ಹಿಗ್ಗಬಲ್ಲವರೂ ಹೌದು; ಅತಿ ಕುಗ್ಗಬಲ್ಲವರೂ ಹೌದು. ಜೊತೆಗೆ ಇವರು ಬಡಪಾಯಿಗಳೂ ಹೌದು. ಈ ಬಗ್ಗುವ/ಕುಗ್ಗುವ ನಿರಹಂಕಾರ ಗುಣದಿಂದಾಗಿ ಇವರು ಬಚಾವ್ ಆಗುತ್ತಾರೆ . ಬಫೂನ್‌ಗಿರಿಯೂ ಬಚಾವ್ ಆಗುವ ಒಂದು ಕ್ರಮ.

ಸರ್ವನಾಶವಾಗುತ್ತಿರುವ ಇಂದಿನ ಜಗತ್ತಿನಲ್ಲಿ ನಾವು ಸಾಮಾನ್ಯನೆಂದು ತಿಳಿಯುವ ನರಜೀವಿಗೆ ಪಾರಾಗಬಲ್ಲ ಹಲವು ಉಪಾಯಗಳು ಇವೆ ಎಂಬುದನ್ನು ಕಂಬಾರರ ಇಡೀ ಕಾವ್ಯ ತೋರಿಸುತ್ತದೆ.

ರಾಷ್ಟ್ರಗಳು ಅಳಿದರೂ ಶಿವಾಪುರ ಅಳಿಯುವುದಿಲ್ಲ.

ನಾನೊಂದು ಪದ್ಯ ಬರೆದಿದ್ದೆ . ‘ಊರು ಮತ್ತು ದೇಶ’ ಎಂದು ಪದ್ಯದ ಹೆಸರು. ಊರು ಎನ್ನುವುದು ನಿಜದ ಸಂಬಂಧಗಳ ಪ್ರದೇಶ. ದೇಶ ಎನ್ನುವುದು ನಾವು ಭಾವನಾತ್ಮಕವಾಗಿ ಮೇಲು ಕೀಳಿನ ಆಟವಾಡಲು, ಆಳಲು, ಅಳಿಸಿಕೊಳ್ಳಲು ಕಟ್ಟಿಕೊಳ್ಳುವ ವೈಚಾರಿಕತೆಯ ಲೋಕ. ಕಂಬಾರರು ಅಚ್ಚಕನ್ನಡವಾಗಿರುವ ಒಂದು ಸಣ್ಣ ಪ್ರದೇಶದ ಬಾಳುವ ಶಕ್ತಿಯನ್ನು ಬಿಂಬಿಸಬಲ್ಲ ಕವಿ. ನಮ್ಮೂರಿನ-ಗಾಢವಾದ ಲೋಕಪ್ರಜ್ಞೆಯ-ಕವಿ, ಜನರ ನಡುವಿನಿಂದ ಹುಟ್ಟಿಬಂದ, ಹಾಡುವ, ಕುಣಿಯುವ, ಅಣಕಿಸುವ, ಅಪರೂಪದ ಕವಿ ಈ ಕಾಲದಲ್ಲಿ ಕಂಬಾರ ಒಬ್ಬರೇ . ತನ್ನ ಅಣಕದಿಂದ ದೇವರನ್ನೂ ಹೊರತುಪಡಿಸದವರು ಇವರು. ಊರಿನವನೇ ಆದ  ಈ ದೇವರನ್ನು ಪ್ರೀತಿಸಬಲ್ಲವರೂ ಇವರು.

ಕಾವ್ಯದ ಜೀವಾಳ ಧ್ವನಿ ಎನ್ನುತ್ತಾರೆ.  ತನ್ನ ಧ್ವನಿಯಲ್ಲಿ ಸತ್ಯವನ್ನು ಹೊಮ್ಮುವ ಮಾತಿನ ಪರಿಯಲ್ಲಿ ಒಳಗೊಂದು ಹೊರಗೊಂದು ಎನ್ನಿಸುವ ಬಿರುಕು ಇರುತ್ತದೆ . ಕಂಬಾರರಲ್ಲಿ ಒಳಗೊಂದು ಹೊರಗೊಂದು ಎಂಬ ಅಂತರವೇ ಇಲ್ಲ. ಆತಂಕವೂ ಇಲ್ಲ. ಸ್ವೀಕಾರದ ಹಿಗ್ಗಿನಲ್ಲಿ ವಿಸ್ತಾರವಾಗುತ್ತ ಇರುವ ಕಂಬಾರರ ಲೋಕ ಮೋಹಕವಾದ ನಾಟಕೀಯ ಪ್ರದರ್ಶನದ್ದು. ಈ ಪ್ರದರ್ಶನದಲ್ಲಿ ದಯ ದಾಕ್ಷಿಣ್ಯದ ನಾಗರಿಕ ಸಂಕೋಚವಿಲ್ಲ. ಒಂದು ದೇಶ ಹಳ್ಳಿಯಾಗಿಯೂ ಉಳಿಯದ ನಾಡಿನಲ್ಲಿ ಕಂಬಾರನಂಥ ಕವಿ ಹುಟ್ಟುವುದಿಲ್ಲ.

**ಯು.ಆರ್. ಅನಂತಮೂರ್ತಿ**

# ಭಾಗ ೧ - ಘೋಡಗೇರಿ

## ಒಡಲುಗೊಂಡ ಜಂಗಮ

೧

ಮುಟ್ಟಾಗಿ ಮೂಲೆ ಹಿಡಿದವಳು
ಮೂರು ದಿನದಲ್ಲಿ ಮೂರು ನೀರು ಮಿಂದು
ನಾಲ್ಕನೆಯ ನೀರಿಗೆ ಮೈಲಿಗೆ ಕಳೆದು
ಮಡಿಯುಟ್ಟಿದ್ದೇನೆ;
ತಿಳಿಮೋರೆಯಲ್ಲಿ ಕಳೆದೋರಿ
ಕಾದು ನಿಂತಿದ್ದೇನೆ ಬಾರೊ ಜಂಗಮ.
ಹಸು ಹಟ್ಟಿಗಾಗುವ ಹೊತ್ತಿಗೆ
ಕೈಭಾಷೆ ಕಣ್ಸನ್ನೆ ಮಾಡಿ ಕರೆಯುವತನಕ
ಚಿಕ್ಕ ಚಾವಡಿಯೊ ಚಿತ್ರಮಂಟಪದಲ್ಲಿ
ಕಾದಿರು ಜಂಗಮ.

೨

ತಲೆ ಬಾಚಿ ಮುಡಿ ಕಟ್ಟಿ
ಚಂಡುಮಲ್ಲಿಗೆ ದೇವಕೇದಗೆ ಮುಡಿದೆ.
ಕಣ್ಣಿಗೆ ಕೋಲು ಕಾಡಿಗೆ ಹಚ್ಚಿ,

ಚಂದ್ರಕಾಳಿಯನುಟ್ಟು ಬಂಗಾರದ ಬಳೆಯಿಟ್ಟು,
ಸಿಂಗಾರವಾಗಿ ಕಾಯುತ್ತ ಕೂತೆ
ಜಂಗಮ ನಿನಗಾಗಿ.

ಒಂದು ಗಳಿಗೆಯಾಯಿತು
ಎರಡು ಗಳಿಗೆ ಹೋಯಿತು
ಎರಡು ಹೋಗಿ ಮೂರು ಗಳಿಗೆಯಾಗಿ
ಹೊತ್ತು ಮುಳಲುಗಿ ಕತ್ತಲಾಯಿತು,
ನೀನು ಬರಲಿಲ್ಲ ಜಂಗಮ.

ಅಂದಗೆಟ್ಟವು ನಮ್ಮ ಅಂದಗಳೆಲ್ಲವು
ತಂಗಳಾಯಿತು ನಮ್ಮ ಚೆಲುವು.
ಉರಿದುರಿದು ಎಣ್ಣೆಯಲ್ಲೇ ಮುಳುಗಿ
ಆರಿಹೋದ ಬತ್ತಿಯಂತಾಯಿತ್ತು,
ಪ್ರೀತಿಯಲ್ಲಿ ಮುಳುಗಿದ ನನ್ನ ಬಾಳು.
ಬರೆಲಾರೆಯೇನೋ ಅಲೆಮಾರಿ ಜಂಗಮಾ?

೩

ಕನಸಿನಲ್ಲಿ ಕಾಣಿಸಿಕೊಂಡ ಜೋಗಿ ಜಂಗಮ
ಏನೊಂದನೂ ನುಡಿದಾಡದೆ
ಸೀದಾ ಪಾದವ ಬೆಳೆಸಿದ ದೇವರ ಕೋಣೆಗೆ.
ಗಬ ಗಬ ನೈವೇದ್ಯ ತಿಂದು
ಬಾಯೊರೆಸಿಕೊಂಡ!
ಭೇದಿಸಲಾರದ ಕತ್ತಲೆಯಲ್ಲಿ-
ಅದು ತನ್ನ ಉಡುಪು ಎಂಬಂತೆ
ಮಾಯವಾದ-
ಅಡ್ಡಗಟ್ಟಿದ್ದ ನನ್ನ ನಿವಾರಿಸಿಕೊಂಡು!

೪

ಈ ದಿನ
ಗರ್ಭಗುಡಿಯಲ್ಲಿ ಪ್ರದಕ್ಷಿಣೆ ಹಾಕುತ್ತಿದ್ದೆ-
ಅಗೋ ಮೂಲೆಯಲ್ಲಿ ನಿಂತಿದ್ದ
ಜಿಂಕೆಗಾಗಿ ಹೊಂಚಿದ್ದ ಹುಲಿಯಂತೆ!

ಒಂದು ಹೆಜ್ಜೆ ಹಿಂದಿಟ್ಟರೂ ಮುಂದಿಟ್ಟರೂ
ಅವ್ವಯ್ಯಾ ಹುಲಿ ಹಾರಿ ಮೈಮ್ಯಾಲೇ ಬರುತ್ತದೆ!

ಥರಥರ ನಡುಗಿ
ಕಣ್ಣಿಗೆ ಕತ್ತಲೆ ಅಡರಿ
ಕೈಯ ನೈವೇದ್ಯ ಜಾರಿ

ಜೋಕೆತಪ್ಪಿ ಕೆಳಗೆ ಬೀಳುವಷ್ಟರಲ್ಲಿ
ಹಾರಿ ಬಂದು ಜಂಗಮ ಕೈಹಿಡಿದು ನಿಲ್ಲಿಸಿದ.

ಶಿವನಿಚ್ಛೆ ಎನ್ನುತ್ತ
ನೈವೇದ್ಯವ ತಗೊಂಡು
ಬಿಲ್ವಪತ್ರಿಯಲೆ ಕೈಗಿಟ್ಟು
ಗರ್ಭಗುಡಿಯಲ್ಲಿ ಮಾಯವಾದ!

೫

ನಿನ್ನ ಬಗ್ಗೆ ಏನೇನೋ ಹೇಳುವರು ಮಂದಿ:
ಒಂದು ಕರೆಗೆ ಓಗೊಟ್ಟು
ಎರಡನೆಯ ಕರೆಗೆ ದನಿಗೊಟ್ಟು,
ಮೂರನೆಯ ಕರೆಗೆ ಓಡೋಡಿ ಬಂದು
ಕರೆದವರೆದುರು ಧುತ್ತೆಂದು ನಿಂತುಕೊಳ್ಳುವಿಯೆಂದು.

ಸಣ್ಣ ದನಿಯಲಿ ಕರೆದೆ ,
ದೊಡ್ಡ ದನಿಯಲಿ ಕರೆದೆ,-
ನಾ ಕರೆದ ಮಾತುಗಳೆಲ್ಲ ಸುತ್ತಿರುಗಿ ಬಂದು
ನನ್ನ ಕಿವಿಗೇ ಅಪ್ಪಳಿಸುತ್ತಿವೆ.

ಎಲ್ಲ ಪ್ರಮಾಣಗಳ ಹೊಲಬುದಪ್ಪುಸುವಿಯಲ್ಲೋ
ಅಲೆಮಾರಿ ಜಂಗಮಾ.

೬

ನಮ್ಮ ನಾಯಿ ಬೊಗಳಿದರೆ,
ಜಂಗಮ ಹೆದರಿ,
ತೇಲುವ ಮುಂಜಾನೆಮೋಡದಂಥ ಕಾವಿಯ
ಬಟ್ಟೆ ಸಮೇತ,

ಅತ್ತಿತ್ತ ಹಾರಾಡಿ ಓಡಾಡುವ ರಭಸಕ್ಕೆ
ವಾಯುಮಂಡಳ ಪ್ರಕ್ಷುಬ್ಧವಾಗುವಂತೆ
ಮಾಡಿದನೆ!

ಆತನ ನೆಗೆತ ಜಿಗಿತ
ಯಾವುದೋ ನೃತ್ಯದ ಹೆಜ್ಜೆಗಳಿಂತಿದ್ದಾವೆ!
ಲಯಬದ್ಧವಾಗಿ ಮ್ಯಾಲೆಕೆಳಗೆ ತೂರಾಡುವ ತೋಳುಗಳು
ದೊಡ್ಡ ಪಕ್ಷಿಯ ಬಲಾಢ್ಯ ರೆಕ್ಕೆಗಳಂತಿವೆ!
ಗಲಿರೆಂದು ನುಡಿದಾಡುತಿದೆ ಕಾಲಿನ ಜಂಗು!
ಕೈಲಾಸದಲಿ ಕುಣಿವ ಶಿವನೇ ಇವನೇನೆ!

ಸಾಲದು ಸಾಲದು ಅಂಗಳ ಈ ಜಂಗಮನಿಗೆಂದು
ನಾಯಿಯ ಹಿಡಿದುಕೊಂಡೆ.

೭

ಕನಸಿಗೆ ಅಕ್ರಮವಾಗಿ ನುಗ್ಗುವ ಆ ಪಡ್ಡೆ ಹೈದನಹ
ನೀಳ ಕೂದಲ ಗಾಳದಲಿ ಬೀಳಿಸಿಕೊಂಬಾಸೆ.
ತೋಳ ಕೋಳದಲಿ ಬಿಗಿದು
ಎದೆಯಲಗಿಂದ ಇರಿದಿರಿದು
ನಲುಗುವಂತೆ ಮಾಡುವಾಸೆ
ಯಲಿ ಅವಿರಾಮಿ ಚಡಪಡಿಸುವೆ
ಅಲೆಮಾರಿ ಜಿಂಗಮನಿಗಾಗಿ.

೮

ಅವನ ಕಡೆಯಿಂದ ಬೀಸಿ ಬರುವ
ಸೂಸುಗಾಳಿಯ ನಡಾವಳಿಯೇ ಬೇರೆ:
ಮೆಲ್ಲ ಮೆಲ್ಲನೆ ಸ್ಪರ್ಶಿಸಿ
ಮುಟ್ಟಿದಲ್ಲಿ ಮುದ್ದಿಸಿ
ಮುದಗೊಳ್ಳುವ ಪ್ರೇಮಿಯ ಹಾಗೆ!
ಅಥವಾ
ಮೈಮರೆಸಿ ಕೆಡಿಸುವ ಅತ್ಯಾಚಾರಿಯ ಹಾಗೆ.

೯

ಲೂಟಿಗೊಂಬ ಈ ಸುಖ ಆಹ ಸಾಲದು ಸಖ
ಬಾಯಾರಿಕೆ ತನ್ನನ್ನೇ ಕುಡಿವುದೆಂದು
ತಿಳಿದೂ ಮತ್ತೆ ಮತ್ತೆ ಕುಡಿವ ಕುಡುಕನಂತಾಗಿದೆ.
ನನ್ನ ಗತಿ. ಸಾವಳಗಿ ಶಿವಲಿಂಗಾ
ಕಳಸಿಬಾರದೆ ಜಂಗಮನ ಒಂದು ಸಾರಿ?

೧೦

ಇರು ಇರು ಬಂದಾನು
ಬಾರದಿನ್ನೆಲ್ಲಿ ಹೋದಾನು?
ಕರೆದವರಿಗೆ ಕರೆದಾಗೆಲ್ಲ ಬಂದವನು
ನೀನು ಕರೆದರೆ ಬಾರದಿರುವನೆ?
ಜಂಗಿನ ಉಲಿ ಕೇಳಿಸಿದರಾಯ್ತು ಆ ಕಡೆಯಿಂದ,
ಅವನು ಬಂದ ಹಾಗೇ ನಮ್ಮ ಬಳಿಗೆ೧

ಹುಟ್ಟಿದಾಗಿನಿಂದ ಕಾದವರಿದ್ದಾರಮ್ಮ, ನಿಂದೇನು ಮಹಾ!
ಕಾದ ಕೆಲವರ ಕಣ್ಣಲ್ಲಿ ಹೂ ಬಿದ್ದು
ಹುಣ್ಣಾಗಿ ಕುರುಡಾಗಿದ್ದಾರೆ! ಅದು ಬೇರೆ ಕಥೆ.
ನನ್ನನ್ನೇ ನೋಡು
ಕೂತಿದ್ದೇನೆ ಹೀಗೇ ಅಂಗೈಯಲ್ಲಿ ತಲೆಯಿಟ್ಟುಕೊಂಡು,
ಅನುಮಾನಗಳನ್ನ ಮೆಲುಕು ಹಾಕುತ್ತ. ಪುಣ್ಯಕ್ಕೆ
ಎಲ್ಲರಿಗೂ ವಿದಾಯ ಹೇಳಿಯೇ ಬಂದಿದ್ದೇನೆ.

ನಮಗೊಂದೆ ಸಮಾಧಾನ;
ತಡ ಮಾಡಿದವರು ನಾವಲ್ಲ.

೧೧

ಮಡುವಿನಲ್ಲಿ ತೇಲಾಡುವ ಕಮಲದ ಹೂ ಕಂಡೆ!
ನೀರಿಗಿಳಿದು ಹಿಡಿಯ ಹೋದರೆ,
ಮೊಳಕಾಲುಮಟ ನೀರಿಗೆ ಹೋಯಿತು ಹೂವು!
ಮೊಳಕಾಲುಮಟ ನೀರಿಗಿಳಿದು ಹಿಡಿಯ ಹೋದರೆ
ಸೊಂಟದಮಟ ನೀರಿಗೆ ಹೋಯಿತು ಹೂವು!
ನೆತ್ತಿಯಷ್ಟು ನೀರಿಗೆ ಹೋಯಿತು ಹೂವು!

ನೆತ್ತಿಯಷ್ಟು ನೀರಿಗಿಳಿದು ಹೂ ತಬ್ಬಿದರೆ
ಶಿವಸುಖರಸವನ್ನರೋ ಮೈತುಂಬ ಎರಚಿ
ಜಲದಲ್ಲಿ ಜಲಜಲ ಬೆವರಿ ನೋಡಿದರೆ
ಹೂವಿನ ಬದಲು ಹಾದರಿಗ ಜಂಗಮಸ್ವಾಮಿಯ
ಕಂಡು ಗಾಬರಿಯಾದೆ!

ನಾಚಿ ನಿಂತವಳ ಸೆಳೆದುಕೊಂಡು
ಆದಿಮದ ಹಂಬಲಗಳ ಅಲ್ಲಲ್ಲೆ ನಿಲಿಸಿ ತಣಿಸುತ
ಮುರಿದ ಮಾತುಗಳ ಕನವರಿಸುತ್ತ
ಮಗ್ಗಲು ಬದಲಿಸಿದ.

ಮಗ್ಗಲು ಬದಲಿಸಿದವನು
ನಾನೂ ಇಲ್ಲ ಅವನೊ?
ಇಲ್ಲವೆ ನನ್ನೊಳಗಿನ ಅವನೊ?

೧೨

ರಾತ್ರಿ
ಆಗೋ ಆ ಮರದಾಚೆ
ಯಾರೋ ಟಾರ್ಚ್ ಹಿಡಿದು ನಿಂತಿದ್ದರು,
ಗಾಬರಿಯಾದೆ!

ಬಾಗಿಲು ಬಡಿಯದೆ ನೇರ
ರೂಮಿನೊಳಗೇ ಬಂದ.
ಆಗಲೇ ಗೊತ್ತಾಯಿತು;
ಬಂದವನು ಚಂದ್ರಮ,
ಅಲ್ಲಲ್ಲ ಜಂಗಮ!

೧೩

ಸಿರಿಗಿರಿಯ ಶಿಖರದ ಮ್ಯಾಲೆ
ಅವನ ಅರಮನೆ,
ಬುಡದಲ್ಲಿ ನನ್ನ ಮನೆ.

ನಾನು ಹತ್ತುತ್ತಿದ್ದೆ ಬೆಟ್ಟದ ಮೆಟ್ಟಿಲನು,
ಆತ ಇಳಿಯುತ್ತಿದ್ದ ಕೆಳಗೆ.

ನದರು ನದರಿಗೆ ತಾಕಿ ಚಕಮಕಿಯ ಕಿಡಿ ತಾಗಿ
ಗೊತ್ತಾಯ್ತು ನಾ ಹುಡುಕುವಾತ ಇವನೆ!

ನಿಂತು ನೋಟವ ನನ್ನ ಮುಖದಲ್ಲೆ ಕೀಲಿಸಿದ
ಮುಗುಳು ನಗೆ ನಗುತ್ತಿದ್ದ ಒಂದೆ ಸವನೆ.
ಗಂಟಲೊಳಗಡೆ ಹೂತ ಮಾತು ಹೊರಬರಲಿಲ್ಲ
ನಾನು ಆತನ ಪರಿಘ ಸುತ್ತುತ್ತಿದ್ದೆ.

೧೪

ನಿನ್ನನ್ನ ಪಂಜರದಲ್ಲಿಟ್ಟಾತ
ಹಸಿರುಗಣ್ಣಿನ ರಾಕ್ಷಸನಾತ.
ಜಂಗಮನ ವಿಷಯ ಆತನಿಗೆ ಗೊತ್ತು!
ಅಗೊ ಬಂದ, ಕೇಳಿದೆಯಾ ಅವನ ಮಾತ?
ಹೊಸನಾತ! ಹೊಸನಾತ!

೧೫

"ಆ ಜಂಗಮನ ಹೆಸರೇನು?"

"ನೀನು ಕಾಡಿಗೆ ಹೋಗಿ
ಯಾವುದೇ ಮರ ನೋಡು:
ಅದರ ಮ್ಯಾಲೆ ಅವನ ಹೆಸರು ಕೊರೆದಿದೆ.
ಮರ ಬೆಳೆದಂತೆ ಅವನ ಹೆಸರೂ
ಬೆಳೆಯುತ್ತಿದೆ-
ನನ್ನಲ್ಲಿ ಮತ್ತೂ ಮಣ್ಣಲ್ಲಿ!"

೧೬

ಆಗದಾಗದಾಗದೆಂದು ಮೂರು ಮೂರು ಮಾತಂದು
ಪೂಜಾಮನೆಯ ಬಾಗಿಲಿಗೆ ಬಂದು ಹೊಸ್ತಿಲಿಗೆ ಕಾಲಿಟ್ಟು
ಪುಡಿ ಧೂಳು ಚೆಲ್ಲಿ,
"ಎಲಗೆಲಗೇ, ನಮ್ಮ ಕಥೆಯಲ್ಲಿ
ಆ ಜಂಗಮನ್ಯಾಕೆ ಇಣುಕಿದ?"
-ಎಂದು ನೊರನೊರನೆ ಕೋರೆ ಹಲ್ಲು ಕಡಿದು

ನೆತ್ತರುಗಣ್ಣು ಕಿಸಿದು
ಕೆಂಚುಮೀಸೆ ಕೆದರಿದ.

೧೭

"ಎಲ್ಲಿದಾನವನು?"
"ಎಲ್ಲಿ ಅಂತ ಹೇಳಲಿ?
ಎಲ್ಲದರಲ್ಲಿದಾನವನು."
"ಏನವನ ವಯಸ್ಸು ಇ?"
"ನಿತ್ಯ ಇಪ್ಪತ್ತೈದು"
"ಎಲ್ಲ ಜಾರಚೋರರ ವಯಸ್ಸೂ ಅಷ್ಟೆ.
ಮೋಸ ಮಾಡ್ತೀಯಾ ಗಂಡನಿಗೆ?"
"ಮೋಸ ಮಾಡುತ್ತಲೇ ಇದ್ದೇನೆ:
ಕಣ್ಣಿಂದ ನೋಡ್ತೇನೆ: ಹೇಸಿಕೆ ಬರುತ್ತದೆ.
ಕಿವಿಯಿಂದ ಕೇಳ್ತೇನೆ: ವಾಕರಿಕೆಯಾಗುತ್ತದೆ.
ಆದರೆ ಸಂತೋಷ ವ್ಯಕ್ತಪಡಿಸ್ತೇನೆ.
ಹೀಗೆ ಪ್ರತಿಸಲವೂ ಹುಸಿ ಸಂತೋಷಗಳ
ಅಭಿನಯಿಸಿ ಮೋಸ ಮಾಡುತ್ತಲೇ ಬಂದಿದ್ದೇನೆ.
ನಿನಗೂ ನನಗೂ."
"ಈಗಲೇ ತುಂಡರಿಸಬೇಕೆನಿಸುತ್ತದೆ."
"ಬೇಗ ಮುಗಿಸು ಇನ್ನಷ್ಟು ಮೋಸ
ಹೋಗುವ ಮುನ್ನ."

೧೮

ಎಡದ ಕೈಯಲಿ ಗುರಾಣಿ
ಬಲದ ಕೈಯಲಿ ಕತ್ತಿ ಹಿಡಿದು,
ಕುದುರೆಯ ನೆಗೆತ ನೆಗೆಯುತಾ,
ಮದ್ದಾನೆಯ ತಾಗು ತಾಗುತಾ,
ಸಿಂಗನ ಕುಣಿತ ಕುಣಿಯುತಾ ಕೇಕೆ ಹಾಕಿದ.

ಮ್ಯಾಲಿನ ಸ್ವಾಮಿಯ
ಕೆಳಗಿನ ಭೂಮಿಯ ನೆನೆದು
ಜಂಗಮನ ಕ್ಷೇಮ ಹಾರೈಸಿದಳು!

೧೯

ಎಚ್ಚರಗೊಂಡೆಯಾ ಮಾದೇವೀ?
ರಾಕ್ಷಸ ಬರುತಿದ್ದಾನೆ!
ನಿನ್ನ ನೀ ಕಾಪಾಡಿಕೊ ಮೊದಲು.
ನೀನೆ ಸಾಕಿದ್ದ ಗಿಣಿ ಬಾ ಎಂದು ಕರೆಯುತಿದೆ,
ಹೊರಡು ಅದರ ಹಿಂದಿನಿಂದ.
ಪತ್ರೀಬನ ಎದುರಾಯಿತೇ-?
ಎಡಬಲ ನೋಡಿಕೊಂಡು ಕಾಲಿಡು ಒಳಗೆ.
ಇಲ್ಲೆಲ್ಲೊ ಕೂತಿದ್ದಾನು ಜಂಗಮನು,-
ಹಕ್ಕಿಪಿಕ್ಕಿಯ ಹಿಕ್ಕೆಯ ಜಡೆಯಲ್ಲಿ ಹಾಕಿಸಿಕೊಳುತ,
ಹಸುವಿನ ಮೊಲೆಯ ಹುಲಿಮರಿಯೊ ಬಾಯಿಗಿಡುತ್ತ.
ಎದ್ದು ಬರಲಾರ ನಿನ್ನ ನೆರವಿಗೆ.

ಮೈ ಮೆತ್ತಿರುವ ಹುತ್ತವ ಕೊಡವಿ
ಜಂಗಮನ ಪಡೆದು
ನಿನ್ನ ಮತ್ತವನ ಕೂಡಲ ಸಂಗಮವಾಗಬೇಕು.
ನೆನಪಿರಲಿ,
ನಿನ್ನ ಕಥೆ ಹಿಂಡಿ
ಬರಿ ಒಂದು ಕಣ್ಣೀರ ಹನಿ ಪಡೆಯಬಾರದು  ನಾವು.
ಅಗೊ ಗುಡಿ ಬಂತು.
ಗರ್ಭಗುಡಿ ಸೇರಿಕೊಂಡು ಚಿಲಕವ ಹಾಕು.
ಜೋಕೆ; ನಡೆ ಒಳಗೆ.

೧೦

ಹಿಗ್ಗಿನ ಬಾಗಿಲು ತೆಗೆದು
ಗರ್ಭಗುಡಿಯ ಒಳಹೊಕ್ಕಳು ಮಾದೇವಿ.
ಅಂಗಾಲು ಮೊದಲಾಗಿ
ನಡುನೆತ್ತಿ ಕಡೆಯಾಗಿ
ತೆಕ್ಕೆ ಹಾದು ತಕ್ಕೈಸಿಕೊಂಡಿತು
ಬೆಳಕು.

“ಜಂಗಮ ಬಂದಿದ್ದೇನೆ;
ಬಾಗಿಲು ತೆರೆ ಭದ್ರೇ.”

ಎಲ್ಲ ಎಲ್ಲದರ ಅಲ್ಲಮ, ನನ್ನ ಜಂಗಮ
ತೋಳಿನಲ್ಲಿದ್ದಾನೆ. ನನಗಿನ್ಯಾರೊ ಬೇಡವೆಂದು
ಶಿವಲಿಂಗದ ಮುಖವ ತನ್ನ ಕಡೆ ತಿರುಗಿಸಿಕೊಂಡು
ಬೆವರೊರೆಸಿದಳು!

**ವಿ.ಸೂ.:** ನಮ್ಮ ಗೋಕಾಕ ಸುತ್ತಮುತ್ತಲ ನಾಡಿನಲ್ಲಿ ನಡೆದ ಕಥೆಯಿದು: ಗೌಡನೊಬ್ಬ ಅನಾಥಳಾದ ಮ್ಲೇಂಛ ಹುಡುಗಿಯನ್ನು ಮತಾಂತರಿಸಿ ಮಾದೇವಿಯೆಂದು ಹೆಸರು ಕೂಗಿ ಮದುವೆಯಾದ. ಆದರೆ ಮಾದೇವಿ ಭಿಕ್ಷಕ್ಕೆ ಬರುತ್ತಿದ್ದ ಒಬ್ಬ ಜಂಗಮನನ್ನು ಇಷ್ಟಪಟ್ಟಿದ್ದಳು. ಗೌಡನಿಗಿದು ಗೊತ್ತಾಗಿ ಜಂಗಮನನ್ನು ಕೊಲೆ ಮಾಡಲು ಹೊಂಚಿದಾಗ, ಓಡಿಹೋದ ಜಂಗಮ ಹಿಂದಿರುಗಿ ಬರಲಿಲ್ಲ. ಮಾದೇವಿ ಗೌಡನಿಗೆ ಹೆದರಿ ಓಡಿಹೋಗಿ ಜಂಗಮನಿರುತ್ತಿದ್ದ ಹಾಳು ದೇವಾಲಯ ಹೊಕ್ಕು ಒಳಗಿನ ಚಿಲಕ ಹಾಕಿಕೊಂಡಳು. ಯಾರು ಕರೆದರೂ ಬಾಗಿಲು ತೆರೆಯದೆ ಅಲ್ಲಿಯೇ ಐಕ್ಯಳಾದಳೆಂದು ಐತಿಹ್ಯವಿದೆ.

ಈ ದುರಂತ ಘಟನೆಯ ಬಗ್ಗೆ ಚಿಕ್ಕಂದಿನಲ್ಲಿಯೇ ಕೇಳಿ ಕರಗಿದ್ದೆ. ಕವಿಮಿತ್ರ ಶಿವಪ್ರಕಾಶ್ ಇದನ್ನು ಬರೆಯಲು ಪ್ರೇರಣೆ ನೀಡಿದ್ದರಿಂದ ಬರೆದೆ. ಅವರಿಗೆ ವಂದನೆಗಳು.

## ಬೇಡರ ಹುಡುಗನ ಬೇಟೆ

ನಮ್ಮೂರ ನೈರುತ್ಯಕ್ಕೆ ನಿರ್ವಾಣೆಪ್ಪನ ಗುಡ್ಡ ,
ಗುಡ್ಡದ ಮ್ಯಾಲೊಂದು ಆದಿಮ ಗವಿ.
ನಿರ್ವಾಣೆಪ್ಪನಿಗು ಮುನ್ನ ಇಲ್ಲಿ ಆದಿಮಾನವ
ವಾಸವಾಗಿದ್ದ.
ಅವ ಬರೆದ ಚಿತ್ರವಿತ್ತು, ಒಳಗಿನ ಗವಿಯಲ್ಲಿ.
ಹೀಗೆ:

ಕರಿಶಿಲೆಯ ಪಡುಮಲೆಯ ಮ್ಯಾಲೆ
ಓಲಗಗೊಂಡಿದ್ದಾನೆ
ಚವತಿಯ ಚಂದ್ರಾಮ ಸ್ವಾಮಿ.
ಕೆಳಗಡೆ ಮೂಲೆಯಲ್ಲಿ ಹರಿಯುತ್ತಿದೆ
ತಿಳಿ ನೀರಿನ  ಝರಿ.
ಅದರಂಚಿಗೆ ಎದ್ದಿದೆ ಕಾಡು,
ಕಾಡಿನ ಮ್ಯಾಲರಳಿವೆ ಮುಗಿಲ ಕಡೆ ಮುಖ ಮಾಡಿ
ಕನಸು ಕಾಣುವ ಹೂವು!
ಕ್ಷಿತಿಜದಂಚಿಗೆ ಕೆಂಪು ವರ್ಣದ ಶಿಖೆ,
ಅದಕಂಟಿ ಬೆಳಕಿನ ಬೂದು ಬಣ್ಣದ ರೇಖೆ.

ಬಲಗಡೆ ಕೆಳ ಮೂಲೆಯಲ್ಲಿ
ಎತ್ತರದ ಪತ್ರಿಮರ,

ಅದರಲ್ಲಡಗಿ ಹೆದೆಯೇರಿಸಿ
ಚಂದ್ರನಿಗೆ ಗುರಿ ಹಿಡಿದಿದ್ದಾನೆ ಬೇಡರ ಹುಡುಗ!
ಅಂದಕ್ಕೆ ಗಂಧವ
ಚಂದಕ್ಕೆ ನಾಮವ ಬರೆದುಕೊಂಡಿರುವ.
ಜಡೆಗೊಂಡು ಜಿಡ್ಡುಗಟ್ಟಿದ ಕೂದಲಿಗೆ
ನವಿಲು ಗರಿ ಮುಡಿದಿರುವ

ಕೈಲಿರುವುದೊಂದೇ ಬಾಣ,
ಖಾಲಿ ಬತ್ತಳಿಕೆ ಬೆನ್ನಿಗಂಟಿರುವ ಚೆಲುವ!
ಇನ್ನೇನು ಬಾಣವ ಬಿಟ್ಟ
ಬಿದ್ದನು ಚಂದ್ರ ಎನೆ,
ಕಾಲಿನ ಬಳಿಯಾಡುತಿದೆ
ಹೆಡೆ ತೆಗೆದ ನಾಗರ ನಯದ ಹಾವಲ್ಲ, ಸಾವು!
ಮಾರುದ್ದ ಮೈಗೆ
ಹುಡುಗನ ತಲೆಯಳತೆಯ ಹೆಡೆ!
ಮಿಂಚು ಹುಳುವಿನ ಹಾಗೆ
ಮಿನ ಮಿನ ಮಿನುಗುತಿವೆ ಕಣ್ಣು!
ನೆಲದ ಮೇಲಾಡುತಿದೆ ಬಾಲ.

ಉಸಿರುಗಟ್ಟಿ ನಿಂತಿದೆ ಮೂಕ ಪ್ರೇಕ್ಷಕ ಲೋಕ!
ಇದ್ದೊಂದು ಬಾಣದಲಿ, ಇರುವಷ್ಟು ಸಮಯದಲಿ
ಚಂದ್ರನ ಗೆಲ್ಲಬೇಕೆ? ಸರ್ಪನ ಕೊಲ್ಲಬೇಕೆ?
ಗುರಿಯ ಬೆರಗಿಗೋ, ಕೆಳಗಿನ ಭಯಕ್ಕೋ
ಸಣ್ಣ ಬಾಲಕನ ಕಣ್ಣು ಉರಿದಾಡುತಿವೆ ಸೊಡರಿನಂತೆ !

ಕರಿಘನ ನಂದಿ ನಿಂತಿದೆ ಕೆಳಗೆ,
ಕೊಂಬಿನಿಂದ ಕೊರೆಯುತ್ತ ಕ್ಷಿತಿಜವನ್ನೆ!
ನಿಮಿರಿದ ಅದರ ಘನಲಿಂಗಕ್ಕೆ ನೆಲವೆ ಗುರಿಯಾದರೆ
ನೆಟ್ಟ ನೋಟಕ್ಕೆ ನಿಸ್ಸೀಮ ನೀಲಿಮವೆ ಗುರಿ;
ಪತ್ರಿಯೆಲೆ ಉದುರುತಿವೆ ಅದರ ಮ್ಯಾಲೆ!
ಬಾಲಕನಿಗೆ ಜಯ ಒದಗಲೆಂದು ಹಾರೈಸಿದ್ದೆ.

ಅವನೊಂದಿಗೆ ನಾನೂ ಕೂತಿದ್ದೆ ರಾತ್ರಿ
ಗುರಿಹಿಡಿದ ನೋಟದಗುಂಟ ನೋಡುತ್ತ,
ನಿಸ್ಸೀಮ ನೀಲಿಮವ ಭೇದಿಸುತ್ತ.
ಅವನವೇ ಬಿಲ್ಲು ಬಾಣಗಳಿಂದ
ಚಂದ್ರನ ಬೇಟೆಯಾಡಿದ್ದೇನೆ ವ್ಯರ್ಥ ,
ಕಾಲನ ಧೂಳಿನಲ್ಲಿ ಮುಚ್ಚಿಹೋಗಿದೆ ಅದೆಲ್ಲ.

ಈಗ ಗವಿಯೊಳಗೆ ಬಂದಿವೆ
ಹೊಸ ಬಣ್ಣ, ಹೊಳೆವ ವಿದ್ಯುದ್ದೀಪ.
ಮಾಯವಾಗಿದೆ ಬೇಡರ ಹುಡುಗನ ಬೇಟೆಯಾಟ.
ಒಂದಾಟ ಮುಗಿದು ಸಿದ್ಧವಾಗಿದೆ ಬಯಲು
ಇನ್ನೊಂದಾಟಕ್ಕೆ.

ಜಯ ಒದಗಲೆಂದು ಹಾರೈಸಿ ಹೊರಗೆ ಬಂದೆ.

## ನನ್ನಪ್ಪ

ನಾವೆಲ್ಲ ಮಲಗಿದ ಮ್ಯಾಲೆ
ಮುದಿಹದ್ದಾಗಿ ಹಾರುತ್ತಿದ್ದ ನನ್ನಪ್ಪ
ಮ್ಯಾಲೆ ಮ್ಯಾಲೆ.
ಕ್ಷಿತಿಜದಿಂದ ಕ್ಷಿತಿಜಕ್ಕೆ
ಅದರಾಚೆಗೆ ಹೋಗಿ ಸೀಮೆಯಂಚಿಗೆ,
ಮ್ಯಾಲಿನಾಕಾಶವ
ಕೆಳಗಿನ ನೆಲವ ಭೇದಿಸುತ್ತಿದ್ದ.
ನಸುಕಿನಲ್ಲಿ ನಾವೆದ್ದು ನೋಡಿದರೆ
ನಿನ್ನೆ ಮಲಗಿದ್ದಲೇ ಇರುತ್ತಿದ್ದ!

ಚಡಪಡಿಸಿದಿರಿ ತಂದೆ ಪಾದರಸದಂತೆ.
ರತಿಯಿಂದ ಸುರಿವ ಸುಖ ಸಾಕೆನಿಸಿ
ಶಿವರತಿಯ ಸುಖವರಸಿ ಹೊರಟಿರಿ ಹೊರಗೆ.
ಸುತ್ತಿಕೊಂಡ ಸುಳ್ಳುಗಳ ಕಳಚಿ
ದೇವರನೆಲ್ಲ ಅವರವರ ನಿಜದಲ್ಲಿ ಕಾಣುವೆನೆನುತ
ವಾರಕರಿ ಹೋದಿರಿ. ದಿಂಡುರುಳಿ ಭಕ್ತಿ ಯ ಮಾಡಿದಿರಿ.
ಕೊನೆಗೆ ಅದಲ್ಲ ಇದಲ್ಲ ಎನುತ
ಸಿಕ್ಕದು ಸಾಲದು ಎಂದು ಹಪಹಪಿಸಿದಿರಿ.

ಪಾದವ ಮುಟ್ಟಿ ನಮಸ್ಕರಿಸಿದೆನೆಂದಿರಿ
ವಿಠ್ಠಲನ ಪಾದಗಳ? ಎಂದೆ:
ಕನಕನಿಗು ಕೃಷ್ಣನಿಗು ಕಿಂಡಿಯಂತರ ಬೇಕು
ಮಗನೇ ಅಂದಿರಿ.

ಕೊನೆಗೊಮ್ಮೆ ಕೈಚಾಚಿ ಆಕಾಶಕ್ಕೆ
ಅಂಗೈಗೆ ಬಿದ್ದಂತೆ ಉರಿಯುವ ಚುಕ್ಕೆ
ಬೆರಗಾಗಿ ಜಲಜಲ ಬೆವರಿದಿರಿ;
ನೇತ್ರಾವತಿ ಕಣ್ಣೀರುಗರೆದಿರಿ.
ಮುಚ್ಚಿದ ಅಂಗೈ ಬಿಚ್ಚಿ
ಸುರಿವ ಮಳೆಯಲ್ಲಿ ಸೀಮೆಗೆಟ್ಟವರಂತೆ
ಕಣ್ಣೀರು ಬೆವರು ನೀರೊಂದು ಮಾಡಿ,
ಬಯಲಾಯಿತೋ ಬಯಲಿನ ಗುಟ್ಟೆಂದು
ಹುಚ್ಚನ ಹಾಗೆ ಕುಣಿದಾಡಿದಿರಿ!
ಬಯಲಿನ ಯಾವ ಗುಟ್ಟುಗಿಟ್ಟಿತು ನಿಮಗೆ?
ಎಲ್ಲ ಎಲ್ಲವ ಹೇಳಿ ಹಂಚಿಕೊಂಡವರು
ಇದ ಹೇಳಲಿಲ್ಲ ನನಗೆ
ಹೋದಿರಿ ತಂದೆ ಹಾಗೇನೆ.

ನೀವು ಹೋದದ್ದಕ್ಕಲ್ಲ,
ನೀವು ಹೋಗುವಾಗ ನಿಮ್ಮ ಬಳಿ
ನಾನಿರಲಿಲ್ಲವಾದ್ದರಿಂದ
ದುಃಖವಾಗುತ್ತದೆ ತಂದೆ.
ಭಕ್ತಿಯ ನಮಸ್ಕಾರ ನಿಮಗೆ.

## ಕೌಜಲಗಿ ನಿಂಗವ್ವ

ವಿ.ಸೂ. ಕೌಜಲಗಿ ನಿಂಗವ್ವ ಶ್ರೀಕೃಷ್ಣಪಾರಿಜಾತದ ದೊಡ್ಡ ಕಲಾವಿದೆ, ಅಷ್ಟೇ ದೊಡ್ಡ ಸಂತಳು ಕೂಡ. ಕಳೆದ ಶತಮಾನದವಳು. ಅಂದಿನ ಶ್ರೀಕೃಷ್ಣ ಪಾರಿಜಾತಕ್ಕೆ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಅಪಾರ ಜನಪ್ರಿಯತೆ ತಂದುಕೊಟ್ಟವಳು. ಶ್ರೀಕೃಷ್ಣ ಪಾರಿಜಾತಕ್ಕೆ ನಿಂಗವ್ವನ ಆಟವೆಂದೇ ಖ್ಯಾತಿಯಿತ್ತು. ಒಂದು ಸಲ ಆಕೆಯ ಕಂಠ ಕೆಟ್ಟುಹೋಗಿ ಹಾಡುವುದೇ ಅಸಾಧ್ಯವಾಗಿದ್ದಾಗ ಆಟ ಬಿಟ್ಟಳು. ಕೊನೆಗೆ ಗುರುವಿನ ನೆನಪಾಗಿ ತೌರಿಗೆ ಬಂದು ಗುರುಕೃಪೆಯಿಂದ ಕಳೆದುಕೊಂಡಿದ್ದ ಹಾಡನ್ನು ತಿರುಗಿ ಪಡೆದಳೆಂದು ಐತಿಹ್ಯವಿದೆ. ಆ ಸಂದರ್ಭದ ಪದ್ಯವಿದು.

ಗುರು: ಮಾತು ಮಾತಿಗೆ ಒಮ್ಮೆ ಉಸಿರುಗರೆಯುತ್ತಿರುವೆ
ಸೋತು ಮಾತಾಡುತ್ತಿ ಯಾಕೆ ಮಗಳೆ?

ಭೇದಿಸಲರಿಯೆನು ನಿನ್ನ ವೇದನೆಯನ್ನು
ಹೇಳು ನೀ ಏನನ್ನು ಕಳೆದುಕೊಂಡೆ?

ನಿಂಗವ್ವ: ಹಕ್ಕಿಯ ದನಿಯನ್ನ ಕಾಡಿನ ಹಸಿರನ್ನ
ಕಣ್ಣಿನ ಬೆಳಕನ್ನ ಕಳೆದುಕೊಂಡೆ.
ಸತ್ಯವ ಕಳಕೊಂಡೆ ಆತ್ಮವ ಕಳಕೊಂಡೆ
ಹಾಡೂವ ಹಾಡನ್ನೆ ಕಳೆದುಕೊಂಡೆ.

ಗುರು: ಇದೇ ಮಣ್ಣಿನ ಮಗಳು ಇಲ್ಲಿಯೇ ಬೆಳೆದಿದ್ದೆ
ಇದೆ ಕಾಡಿನಂಗಳದಿ ಹಾಡು ಕಲಿತೆ
ಕಲಿತ ಹಾಡುಗಳನ್ನ ತೌರಿನ ಮುಡಿಗಿರಿಸಿ
ಕುಣಿದ ಹಾಡುಗಳನ್ನ ಎಲ್ಲಿ ಮರೆತೆ?

ಹಸುಗಾಯಿ ಹಣ್ಣಾಗಿ ಮಾಗಿರುವ ಅನುಭವದ
ಕಳೆಯುಂಟು ಮುಖದ ಮ್ಯಾಲೆ.
ಹಾಗೆಯೇ ನಿನ ಹಾಡು ಮೊಗ್ಗು ಮಲ್ಲಿಗೆಯಾಗಿ
ಮತಿವಂತರೆದೆಯಲ್ಲಿ ಸುರಿದವಲ್ಲೆ

ನಿಂಗವ್ವ ಎಂಬಾಕಿ ಸೀಮೆಗೇ ದೊಡ್ಡಾಕಿ
ಇಡಿ ನಾಡಿಗೇ ಅಧಿಕ ನಿನ್ನ ಕೀರ್ತಿ.
ಚಿಕ್ಕೆ ಚಂದ್ರಾಮರು ಹೆಚ್ಚು ಹೊಳೆಯುತ್ತಾರೆ
ನೀ ಹಾಡಿದರೆ ಅವರ ಎದುರಿನಲ್ಲಿ.

ತೌರಿಗೇ ಬಂದಿರುವೆ ಹಿಂದಿರುಗಿ ಇನ್ನೊಮ್ಮೆ
ಕಳೆದ ಹಾಡುಗಳನ್ನ ಪಡೆಯಲಿಕ್ಕೆ.
ಹಾಡು ನಿನಗೂ ಬೇಕು, ಹಾಡಿಗೂ ನೀ ಬೇಕು
ಮರವಿಲ್ಲದೇ ಬೆಂಕಿ ಬೆಳಗಲುಂಟೆ ?

ನಿಂಗವ್ವ: ಚಿತ್ತಕ್ಕೆ ಹಿತಕರದ ಕೃಪೆಯ ಮಾಡಿದಿ ಗುರುವೆ
ನಿನ್ನ ಮಾತೆಂಬುದು ಹೊಳೆವ ಜ್ಯೋತಿ
ಕಳೆದ ಹಾಡುಗಳನ್ನ ಗುರುತಿಸಿ ಪಡಕೊಂಡೆ
ಗುರುವಿನ ಸನ್ನಿಧಿಯ ಬೆಳಕಿನಲ್ಲಿ.

# ಶಿವಾಪುರ

ಸಣ್ಣ ಹಳ್ಳಿ ಅದು, ಹೆಸರು ಶಿವಾಪುರ-
ನೀವು ಕೇಳೇ ಇಲ್ಲ.
ನಿಮ್ಮ ನಕಾಶೆಯ ಯಾವ ಮೂಲೆಯಲು
ನಮ್ಮ ಊರು ಇಲ್ಲ.

ಸಣ್ಣ ಬೀದಿಗಳು ಊರು ಬಿಟ್ಟು
ಬೇರೆಲ್ಲು ಹೊಗುವುದಿಲ್ಲ.
ಕಾಲು ದಾರಿಯಲಿ ಒಳಗೆ ಬರಬೇಕು
ಬೇರೆ ದಾರಿ ಇಲ್ಲ.

ಒಳಗೆ ಬಂದರೂ ನಿಮಗೆ ಸಿಗದು
ನಾವಿರುವ ಕೇಂದ್ರ ಬಿಂದು.
ಎಲ್ಲಿ ನಿಂತರದೆ ಕೇಂದ್ರ , ತಿರುಗುವುದು
ಪರಿಘ ಅದರ ಸುತ್ತು.

ಸಿಟಿಗೆ ಹೋಲಿಸಿದರಂತು ನಮ್ಮ ಈ
ಪರಿಘ ಚಿಕ್ಕದೇನೆ.
ಅವರು ಇವರೊಂದಿಗ್ಯಾಕೆ ಹೋಲಿಕೆ?
ನಮ್ಮ ಬಾಳು ನಮಗೆ.

ಇಲ್ಲಿ ಘಟನೆ ಘಟಿಸುವುದೆ ಇಲ್ಲ.
ಇತಿಹಾಸಕಿಲ್ಲ ಕೆಲಸ.
ಸದಾ ಹರಿಯುವುದು ನದಿಯು ಮಾತ್ರ
ಕಥೆ ಹುಟ್ಟತಾವು ದಿವಸ.

ನಮಗೆ ನಮ್ಮ ದೇವರುಗಳುಂಟು
ರಾಕ್ಷಸರು, ದೆವ್ವ , ಭೂತ.
ನಮ್ಮ ಕೊರತೆಗಳ ಭರ್ತಿ ಮಾಡುವರು
ಅವರೆ ಮುಂದೆ ನಿಂತು.

ಕ್ಷಿತಿಜದಾಚೆಗೂ ನಂಟು ಬೆಳೆಸಿದವ
ರುಂಟು ನಮ್ಮ ನಡುವೆ.

ಏನು ಸಿಕ್ಕರೂ ತಂದು ಹಂಚುವರು
ಚಿಂತೆಯಿಲ್ಲ ನಮಗೆ.

## ಪಾರಂಬಿ ಮರ ೧

ದೂರದಲ್ಲಿ
ಮುಖದ ಮ್ಯಾಲೆ ಜಡೆಯೆಳೆದುಕೊಂಡು ಕೂತ
ಹಟಮಾರಿ ಜಡೆಮುನಿಯಂತೆ ಕಾಣುವುದಲ್ಲ,-
ಅದೇ ಪಾರಂಬಿಮರ!
ಹೇಳುದಕೆ ಸಾಧ್ಯವೆ  ಈ ಮರದ
ಪ್ರಾಬಲ್ಯವ?
ನಂಬುವುದೂ ಬಿಡುವುದೂ ನಿಮ್ಮ ಕರ್ಮ-
ಬುದ್ಧನಿಗೆ ಬೋಧೆ ಮಾಡಿದ್ದು ಇದೇ ಮರವೆಂದು
ನಾವಂತೂ ನಂಬಿದವರು.

ಈ ಅನಾಧಿಮರದ ವಯಸ್ಸನ್ನ ಅಳತೆಮಾಡಿ
ಹೇಳಬಲ್ಲವರಿನ್ನೂ ಹುಟ್ಟಿಲ್ಲ ಈ ಸೀಮೆಯೊಳಗೆ.
ಸುತ್ತಳತೆಯೇ ಹತ್ತಾಳು ಕೈಕೈ ಮಿಲಾಯಿಸಿ
ತಬ್ಬಿಕೊಳ್ಳುವಷ್ಟಿತ್ತು!
ಕಾಲನ ಎಲ್ಲ ವರಸೆಗಳನ್ನ, ಅವನೆಲ್ಲ ಗಾಳಿ ಬಿರುಗಾಳಿಗಳನ್ನ
ಅಡ್ಡಾದಿಡ್ಡಿ ಬೆಳೆದು ಟೊಂಗೆ ಟಿಸಿಲು, ಇಳಿಬಿದ್ದ ಬಿಳಲು,
ಗಂಟುಗೆಲ್ಲುಗಳಿಂದ ಎದುರಿಸಿ ಗೆದ್ದು
ತಿಳಿಹಸಿರ ನಗುತ, ಸಾವಿರ ವರ್ಷ ಕೂತಿದ್ದ
ಮರವಿದು!

ಭೂಮಿಯ ಇನ್ನೊಂದು ತುದಿತನಕ ಇಳಿದ ಬೇರು
ನಮ್ಮೆಲ್ಲನೇಕರ ಮನೆಗೋಡೆಗಳಲ್ಲೂ ಎದೆಗಳಲ್ಲೂ
ಚಿಗುರಿ ನಕ್ಕದ್ದಿದೆ.
ಇಳಿಬಿದ್ದ ಜಡೆಗೇ ಕಣ್ಣು ಮೂಡಿ
ನೇಣು ಹಾಕಿಕೊಂಬಿವರ ಹೆದರಿಸಿ ಬುದ್ಧಿ ಹೇಳಿದ್ದಿದೆ.
ನಾವು ಮಕ್ಕಳೂ ಹಕ್ಕಿಗಳಂತೆಯೇ ಮರದ ಒಕ್ಕಲು.
ಹಗಲು ಹೊತ್ತು.
ನಾವಾಡುವ ಅಡಗುವ ಕೂಡುವ ನೋಡುವ
ಆಟ ಮಾಟ ಕೂಟಂಗಳಿಗೆ ಮರವೇ ಆಸರೆ.

ಸಂಜೆಗೆಂದರೆ ಪಾರಂಬಿಮರ ನಮ್ಮನ್ನ ಕೂಗಿ ಕರೆದು
ಗಕ್ಕನೆ ಮಕ್ಕೊಳ್ಳಿರೋ ಮಕ್ಕಳೇ ಎಂದರೆ-
ಆಗಲೂ ನಾವು ಆಟದಲ್ಲಿ ಮೈಮರೆತರೆ,

ಕೊಂಬುಗಾಳಿಯ ಬೀಸಿ ಎಲೆಯಲುಗಿ ಗುಮ್ಮನ ಕೂಗಿದರೆ,
ಮನೆಗೋಡಿದ ನಾವು ಅಗಲೂ ಕಣ್ಣು ಮುಚ್ಚದೆ
ಹಾಗೇ ದೀಪ ಕಳೆದರೆ ,

ಕಿಡಿಕಿಯಲ್ಲಿ ಜಡೆಮಾರಿ ಬಂದು
ಗುಡುಗುತ್ತಿದ್ದನು ಜಡೆಮುನಿ:
“ಸಪನಿದ್ದೆಯೆಂದರೆ ಏನಂದುಕೊಂಡಿರೋ?
ಒಳಗನ್ನ ನೋಡುವಿನ್ನೊಂದು ಕಣ್ಣು!” ಎಂದು ನಂಬಿಸಿ
ಕಣ್ಣು ಮುಚ್ಚಿಸಿ ಕತ್ತಲೆಯಲ್ಲಿ ತೋರಿಸುತ್ತಿದ್ದ
ನಾವರಿಯದ ಲೋಕಗಳನ್ನ!
ಕೊಂಬು ಕೋರೆಹಲ್ಲಿನ ರಾಕ್ಷಸರನ್ನ!
ಭೂತ ಬೇತಾಳ ಸೇಡುಮಾರಿಯರನ್ನ!
ಹಸಿರುಗಣ್ಣಿನ ಯಕ್ಷ ಯಕ್ಷಿಯರನ್ನ!
ಹಕ್ಕಿಗಳಾಗಿ ಶಕುನ ಕೂಗುವ ಕುಲದ ಹಿರಿಯರನ್ನ!

ಕೆಂಡದ ಮಳೆಗು ಜಗ್ಗದ ಈ ಮರದ ಮ್ಯಾಲೆ
ಹುಲಿಯ ನೆರಳು ಬಿದ್ದಾಗಲೇ ನಡುವಿನ ಸುಳಿಯೊಣಗಿತ್ತು.
ನನಗೆ ನೆನಪಿದ್ದಂತೆ ಅಮವಾಸ್ಯೆಯ ದಿನ
ಕಡಿದರು ಈ ಮರವ ಬೆಳಗಾವಿಯ ಜನ.
ಮಾರನೆಯ ದಿನ ಯುಗಾದಿಯಂದೇ ಸತ್ತ ಕರಿಯಜ್ಜ.
ಮರವ ಈಗ ಚಿಗುರಿ ಆಳುದ್ದ ಬೆಳದುದ ನೋಡಿ
ನಿಬ್ಬೆರಗಾದೆ.
ಪಾರಂಬಿ ಮರದೆಲೆ ಕಣ್ಣೊರೆಸಿಕೊಂಡು
ಹೊಸ ಹಾಡಿಗೆ ದನಿಗೂಡುತ್ತಿದೆ.
ಊರ ನೆತ್ತಿಯ ಮ್ಯಾಲೆ  ಈಗಲೂ
ಅಪರಿಚಿತ ಹದ್ದಿನ ನೆರಳು ಹಾರಾಡುತ್ತಿದೆ!

# ಪಾರಂಬಿ ಮರ ೨

ಪೆನ್ನು ತಗೊಂಡು
ಬಿಳಿಯ ಹಾಳೆಯ ಮ್ಯಾಲೆ
ಪಾರಂಬಿ ಮರವೆಂಬ ಶಬ್ದವ ಬರೆದು ನೋಡು:

ಕ್ಷಣದಲ್ಲಿ ಬೇರಿಳಿದು
ಗಿಡ ಬೆಳೆದು ಹೆಮ್ಮರವಾಗಿ
ರೆಂಬೆ ಕೊಂಬೆಯ ಹರಹಿ
ವಿಸ್ತಾರವಿಪಿನವಾಗಿ-
ಋತುಮಾನಗಳಿಗೆ ತೆರೆದುಕೊಂಡಿತೋ?
ಈಗ ತಗೊ:
ಚಿಗುರ ಮೊಗ್ಗಿನ ಹಿಗ್ಗು  ಕಾಡ ತುಂಬ!
ಘಮಘಮಾ ಚೈತ್ರಗಳ ವಿಜಯೋನ್ಮಾದ,
ದುಂಬಿ ದುಂದುಭಿಯ ಕಹಳೆ ಕಂಸಾಳೆ,
ಮರದ ನೆರಳಿನ ಕೋಲು ಬೆಳಕಿನಲ್ಲಿ
ಬಣ್ಣ ಬಣ್ಣದ ಬಯಲಾಟದ ಕಲೆ!

ಗೂಡು ಕಟ್ಟುವ ಗೀಜಗ,
ಹಿಗ್ಗ ಸೂಸಿ ಆಕಾಶದವಕಾಶವ ತುಂಬುವ ಗೊರವಂಕ,
ಗರಿಗೆದರಿ ಹಾರಿ ನಭದಲ್ಲಿ ಮಿಂಚಿನ ಗೆರೆ ಎಳೆವ,
ಕೂಗಿ ನೀಲಿಮದಲ್ಲಿ ಮೌನ ಗೀಚುವ
ಹಕ್ಕಿಗಳ ನೆಲೆ.
ಮರದಲ್ಲಿ ಬೆಳಕಿಲ್ಲದಲ್ಲಿ ಜೋತು ಬಿದ್ದಿವೆ
ಬೇತಾಳ ಬಾವಲಿಗಳ ಬಲೆ.

ಸಂಜೆಯಾಯಿತೆ?
ಹಗಲಿರುಳು ಬೆರೆಯುವ ಬೂದಿ ಬೆಳಕಿನಲ್ಲಿ
ಬಿಳಲುಗಳ ಇಕ್ಕಟ್ಟಿನಲ್ಲಿ
ಪರಸ್ಪರ ಹಸ್ತ ಹೊಸೆವ, ಪಿಸುನುಡಿದು ಕಿವಿ ಕಚ್ಚುವ
ಬೆರಳು ಹೆಣೆವ, ತೋಳಕೋಳದಲಿ ನಲುಗುವ
ನೀರನುಭವಿ ಬಾಲ ಬಾಲೆಯರ
ತಿಕ್ಕುವುಕ್ಕುವ, ಕಚ್ಚಾಡಿ ಎಂಜಲು ನೆಕ್ಕುವ
ಸುಖ ಪಾರಂಬಿಗೆ!

ಸೊಕ್ಕಿದ ಗೂಳಿ, ಹುಯ್ಯೆನುವ ಗಾಳಿ ಬೀಸಿ
ಧೂಳೆಬ್ಬಿಸಿ ದಿಕ್ಕುದೆಸೆ ಇಲ್ಲದೆ ನೆಗೆದಾಡಿತೆ?
ಹಸಿರೆಲೆಗಳ ಮರ್ಮರ,
ಒಣಗಿದೆಲೆಗಳ ಸರಸರ,
ಹಸುಗಾಯಿ ಹಣ್ಣಾಗಿ ಮಾಗಿದನುಭವದ ಕಳೆ
ಮುಖದ ಮ್ಯಾಲೆ!
ಈ ಮರವೀಗ
ಹದ್ದಿಗೂ ನೆಲೆ, ಹಾವಿಗೂ ನೆಲೆ!

ಈಗ ಹೇಳು : ಪಾರಂಬಿಯ ಮರವ
ನಾನು ಬರೆದೆನೊ?
ನನ್ನನ್ನ ಮರ ಬರೆಯಿತೊ?

## ಘಟಪ್ರಭಾ ನದಿ

ನಮ್ಮೂರೆಂದರೆ ಘಟಪ್ರಭೆಯೆಂಬ ನದಿ.
ಓಂಪ್ರಥಮದಲ್ಲಿ ಈ ನದಿಯಲ್ಲಿ
ಕಾಲಿಳಿಬಿಟ್ಟು ಕೂತದ್ದೇ ನಮ್ಮ ಹಳ್ಳಿ!

ಎಷ್ಟು ತಿಳಿಯಾಗಿತ್ತು ನಮ್ಮೂರ ಹೊಳೆ ಆಗ!
ಹೆಸರು ಗೊತ್ತಿಲ್ಲದ ಹಸಿರು ದೇವರೆಷ್ಟೋ ಮಂದಿ
ನದಿಯಲ್ಲಿ ನೀರಾಟವಾಡಿದುದ ನಾವೆ ಕಂಡಿದ್ದೇವೆ!
ದಡದಲ್ಲಿ ಜಂಬುನೇರಳೆ ಹಣ್ಣು,
ಕೆಳಗೆ ತಿಳಿನೀರಲ್ಲಿ ಸಾವಿರಾರು ಕಣ್ಣು।
ಹಗಲು ಸೂರ್ಯನ ಮುಖವಾಡವ ಹರಿದು ಹಂಚಿ
ಅಣಕಿಸಿ ನಗುವ ನೀರು;
ಬಾಗಿ ಮುಖ ನೋಡಿಕೊಂಬ ಮುಗಿಲು
ಹೊಳೆವ ಬೆಳ್ಳಕ್ಕಿಗಳ ಸಾಲು ಮುಗಿಲೊಳಗೆ ತೇಲಿದರೆ
ಕೆಳಗೆ ನೀರ ನೀಲಿಮದಲ್ಲಿ ಮಲ್ಲಿಗೆಯ ಮಾಲೆ।
ರಾತ್ರಿಗೆಂದರೆ ಚಂದ್ರಾಮ ತನ್ನಂಗಳದಿಂದ ಕೆಳಗಿಳಿದು ಬಂದು
ತಾರಾಪರಿವಾರದೊಂದಿಗೆ ನೀರಾಟವಾಡಿದರೆ, ಅರೆ ಅರೆ
ತಾರೆಗಳ ಅವು? ರಾತ್ರಿಯ ಕಣ್ಮಣಿಗಳು।
ಅದು ಮುಳುಗಿ ಇದು ಎದ್ದು

ಝುಗಮುಗ ಹೊಳಪಿನ ನಗೆಗಳ ಎರಚಾಡಿ
ಕುಣಿವ ಆನಂದಗಳು!

ಕವಿಸಮಯದ ಕಮಲಗಳಿರಲಿಲ್ಲ ನದಿಯಲ್ಲಿ,
ಈ ಜಾಡುತಿರಲಿಲ್ಲ ಹಂಸಗಳು;
ಈಜುತ್ತಿದ್ದವರು ನಾವೇ, ನನ್ನೋರಗೆಯ ಪಡ್ಡೆ ಹುಡುಗರು.

ಈಜುವ ನಮ್ಮಲ್ಲಿಯ ಒಬ್ಬಿಬ್ಬರಿಗೆ
ದೂರದ ರಾಜಕುಮಾರಿಯ ಬಂಗಾರದ ಕೂದಲು ಸಿಕ್ಕಿದ್ದಿದೆ,
ಪಾತಾಳದ ನಾಗಿಣಿಯರ ತೋಳಕೋಳದಲಿ ಬಂದಿಯಾಗಿ
ನಮ್ಮಲ್ಲೊಬ್ಬ ಪಾತಾಳ ಕಂಡದ್ದಿದೆ!
ಬೆಳ್ದಿಂಗಳಲ್ಲಿ ದೇವಲೋಕದ ಏಳು ಕನ್ಯೆಯರು
ಇಲ್ಲಿ ಜಲಕ್ರೀಡೆಯಾಡಿ,
ಕಿರಿಯಳ ಬಟ್ಟೆಯ
ನಮ್ಮೂರ ಗೌಡರ ಕಿರಿಯ ಮಗ ಕದ್ದು,
ಉಳಿದವರು ಪರಾರಿಯಾಗಿ ಅವಳಿಲ್ಲೇ ಉಳಿದು,
ಮದುವೆಯಾಗಿ ತೋಟದಲ್ಲಿ ಮನೆ ಕಟ್ಟಿಕೊಂಡಿದ್ದರಲ್ಲ?
ಆ ಮನೆಯಿನ್ನೂ ಹಾಗೇ ಇದೆ।

ಹುಣ್ಣಿಮೆಯ ದಿನ ಪೂರ್ಣಚಂದ್ರ
ಬೆಳ್ಳಿಮೀನಾಗಿ ಈಜುವನೆಂದು ನಂಬಿ,
ಬೆಸ್ತರ ಹುಡುಗ ಚಂದ್ರನ ಹಿಡಿಯಲು ಹೋದವನು
ತಿರುಗಿ ಬಾರದೆ, ಹರಿದ ಬಲೆ, ಮುರಿದ ಹುಟ್ಟು
ತೇಲಿ ಬಂದದ್ದು ಸಹ ಇದೇ ನದಿಯಲ್ಲಿ!

ಈ ಮಧ್ಯೆ ನಡೆದ ಕರ್ಮಂಗಳ ಕಥೆಯನೇನ ಕೇಳುವಿರಯ್ಯ?
ಹೇಳಲಿಕ್ಕಿದೆ ಬೇಕಾದಷ್ಟು,
ಈಗಿಷ್ಟು ತಿಳಿಯಿರಿ  ಸಾಕು:
ನಮ್ಮ ನದಿಯ ಯೌವನವಾಗಲೇ ದುಂದು ವೆಚ್ಚವಾಗಿ
ತಂಗುಳಾಗಿದೆ ನೀರು.
ವಿಧವೆಯ ಮುಖದಂತೆ ಮೂಡುತ್ತದೆ ಮುಗಿಲು.
ಸೊಕ್ಕಿ ಉಕ್ಕುತ್ತಿದ್ದ ಹರೆಯದ ತೆರಗಳೀಗ-
ಸುಕ್ಕಿನ ಗೆರೆಗಳಾಗಿವೆ!
ಮುದಿಮುಖದ ಮೂಳೆಗಳು ಮುಂಚಾಚಿ ಕಾಣಿಸುವಂಥೆ
ತಳದ ಕಲ್ಲುಬಂಡೆಗಳು ಕಾಣಿಸುತ್ತಿವೆ;

ಹನ್ನೆರಡಾಳುದ್ದದ ನದಿಯೀಗ ಹರಿಯುತ್ತಾಳೆ
ಬಚ್ಚಲು ಮೋರಿಯ ನೀರಿನ ಕಳ್ಳ ಹೆಜ್ಜೆಗಳಲ್ಲಿ!
ಬೇಟೆಗೊಂಬ ಮಿಕದ ಹುಷಾರು ನಡಿಗೆಯಲ್ಲಿ!
ಅವಳ ಭಾವದರ್ಪಣದಲ್ಲಿ
ನಮ್ಮ ಮುಖ ಮೂಡುವುದಿಲ್ಲ,
ಮುದಿಮೋರೆಯಲ್ಲೀಗ
ಬಿಳಿಯ ನಗೆ ಹೊಳೆಯುವುದಿಲ್ಲ,
ಮೊದಲಿನಬ್ಬರವಿಲ್ಲ, ಧುಮುಕುವ ರಭಸವಿಲ್ಲ.

ಆಗೊಮ್ಮೆ ಈಗೊಮ್ಮೆ ರಭಸದಲಿ ಹರಿಯೋದಿದೆ-
ಹಾಗೆ ಹರಿದದ್ದು ನೆರೆನೀರೊ? ಕಣ್ಣೀರೊ?
ಹೇಳಲಾರೆ.

## ನಾನು ಮತ್ತು ಚಂದ್ರು ಅಥವಾ ಎಲ್ಲಿದೆ ಶಿವಾಪುರ?

೧

ನಮ್ಮೂರಿಗೆ ಹೋಗಿದ್ದಾಗ
ಆಕಾಲ ಮಳೆ ಸುರಿಯುತ್ತಿತ್ತು ಒಂದೆ ಸಮ.
ಸರುವು ನಿಂತ ಮ್ಯಾಲೆ  ಊರೊಳಗೆ ಹೋದರಾಯ್ತೆಂದು
ಅಗಸೆ ಬದಿಯ ಯಕ್ಷಿಯ ಗುಡಿಯಲ್ಲಿ
ಆಸರೆಗೆ ನಿಂತೆ:

ಏನಾಗಿದೆ ಶಿವನೆ ಈ ಗುಡಿಗೆ?
ಹುಲ್ಲು ಬೆಳೆದಿದೆ ಸೂರುಗಳ ಮ್ಯಾಲೆ!
ಗೆದ್ದಲು ಕಟ್ಟಿದೆ ಬಾಗಿಲುಗಳಿಗೆ!
ಅಲೆ ಅಲೆ ಜೇಡ ಬಲೆ ಮೂಲೆಗಳಿಗೆ!
ಮಳೆ ಮೋಡಗಳಿಂದಾಗಿ ಬಾಡಿದ ಬೆಳಕಿನಲ್ಲಿ ಮೌನದ ಹೆಣ ಮಲಗಿದೆ೧

ಬಹಳ ಹೊತ್ತು ನಿಂತು ನೋಡಿದರೆ
ಮೂಲೆಯಲ್ಲೊಬ್ಬ ಬಾಲಕ ತೊಯ್ಸಿಕೊಂಡು
ಮುದುಡಿ ನಡುಗುತ್ತಿದ್ದ.
ಏಳೆಂಟು ವರ್ಷದ ಪೋರ;
ಈ ಹುಡುಗನ್ನ ಎಲ್ಲೋ ನೋಡಿರುವೆನಲ್ಲಾ ಎನ್ನಿಸಿ
ಬಾರೋ ಅಂದೆ, ಬಂದ.

ಕೈಲೇನೊ? ಅಂದೆ. ಅಂಗೈ ತೆರೆದ.
ಬಣ್ಣದ ಗೋಲಿಗಜಗ ಕಂಡುದೇ ತಗೊಂಡು
ಒಂದು ಕೈ ಆಡಿದೆ ನೋಡು-
ಚಾಲಾಕಲಿ ಹುಡುಗ ನನ್ನೊಂದಿಗೆ
ಗೋಲಿಯನಾಡತೊಡಗಿದ.
ಕಲ್ಲಾಗಿದ್ದ ಯಕ್ಷಿ
ಭುಜದ ಮ್ಯಾಲಿನ ಗಿಣಿಯ ಮೈ ಸವರಿದಳು!
ಆಟದ ಹುಕಿ ಮೈತುಂಬಿ-ಆಮ್ಯಾಲೆ
ಗೋಲಿಗಳೇ ನಮ್ಮನ್ನಾಡಿಸತೊಡಗಿದವುಇ.

೨

ಇಂತು ಗೋಲಿಗಳಿಗೆ ಬೆಲೆಗಳ ಕಟ್ಟುತಾ,
ಬೆಲೆಗಳಿಂದ ಗೆಲ್ಲುತಾ ಸೋಲುತಾ,
ರಾಜ್ಯಗಳ ಕಟ್ಟುತಾ ಕೆಡವುತಾ
ಪೋರನ ಆರು ಗೋಲಿಯನಾಗಲೇ ಗೆದ್ದು
ಅವನರ್ಧ ರಾಜ್ಯದ ವಾರಸುದಾರನಾಗಿದ್ದೆ;
ಅರಸುತನ ಇನ್ನೂ ಗಿಟ್ಟಿರಲಿಲ್ಲ.

ಅವನ ಜೇಬಿನಲ್ಲಿನ್ನೂ ಚದುರಂಗ ದಳವಿತ್ತು,
ಆರು ಖಂಡದ ಅಖಂಡ ಗಜಗಿನ ನಿಧಿಯಿತ್ತು!
ಕೈ ಚಳಕದ ಕಾಳಗ ರಂಗೇರಿತ್ತು.

ನನ್ನ ಗಜಗಿನ ಗಜದ ಕಾಲು ತಾಗಿ
ಅವನ ಕುದುರೆ ಕಾಲಾಳಿನ ಗೋಳು ಹೇಳತೀರದು.
ಒಂಟೆಯೋ ಬಂಟನೋ ಆಪತ್ತಿಗಾಗುವುದರೊಳಗೆ
ರಾಜನ ಕತ್ತಿಗೆ ನನ್ನ ಕಾಲಾಳಿನ ಕತ್ತಿ ತಾಗಿ
ಅಸುನೀಗಿ,
ಇಗೋ ಶರಣಾಗತ ರಾಜ ಭೂಗತನಾದ೧
ಮಳೆಯ ರೂಪಕ ಅವನ ಕಣ್ಣಲಾಗಲೇ
ಕುದಿಯುತ್ತ ಸುರಿಯಲು ಹಾರೈಸುತ್ತಿತ್ತು!

೩

ಅಳಬೇಡವೋ ಹುಡುಗ, ಗೆದ್ದುದು ನನ್ನ ಕುತಂತ್ರ;
ಸೋತವನಲ್ಲ ನೀನು.

ಎಷ್ಟು ಚೆನ್ನಾಗಿ ಆಡುವಿಯೋ ಮಾರಾಯಾ!
ಅಂಗಾಲಿನಿಂದ ನೆತ್ತಿಯ ತನಕ
ಮನುಷ್ಯರಣ್ಣಾ ನಿನ್ನವರು.
ನನ್ನವರೋ-ಆಗಲೇ ಮರಗಟ್ಟಿ ರೋಬಟ್ಟಾದವರು,
ಹೃದಯ ಮಿಡಿಯುವುದಕ್ಕೆ ಬಟನೊತ್ತಿಕೊಂಬವರು!

ಹ್ಯಾಗಿದ್ದನೋ ಹಾಗೇ ಇದ್ದಾನೆ ಹುಡುಗ,-
ತನ್ನ ರಾಜನ ಹಾಗೆ ಇವನಿಗೂ ನೇರ ನಡೆ ನುಡಿ.
ಯುದ್ಧದಲ್ಲಿ
ತಾಗದೆ ಕೊಲ್ಲುವ,
ಕಚ್ಚದೆ ರಕ್ತ ಹೀರುವ
ತಂತ್ರಗಳನರಿಯದ ಮುಗ್ಧ.

ನನ್ನ ರಾಜನೀಗ ಕಾಲಬಂಧಿ.
ಬನ್ನಿ ಹಬ್ಬದಲಿ ಉಜ್ಜಿ ತೊಳೆದ ಆಯುಧಗಳಿಗೆ
ಮೊದಲಿನ ಹದನ ಹೊಳಪುಗಳಿಲ್ಲ.
ನೇರ ಗುರಿಯಿಲ್ಲ,
ಅಡಗಿಸುತಾನೆ ಮುಪ್ಪನು ಕೂಡ!
ಜಂಗು ತಿಂದ ಇಂದ್ರಿಯಗಳ
ಸಾಣೆ ಹಿಡಿದು ಹದನವಾಗಿಸಿಕೊಂಬಾತ.
ವೈರಿಯ ದುರ್ಬಲ ಮರ್ಮಸ್ಥಳದಲಿ ನಿಂತು ಹೊಂಚುವುದು,
ಯಂತ್ರತಂತ್ರಾದಿಗಳ ಹೂಡಿ ಕಾದುವುದು-
ಸಿಕ್ಕರೆ ಶಿಕಾರಿ ಸಿಗದಿದ್ದರೆ ಭಿಕಾರಿ!

ನನ್ನ ಯಕ್ಷಿಗೂ ಈಗ ಬಿಳಿ ಕೂದಲು!
ಕಣ್ಣಲ್ಲಿ ಸಿಡಿವ ಬೆಂಕಿ ಬೆಳಕಿಲ್ಲ.
ವರ ಕೊಡುವ ಕೈ ಮರಗಟ್ಟಿ,
ಅವತಾರಗಳ ಕುಣಿದಿದ್ದ ಕಾಲಲ್ಲಿ
ಹುಸಿಪೆಟ್ಟಿಗೂ ಎತ್ತುವ ಶಕ್ತಿಯಿಲ್ಲ.

ಈಗ ಉಳಿದವನು ಸೆಲ್ಲಾರಿದ ಮುದುಕ.
ಸೋಲುಗಳೆದ್ದು ದುಸ್ವಪ್ನಗಳಾಗಿ ತುಳಿದಾಡಿ
ಹೃದಯದಲ್ಲಿ ಹುಣ್ಣು ತೋಡಿವೆ ಮಾರಾಯಾ-
ನಾನೀಗ ನೋವಿನ ಭಾರ ಎಲ್ಲಿಡಲೆಂದು ಸದಾ
ನೆಲವ ಹುಡುಕುವವ.

ಎಲ್ಲಿ,- ಕೊನೆಗೊಮ್ಮೆ ನೋಡುವಾ
ಬಾ ತೋರಿಸು ಶಿವಾಪುರವ:

ಎಲ್ಲಿದೆ ಶಿವಾಪುರ?

## ಭಾಗ ೨-ಹಂಪಿ

## ಹಂಪಿಯ ತುದಿಯರಿದ ದಾರಿ

೧

ಸೈನ್ಯ ಸಜ್ಜಾಗಿ ನಿಂತು
'ಹರ ಹರ ಮಹಾದೇವಾ' ಎಂದು ಒದರಿದಾಗ,
ಮುಖದ ಮ್ಯಾಲೆ ಜಡೆಯೆಳೆದುಕೊಂಡು
ಜಪತಪವೆಂದು ಮೂರೂ ಕಣ್ಣು ಮುಚ್ಚಿಕೊಂಡು
ಕೂತರು ಸ್ವಾಮಿ ಶಿವಸುಖದಲ್ಲಿ.
ದಮ್ಮಯ್ಯಾ ದಯವಾಗು ಶಿವನೇ ಎಂದು
ಹಲುಬಿದ ರಾಜರ ಕಡೆಗೆ
ಜಡೆ ಕೊಡರಿ ಒಮ್ಮೆ ನೋಡಲೇ ಇಲ್ಲ.

ಲೊಳಲೊಟ್ಟೆಯೆಂದು ಎದುರಿನ ಬಸವ ದೇವರೂ
ಗೊರಕೆ ಹೊಡೆವಾಗ-
ನಡೆದೇ ಹೋಯಿತು ದೊಡ್ಡ ಯುದ್ಧ!

ಆಗಲೇ ನಡೆದವು ಹತ್ಯೆ ಕಗ್ಗೊಲೆಗಳು,
ಹೇಡಿ ಸಾವುಗಳು, ವೀರ ಮರಣಗಳು.

ಗೋರಿಗೆ ಗತಿಯಿರದ ಹುತಾತ್ಮರ ಭೂತಗಳೆದ್ದು
ಊರು ಕೇರಿ ಸುಡುಗಾಡುಗಳನೊಂದು ಮಾಡಿ
ಬಯಲು ನಿರ್ವಯಲಾದವು  ನಿಶ್ಶಬ್ದದ ಜೊತೆಗೆ.

ಕೈದು ಹಿಡಿದ ದೊಡ್ಡದೇವರೇ ಹೀಗೆ ಕೈ ಚೆಲ್ಲಿದರೆ
ಚಿಲ್ಲರೆ ದೇವರ ಕೇಳುವವರುಂಟೆ?
ಗಾಬರಿಯಲ್ಲಿ ಗುಡಿ ಖಾಲಿ ಮಾಡುವಾಗ
ಸಿಕ್ಕ ಸಿಕ್ಕಲ್ಲಿ ಎಡವಿ ಕೈಕಾಲು ಮುರಿದು

ಹಾದಿ ಬೀದಿಗಳಲ್ಲಿ ಚೆಲ್ಲಾಪಿಲ್ಲಿ ಚೆಲ್ಲಿ ಹೋಗಿದ್ದಾನೆ
ಅವರವರ ಅವತಾರಗಳ ಅವಶೇಷಗಳನ್ನ!

ಸುಮ್ಮನಿದ್ದೆವೆ ನಾವು?
ಖಾಲಿ ಪಾಲಕಿ ಹೊತ್ತು
ಎಲ್ಲೆಂದರಲ್ಲಿ ಅಲೆದಾಡಿ ಹುಡುಕಿದೆವು,
ಉಘೆ ಉಘೇ ಎಂದೊದರಿದೆವು:
ಸೊಲ್ಲಿರದ ದೇವರೇ,
ಸೊಮ್ಮಿರದ ದಿಂಡರೇ,
ಭ್ರಾಂತು ನಿಭ್ರಾಂತರಾದ ಬೆಳಕುಗಳೇ
ಬನ್ನಿರೆಂದು ಕೂಗಿದೆವು.
ಯಾರೂ ಬರಲಿಲ್ಲ.

ಹೆದರಿ ಪರಾರಿಯಾದ ದೇವರು ಸಿಕ್ಕರೆ
ವಾಪಸು ಕಳಿಸಿರಯ್ಯಾ.

೨

ದುಸ್ವಪ್ನದಲ್ಲಿ ಹಂಪಿಯ ನೋಡುತ್ತ
ಬರುತ್ತಿದ್ದಾಗ
ಎಲ್ಲಿಂದಲೋ ಚಿಮ್ಮಿದ
ಶಿಲೆಯ ತಲೆಯೊಂದು
ಕೈಯಲ್ಲೆ ಬಿತ್ತು.

ಯಾವ ದೇವರ ತಲೆಯಿದು?
ಕಣ್ಣಲ್ಲಿ ಬೆಳಕಿಲ್ಲ,
ಮುಕ್ಕಾದ ಮೂಗಿನಲ್ಲಿ ಪವನ ಸುಳಿಯುವುದಿಲ್ಲ.
ಕರೆದರೆ ಮುರಿದ ಕಿವಿಗೆ ಕೇಳಿಸುವುದಿಲ್ಲ.
ಅರೆತೆರೆದ ತುಟಿಯಿಂದ
ಮಾತಿನ್ನೂ ಹೊರಬಂದಿಲ್ಲ.

ಯಾರ ದೇಹಕ್ಕಿದನ್ನು ಅಂಟಿಸಲಿ?
ಅಥವಾ
ಎಸೆದು ಬಿಡಲೆ ಮತ್ತೆ
ದುಸ್ವಪ್ನಕೆ?

೩

ಉತ್ತಮ ಪ್ರಭುತ್ವ ಲೊಳಲೊಟ್ಟೆ ಅಂತ
ದಾಸರು ಹಾಡಿದ್ದೇ ಆಯ್ತು;
ತೋರು ಬೆರಳು ತುಟಿಗಿಟ್ಟುಕೊಂಡು
ನಿಶ್ಯಬ್ದವಾದರು ಎದುರು ಬಸವದೇವರು!

ತೊಡೆ ತಟ್ಟಿ ತಾಳ ಕುಟ್ಟುತ್ತ
ಮೆಚ್ಚಿ ತಲೆದೂಗುತ್ತ
ಕಣ್ಣು ಮುಚ್ಚಿದರು ದೊಡ್ಡ ದೇವರು-
ಶಿವಸುಖದಲ್ಲಿ ತೇಲುತ್ತ.

ಕಣ್ಣಿಲ್ಲ ಹಾಡಿಗೆ
ನೆನಪಿನ ಕತ್ತಲೆಯಲ್ಲಿ ಕುರುಡು ನಡೆಯುತ್ತ,
ಬಂಡೆಗಳಿಗೆ ಡಿಕ್ಕೀ ಹೊಡೆಯುತ್ತ,
ಹಾಳುಗಳಲ್ಲಿ ಹರಿದಾಡುತ್ತಿದೆ ಈಗಲೂ:
ಉತ್ತಮ ಪ್ರಭುತ್ವ ಲೊಳಲೊಟ್ಟೆ.

೪

ಮೂರು ಹಗಲು ಮೂರು ರಾತ್ರಿ ಕಾದೆವು
ಕಣ್ಣಲ್ಲಿ ಎಣ್ಣೆ ಹಾಕಿಕೊಂಡು:
ದೊಡ್ಡ ದೇವರಿಂದ ಏನಾದರೊಂದು
ಸಣ್ಣ ಸೂಚನೆ ಬಂದೀತೆಂದು,
ಶುಭ ಶಕುನ ಕಂಡೀತೆಂದು.

ಮರಡಿಯ ಕಲ್ಲು ಕಂಟಿಗಳಲ್ಲಿ,
ದೇಗುಲಗಳು ಹಾಳು ಸುರಿವಲ್ಲಿ,
ಎಲ್ಲಾದರೊಂದು ಕಡೆ
ಓಡುವ ನಾಯನಟ್ಟಿಸಿಕೊಂಡು
ಧೀರ ಮೊಲ ಓಡಿ ಬಂದೀತೆಂದು,
ನಾಯ ಬೇಟೆಯಾಡೀತೆಂದು,
ಇನ್ನೊಮ್ಮೆ ಇನ್ನೊಂದು ಮೂಡಲಪಾಯದ
ತದ್ಧಿಮಿತ ಕುಣಿತಕ್ಕೆ
ಈ ನೆಲ ರಂಗಮಂಚವಾದೀತೆಂದು.

ಕಾದು ಕಾದು ಶಿವ ಶಿವ ಪದ ಹಾಡುತ್ತ
ಬಾಯಾರಿದ ಬಿಸಲಗುದುರೆಗಳ ಹತ್ತಿ
ಕಚ್ಚಾಡಿ ಸತ್ತ ಪಶುಗಳ ಹಾಗೆ ಬಿದ್ದಿರುವ
ಬಂಡೆಗಳಲ್ಲಿ,
ಅರೆ ಬೆಂದ ಹೆಣಗಳ ಹಾಗೆ ಬಿದ್ದ ಸ್ಮಾರಕಗಳಲ್ಲಿ
ಅರೆಮರುಳೆರಂತೆ ಅಲೆದಾಡಿದೆವು;
ಹಾಳು ಧೂಳುಗಳಲ್ಲಿ.
ಕಾಲಿಗೆ ಶಿಖರದ ನೆತ್ತಿ ತಗುಲಿ, ಹೌಹಾರಿ
ಅಗಿಯತೊಡಗಿದೆವು ವಿಸ್ಮೃತಿಗಳ.

ಅಗಿದಗಿದು ಮಣ್ಣ ಬಗಿಬಗಿದು
ಗಬ್ಬೆನುವ ವಾಸನೆಗೆ ವಾಕರಿಸದೆ
ಮುಂದುವರಿದಂತೆ ಗೋಡೆ ಸಿಕ್ಕಿತು.
ಧೂಳೊರೆಸಿದರೆ ಕರಕುಶಲ ಕಲೆಗಾರಿಕೆಯ ಕಲ್ಲಿನ ಬಾಗಿಲು!
ಶಿಲೆಯ ಚೌಕಟ್ಟಿನಗುಂಟ
ಹೂವರಳಿದ ಬಳ್ಳಿಯ ಬಿಡಿಸಿ
ಮ್ಯಾಲೆ ಸೊಂಡಿಲಿನಿಂದ ಮಾಲೆ ಹಾಕುವ
ಗಜಗಳ ಮಧ್ಯೆ ಹಣಸುರಿವ ಲಕ್ಷ್ಮೀ ಕುಂತಿದ್ದಾಳೆ-
ಕಮಳದ ಮ್ಯಾಲೆ!
ಬಲಗೈ ಎತ್ತಿ ಹರಸುವ ಸಾಲು ಸಾಳು ದೇವತೆಗಳು-
ಎಡಕ್ಕೆ ಬಲಕ್ಕೆ!

ಮುಚ್ಚಿದ ಬಾಗಿಲಿನೊಳಗೆ
ಭದ್ರ ಅಗಣಿಯ ಜಡಿದಿರಲು
"ಒಳಗೆ ಯಾರಿದ್ದೀರಿ?" ಎಂದು ನಗಾಡುತ್ತ
ಬಾಗಿಲು ತಟ್ಟಿದರೆ-ಅರೆ ಅರೆ!
ಜೋಗುಳ ಕೇಳಿಸಿ
ಗಾಬರಿಯಾಗಿ ಗರಬಡಿಯ ಬಿದ್ದೆವು.
ಆಗಲೆ ಅವತರಿಸಿ ಗುಡುಗಿದರು
ಕೊಟ್ಟೂರಿನ ಜೋಗಿ ಜಂಗಮ ಸ್ವಾಮಿ
ಸಂಗನ ಬಸವ ದೇವರು:

"ಎದ್ದೇಳಿರಯ್ಯಾ,
ಹುಯ್ಯೆನುವ ಕಾಲನ ಬಿರುಗಾಳಿಗೆ ಹೆದರಬ್ಯಾಡಿರಯ್ಯಾ.

ಬಂಡೆಯಿವೆ ಮಂಟಪ ಕಟ್ಟಿರಿ,
ಶಿಲೆಯಿವೆ ಮೂರ್ತಿಯ ಕೆತ್ತಿರಿ,
ಚೆಲ್ಲಾಡಿವೆ ಶಬ್ದ, ಭಾಷೆಯ ಕಟ್ಟಿ
ಮಂತ್ರದಲ್ಲಿ ಮಲಗಿದ್ದವರನೆಬ್ಬಿಸಿರಯ್ಯಾ!"
-ಎಂದು ಕಾಣದ ಕ್ಷಿತಿಜಕ್ಕೆ
ತುದಿಯಿರದ ದಾರಿಯ ತೋರಿ ಮಾಯವಾದರು.

## ಬಿಚ್ಚೋಲೆ ಗೌರಮ್ಮ

ಗೊತ್ತಿಲ್ಲ ನಿಮಗೆ ಬಿಚ್ಚೋಲೆ ಗೌರಮ್ಮ?
ಕೆಲವೇ ಬಿಳಿಕೂದಲು, ಮಧ್ಯೆ ಬೈತಲು
ಮೂಗುತಿ ವಜ್ರದೋಲೆ ಕಾಸಿನ ಸರ ಎಂಟುತೊಲೆ!
ನೆಪ್ಪಾಯಿತೆ?
ಕಮಳದ ಕಂಪನಿಯವರು ವಿದೇಶೀ ದಳ್ಳಾಳಿಗಳಿಗೆ
ಪಾರ್ಟಿ ಕೊಟ್ಟರು ಇಂಡಿಯಾ ಇಂಟರ್ ನ್ಯಾಷನಲ್ ಹೋಟಲಲ್ಲಿ.
ಆಮಂತ್ರಣವಿತ್ತು ಗೌರಮ್ಮನಿಗು.
ಹುಬ್ಬು ಕತ್ತರಿಸಿ, ತುಟಿಗೆ ತುಟಿಕಟ್ಟಿಗೆ, ಕೆನ್ನೆಗೆ ಕೆಂಬಣ್ಣ
ಕಣ್ಣಿಗೆ ಕಾಡಿಗೆ ತೀಡಿ,
ಸನಾತನವ ಆಧುನಿಕಗೊಳಿಸಿಕೊಂಡು ಬಂದರೆ-
ಭಾರತಾಂಬೇ ಎಂದು ಅಡ್ಡಬಿದ್ದು ಪರಿಚಯಿಸಿದರು
ಅದೇ ಕಮಳದ ಕಂಪನಿಯವರು!
ಜೊತೆ ನಿಂತು ಫೋಟೋ ಹಿಡಿಸಿಕೊಂಡರು ವಿದೇಶೀಯರು.
ಆಮೇಲೆ 'ನೊರೆಗೆರೆವ ವಿಸ್ಕಿ ಸೋಡಾ' ಸರಬರಾಜು
ಕೈ ಕೈ ಹಿಡಿದು ಕುಣಿವ ಮೋಜು.

"ಬನ್ನಿ ನಾನೂ ಕುಣಿವೆ ನಿಮ್ಮೊಂದಿಗೆ"
ಎಂದರು. ಯಾರು? ಬಿಚ್ಚೋಲೆ ಗೌರಮ್ಮನವರು!
ಕೈ ಮುಗಿದು ಹಿಂಜರಿದರು ವಿದೇಶೀ ಹೈಕಳು.

ಇನ್ನೊಮ್ಮೆ ಕೂಗಿದರು ಗೌರಮ್ಮನವರು-
"ಬನ್ನಿ ನಾನೂ ಕುಣಿವೆ ನಿಮ್ಮೊಂದಿಗೆ."
ದೇಶೀ ಹೈದರು  ಪಿಸುನುಡಿ ಬದಲಿಸಿಕೊಂಡು
ಮೂಲೆ ಸೇರಿದರು.
ಸೋಲದ ಗೌರಮ್ಮ

ತೋಳು ಚಾಚಿ ಇಂಗ್ಲಿಷಿನಲ್ಲೇ ಗದರಿದರು:
"ಬನ್ನಿರೋ ಕುಣಿವೆ ನಿಮ್ಮೊಂದಿಗೆ
ಯಾವುದೂ ರೋಗವಿಲ್ಲ ನನಗೆ!"

ಕೈ ತಟ್ಟಿ ನಗುತ ದೂರ ಸರಿದರೆಲ್ಲರೂ.
ಯಾರೊಬ್ಬರೂ ಬರಲಿಲ್ಲ ತಾಂಬೂಲ ಕೊಡಲು.
ಕಣ್ಣೀರುಗರೆದರು ಗೌರಮ್ಮನವರು!

## ಅಂಗಳದ ಮರ

ಪ್ರಳಯದ ಬಿರುಗಾಳಿ ಬೀಸಿ
ಮದ್ದಾನೆಯಂಥ ಧೂಳೆಬ್ಬಿಸಿ
ಕ್ಷಿತಿಜಗಳ ಆವರಿಸಿ
ನೆಲಮುಗಿಲಿಗೇಕಾಗಿ
ಮಿಂಚಿನ ಶಲಾಖೆ ಫಳ್ಳನೆ ಹೊಳೆದು ಸ್ಫೋಟಿಸಿದಾಗ
ಸಿಡಿಲು ಬಡಿದದ್ದು ಎಲ್ಲಿ ಯಾರಿಗೆ ಎಂದು
ತಿಳಿಯಲೇ ಇಲ್ಲ.
ಅರೆಗಳಿಗೆ ನಮ್ಮ ಉದ್ಗಾರ ನಮಗೇ ಕೇಳಿಸದಂಥ
ಸ್ಮಶಾನಮೌನ. ಆಮೇಲೆ ಕಂಡಿತು:
ಅಂಗಳದ ಆಲದ ಮರ ಬುಡಮೇಲಾಗಿ ಬಿದ್ದಿತ್ತು!
ನೆತ್ತಿಯ ಸುಳಿಯಿಂದ ಬಡ್ಡಿಬೇರಿನವರೆಗೆ ಸೀಳಿತ್ತು!
ಆಮೇಲೆ ವ್ಯವಹಾರ ಸುರುವಾಯ್ತು.

"ಅಜ್ಜನ ಅಜ್ಜ ಲವನಜ್ಜ ನೆಟ್ಟ ಅನಾದಿಮರವೆಂದು,-
ಆಯುರ್ವೇದ ಇದರೆಲೆ
ಹಾಡುವ ಹಕ್ಕಿಗಳ ಹಸಿರುಯ್ಯಾಲೆ
ಬೆಳ್ದಿಂಗಳಲ್ಲಿ ಯಕ್ಷಿಯರ ನೆಲೆ
ಆಹಾ ಇದು ಇರೋದು ನಮ್ಮ ಅಂಗಳದಲ್ಲೆ!"
-ಎಂದು ಉಬ್ಬಿ ಕೊಬ್ಬಿದ ನಮ್ಮ ಹಿರೀಕರೆ,
"ನೋಡುತ್ತಿರಿ, ಸಾಮಾನ್ಯವಲ್ಲ, ಈ ಮರ ಬಿದ್ದದ್ದು
ದಾಖಲಾಗುತ್ತದೆ ಇತಿಹಾಸದಲ್ಲಿ!
ಮಾರಿದರೆ ಎಷ್ಟು ಬಂದೀತು ಮಹಾ! ಆದರೂ
ಅಜ್ಜ ನೆಟ್ಟ ಆಲದ ಮರ-ಎಂದ ಮೇಲೆ
ಆಶೀರ್ವಾದವೆಂದಾದರೂ ನಮನಮಗೆಲ್ಲಾ

ನಮ್ಮ ನಮ್ಮ ಪಾಲು ಬರಲೇಬೇಕಲ್ಲ!"
ಎಂದಾಡುತ್ತಿದ್ದಾಗ-
ಹುಚ್ಚನೊಬ್ಬ ಹೇಳಿದ:
"ಹೌದು ಹೌದು ಇತಿಹಾಸದಲ್ಲಿ
ದಾಖಲಾಗುತ್ತದೆ, ಬಿದ್ದ ಮರವ ಮಾರಿ
ನೀವು ಕಳ್ಳೆಪುರಿ ತಿಂದದ್ದು ಸಹ."

## ದಿಲ್ಲಿ

ದಿಲ್ಲಿಯೆಂಬ ದಿಲ್ಲಗಿ
ಕಟ್ಟಿಸಿದ ಹಲ್ಲಿನಲಿ ದಿಲ್ಲಗಿಯಾಡುವ ಮತಲಬಿ
ಹ್ಯಾಗೆ ಹೊಳೆಯುತ್ತಾಳೆ ನೋಡು:
ಈಗಷ್ಟೆ ಟಂಕಿಸಿ ತಂದ
ಹಸಿರು ಖೋಟಾ ನೋಟು,
ಆಹಾ ಗಿಲೀಟು!

ಬ್ರಾಂದಿ ಕುಡಿದಾಗೊಮ್ಮೆ ಗಾಂದಿ ಎನ್ನುತ
ಮೊಗಮ್ಮಾಗಿ ದಮ್ಮೆಳೆದು
ಚಿಟಿಕೆಯ ರಿದಮ್ಮಿನಲಿ
ಸಿಗರೇಟಿನ ಬೂದಿ ಕೊಡವುತ,
ಮೈಮರೆತು ಕೂತ ನಿನ್ನ ಕಣ್ಣಿಗೆ ಕಿಡಿ ಸಿಡಿಸಿ,
ಮೊಸಳೆ ಕಣ್ಣೀರು ಸುರಿಸಿ,
ಅದರಲ್ಲೇ ನೀರಾವರಿ ಮಾಡಿ,
ಥರಾವರಿ ಚಳ್ಳೆಹಣ್ಣು ಬೆಳೆದು
ಸುಗ್ಗಿಯೊ ಒಕ್ಕುವವಳು.

ಪ್ರಜಾಪ್ರಭುತ್ವಕ್ಕೆ ಬೀರೆರೆಯುತ
ಮುಲಾಜಿಲ್ಲದೆ ಚರಿತ್ರೆಯ ಪುಟಗಳ
ಗಲೀಜು ಮಾಡುತ
ಮೋಜು ಮಾಡುವವಳು.

ದಿನಾ ಮದುವೆ ಈ ನಿತ್ಯ ಮುತ್ತೈದೆಗೆ.
ಅಂದಾದುಂದಿ ತಿಂದುಂಡು ತೂರಾಡುವ
ಕುಲಗೆಟ್ಟ ವೋಟಿನ ರಾಜಕಾರಣಿಗಳ ದಿಬ್ಬಣ.
ಅವನವನಿಗೆ ಅವನವನ ಖಯಾಲಿಯ

ಪಂಚೇಂದ್ರಿಯಗಳಿಗೆ ಪ್ರತ್ಯೇಕ ಸುಖ ಕೊಡುವ
ವಿವಿಧ ಭಾರತಿಯಾಗಿ
ಹರ್ಷದ ಡೋಜು ಕೊಡುವೀ
ಖುಶಿ ಬೀಸುವ ಗಿರಣಿಗೆ
ಸೋಬಾನೆ ಹೇಳಿರೇ
ಮೀಡಿಯಾಂಗನೆಯರೇ!

## ಮೂಡಲಮನೆ

ನಮ್ಮೂರ ಅಗಸ್ಯಾಗ ಆಲದ ಮರ ಬೆಳೆದು
ಹಾದಿ ಬೀದೆಲ್ಲ ತಂಪು ನೆರಳ!
ನೆತ್ತಿಗೊದಲ ಹರಿವಿ ತಪವ ಮಾಡೋನ್ಯಾರ?
ಜಡಿಮುನಿಯ ಜಡಿಯ ಹಾಂಗ ಬಿಳಲ||

ರೆಂಬಿಕೊಂಬಿಯ ಮ್ಯಾಲ ಗೂಡ ಕಟ್ಟಿದಾವ
ರೆಕ್ಕೆ ಬಲಿತ ಹಕ್ಕಿ
ಗೂಡಿನಾಗ! ಮಲಗ್ಯಾವ ಮರಿಹಕ್ಕಿ||
ದೂರ ದೇಶದ ವಲಸಿಗ ಹಕ್ಕಿಗು
ಐತಿ ಜಾಗ ಒಳಗ|
ಬನ್ನಿರಿ| ನೀವು ನಮ್ಮ ಬಳಗ||

ಹಳೆಯ ಬಾವಿಯ ತಳದ ನೀರಿನಾಗ
ಹಸರ ಚಿಗರತಾವ|
ಬೇರಿಗೆ ಮೊಳಿಕಿ ಒಡಿಯತಾವ||
ಭೂತ ಬೇತಾಳ ಜೋತ ಬಾವಲಿ
ಮ್ಯಾಲ ಕೂಗತಾವ|
ಮರದಾಗ| ಕರಗ ಕುಣಿಯತಾವ||

ಮರದ ಎಲೆ ನೆರಳು ಮನೆಯ ಗೋಡೆ ಮ್ಯಾಲ
ಆಡತಾವ ಆಟ
ಮೂಡ್ಯಾವ! ತೊಗಲ ಗೊಂಬಿಯಾಟ||
ಕರುಳ ಬಳ್ಳಿಯ ಕತೆಯ ಹೇಳತಾವ
ನೋಡ್ರಿ ಶಾಂತಚಿತ್ತ|
ನಾವೂನು ಅದರ ಭಾಗ ಮಾತ್ರ||

# ದೇವಭಾಷೆ

ಇನ್ನು ದೇವಭಾಷೆಯದೇ ಒಂದು ಕಥೆ.
ದೇವರ ಕೈಕಾಲು ಕಣ್ಣುಗಳಿಗೊಂದೊಂದು ಭಾಷೆಯಾದರೆ
ಭಾಷೆಗೊಂದೊಂದು ಅರ್ಥಕೋಶ.
ಅಂಗಾಂಗ ಭಂಗಿಗಳಿಗೊಂದೊಂದು ಅರ್ಥ
ಕೈ ಎತ್ತಿದರೊಂದರ್ಥ, ನೆಲಕ್ಕೂರಿದರೊಂದರ್ಥ
ಕೈ, ಕಾಲು, ಬೆರಳು ಮಡಿಚಿದರೊಂದರ್ಥ, ತೆರೆದರೊಂದರ್ಥ!

ಹಂಪಿಯಲ್ಲಂತೂ ಕೋಟ್ಯಾನುಕೋಟಿ ದೇವತೆಗಳ
ಮುರಿದ ಅಂಗಾಂಗಳ ಅಂದರೆ-
ಅರ್ಥಕೋಶಗಳ ರಾಶಿಗಳೇ ಬಿದ್ದಿವೆ.
ತೇನವಿನಾ ತೃಣಮಪಿ ಅಲುಗಲಾಗದ ದೇವರಿಗೆ
ಇಷ್ಟೆಲ್ಲ ಭಾಷೆಗಳು, ಅರ್ಥಗಳಿದ್ದರೂ
ವಾಚ್ಯ, ಲಕ್ಷ್ಯ, ಧ್ವನ್ಯಾರ್ಥಗಳ ಜೊತೆಗೆ
ಅರ್ಥಾನರ್ಥಭಾವಾರ್ಥಗಳಿದ್ದರೂ
ಭಕ್ತರ ತಾಪತ್ರಯವೇನೂ ಕಡಿಮೆಯಾಗಲಿಲ್ಲ.

ಸದರಿ ದೇವರುಗಳೋ-ಯಾವುದೇ ಒಂದರ್ಥಕ್ಕೆ
ಬದ್ಧರಾಗಿಲ್ಲದವರು.
ಎಲ್ಲಾ ಅರ್ಥಗಳಿಗೆ, ಅಂದರೆ ವಿರುದ್ಧಾರ್ಥಗಳಿಗೂ
ಮುಗುಳು ನಗುವವರು.

ಇನ್ನು ಇತಹಾಸದ ಬುಕ್ಕಿಗಿಲ್ಲದ
ಶಾನುಭೋಗರ ಲೆಕ್ಕಕ್ಕಿಲ್ಲದ
ಹೊಗಳುಭಟ್ಟರ ಪರಾಕಿಗಿಲ್ಲದ
ದೇವರೆಷ್ಟೋ ಇವೆ!

ಬಿಡ್ರಿ, ಇದು ಎಷ್ಟಂದರೂ ದೇವಭಾಷೆಯ ವ್ಯವಹಾರ;
ನಿಶ್ಯಬ್ದಕ್ಕೆ ಅರ್ಥ ಬಳಿಯುವ ಕೆಲಸ!

# ಕನ್ನಡಿಯ ನೋಡಿಕೊ

ಕನ್ನಡಿಯ ನೋಡಿಕೊ:
ತಂತಾನೇ ನಗುವ
ತನ್ನ ಬಿಟ್ಟು ಇನ್ನಿಲ್ಲವೆಂದು ನಂಬುವ,
ಪ್ರೇಮಿನ ಕನ್ನಡಿಯೇ ವಿಶ್ವ
ಆ ವಿಶ್ವಕೆ ನಾಣೇ ದೊರೆ ಗುರು ದೇವರೆಂದು
ನಂಬುವ, ತನಗೆ ತಾನೇ ಪ್ರಮಾಣವೆಂದು
ಸಾರುವಯ್ಯನ ಕಂಡೆಯಾ?

ಹೊಂಡದಲ್ಲಿ ನೋಡಿಕೊ:
ಮ್ಯಾಲೆ ಬಾನು, ಕೆಳಗೆ ನೀನು;
ತರುಗಿರಿಗಳಲ್ಲಿ ಉಸಿರಾಡುವ ಹಸಿರು
ನೆಲ ಮುಗಿಲ ನಡುವೆ ಗೆರೆ ಕೊರೆದು
ಕುಣಿದಾಡುವ ಕ್ಷಿತಿಜ-
ಈ ನಡುವೆ ಹಬ್ಬಿದೆ
ಮನು ಮುನಿ ದೇವ ದಾನವ ಮಾನವಾದಿ
ಇರುವೆ ಮೊದಲು ಆನೆ ಕಡೆಯಾದ
ಜೀವರಾಶಿಯ ಸಂಬಂಧಗಳ
ಕರುಳಬಳ್ಳಿ!

ನೀನೂ ಮೂಡಿದ್ದೀಯಾ  ಸದರಿ ಬಳ್ಳಿಯ
ಬಂಧು ಭಾಗಾದಿಯಾಗಿ, ಅನುಕೂಲ ಸಿಂಧುವಾಗಿ
ಅಖಂಡದ ತುಂಡಾಗಿ, ತುಂಡು ಕೊಟ್ಟು
ಅಖಂಡದ ಗಂಡನಾಗಿ!

ಹಿನ್ನೆಲೆಯ ಮಿರಿಲೋಕದಲ್ಲಿ ಮೂಡಿದ್ದಾಳೆ ತಾಯಿ
ಇದ್ದು ಇಲ್ಲದ ಹಾಗೆ
ನೀಲ ನೆಮ್ಮದಿಯಾಗಿ, ಬಿಸಿಲು ಬೆಳ್ದಿಂಗಳ ಹೂನಗೆಯಾಗಿ
ಆದಿಗಾಧಾರವಾಗಿ, ಆಗಸವಾಗಿ
ಈ ಎಲ್ಲ ಲೋಕದ ಸತ್ಯಕ್ಕೆ ಆಧಾರ ಪ್ರಮಾಣವಾಗಿ!

# ಏ ಕುರುಬರಣ್ಣಾ

೧

ಏ ಕುರುಬರಣ್ಣಾ
ಸತ್ಯುಳ್ಳ ಶರಣಾ
ಕಾಪಾಡೊ ಕುರಿಗಳನಾ!! ಮಾಡುವೆ ನಮನಾ||

ಗಿರಿಯ ಏರಿಗೆ ಬಂದು ಕುರಿ ಹಿಂಡು ನಿಂತಾವ
ಕೋಲು ಕುರುಬನ ಕಾವಲಿರೆದೆ|
ನಿಲ್ಲಲಾರೆವು ಶಿವನೆ ಸುಳಿಯಲಾರೆವು  ಮುಂದೆ
ದಮ್ಮಯ್ಯು ದಯವಾಗೊ ತಂದೆ||

ಕಾಡೆಂದು ನಂಬಿದ್ದು ಮರಳುಗಾಡಾಗಿತ್ತು
ಹುಸಿಹೋಗಿ ಹಸಿರಿನ ಕನಸು
ಬಾಯಾರಿ ಮುಗಿಲಿಗೆ ಬಾಯಿ ಬಿಡತೇವಯ್ಯ
ಕತ್ತು ಚೆಲ್ಲಿವೆ ಕುರಿಯ ಹಿಂಡು||

ಹಳೆಯ ದೊಡ್ಡಿಯ ಗುರುತ ಮರತೇವು ಕಳಕೊಂಡು
ಮತಿಗೆಟ್ಟು ಮರುಳಾದೆವಣ್ಣಾ|
ಹಲವು ಹಂಬಲಿಸೇವೊ ದಯವಾಗೊ ಸ್ವಾಮಿಯೇ
ಹೊತ್ತಿಗೆ ಒದಗಿ ಬಾರಣ್ಣಾ||

ಕೋಟಿ ದೇವರ ಪೈಕಿ ಒಬ್ಬನಾದರು ಇಳಿದು
ಮೂಡಬಾರದೆ ಕ್ಷಿತಿಜದಲ್ಲಿ?
ಬಣ್ಣದ ವೇಷದಲಿ ಸಣ್ಣ ಅವತಾರವನು
ಕುಣಿಯಬಾರದೆ ಎಂದು ಹಲುಬಿ||

ಪಡುವಣದ ಹುಲಿರಾಯ ಕುರಿಯ ವೇಷವ ಧರಿಸಿ
ನಮ್ಮೊಳಗ ತಾನಡಕವಾದ|
ಕಲ್ಯಾಣದ ಬೆಳಕಾರಿ ಪ್ರಳಯದಲಿ ನಿಂತೇವೊ
ಬ್ಯಾಟಿಗೊಂಬುವ ಮಿಕದ ಹಾಂಗ||

ಸಂದೇಹ ಸುಳಿದಾವು ಎಲ್ಲರ ಎದಿಯೊಳಗ
ಕುರಿ ಯಾರೊ ಹುಲಿ ಯಾರೊ ಶರಣಾ|

ಏ ಕುರುಬರಣ್ಣಾ ಸತ್ಯುಳ್ಳ ಶರಣಾ
ಕಾಪಾಡೊ ಕುರಿಗಳಾನ||

೧

ಗೊತ್ತುಗುರಿ ಇರಲಿಲ್ಲ ದಾರಿ ಮೊದಲೇ ಇಲ್ಲ
ಸುತ್ತ ನೋಡಿದ್ದೆಲ್ಲ  ಹರಿದಾರಿಯೇ
ಬಯಲ ದೊಡ್ಡಿಗೆ ಬಾಗಿಲಿಲ್ಲ, ಆಗಲೆ ಒಬ್ಬ
ಕುರುಬ ಬಂದನು ನಾವು ನಿಂತಲ್ಲಿಯೇ||

ಏನೊ ಒಂದಿತ್ತಣ್ಣ ಗತ್ತು ಎನುವಂಥಾದ್ದು
ಅವನ ನುಡಿ ನಡೆ ನಿಲುವು ನೋಟ ಶುದ್ಧ|
ತನ್ನೊಡಲಿನಿಂದಲೇ ನೂಲು ತೆಗೆಯುತ್ತಿದ್ದ
ತನ್ನ ಬಟ್ಟೆಯ ತಾನೆ ನೇಯುತ್ತಿದ್ದ||

ಜಾತ್ಯಾ ಕುರುಬನ ಹಾಗೆ ಹೆಗಲ ಕಂಬಳಿಯಿತ್ತು
ನೆಲ ಬೆವರುತಿತ್ತು ಕಾಲೂರಿದಲ್ಲಿ.
ಗುರುತು ಹಿಡಿದಿರಬಹುದೆ ಕುರಿಯ ವೇಷದ ಹುಲಿಯ?
ಕಿಡಿ ಹಾರಿದವು ಅವನ ನೋಟದಲ್ಲಿ.

ಚಾಂಗುಬಲ ಜಯವೆಂದು ಕುಣಿದಾಡಿ ಕೇಳಿದೆವು
ನಮ್ಮ ಕಾಯುವ ಕುರುಬ ನೀನಲ್ಲವೆ?
ಅಲ್ಲವೆಂದನು ಅವನು! ನಾವು ಕಿವುಡರ ಹಾಗೆ
ನಟಿಸಿದೆವು ಅನುಮಾನ ಸುಳಿಯದಂತೆ.

ಅವನ ಕಂಬಳಿ ಮ್ಯಾಲೆ ಚಿತ್ರ ಚಿತ್ತಾರಗಳ
ಬಿಡಿಸಿದೆವು ಅವನು ಖುಶಿಗೊಳ್ಳಲೆಂದು
ಕರುಳು ಮಿಡಿಯುವ ಹಾಗೆ ಸ್ವಾಮಿಯೇ ಎಂದಾಗ
ಕರುಣೆಗೊಂಡವನಾತ ಹೀಗೆಂದನು:

“ಯಾರ ಹುಡುಕುವಿರವನು ನಿಮ್ಮಲ್ಲೆ ಇದ್ದಾನೆ
ಹುಲಿಗಳೇ ನೀವೆಲ್ಲ ಅನುಮಾನವೇ?
ನೀವು ನಿಂತಿರುವ ಈ ನೆಲವೆಲ್ಲ ನಿಮ್ಮದೇ
ಕಟ್ಟಿರಯ್ಯಾ ದೇಶ ಕೋಶ ಸೀಮೆ.”

ಕೇಳಿದ್ದೆ ಕೈಗಳಲಿ ಹುಲಿಯುಗುರು ಮೂಡ್ಯಾವೋ
ಹಲ್ಲು ಮಸೆದಾಡಿದರು ಮಂದಿ!
ಒಬ್ಬರೊಬ್ಬರ ಕೊಚ್ಚಿ ಕೊಸರಾಡಿ ತಿಂದಾರೊ
ಹೇಳಕೇಳವರಿರದ ದೊಂದಿ!

ಏ ಕುರುಬರಣ್ಣಾ
ಸತ್ತ್ಯುಳ್ಳ ಶರಣಾ
ಕಾಪಾಡೋ ಕುರಿಗಳಾ|| ಮಾಡುವೆ ನಮನಾ||

## ಅಡಿಗರಿಗೆ

ಇದ್ದಕ್ಕಿದ್ದಂತೆ ಮುಖದ ತುಂಬಾ ಚಾಳೀಶಿನ, ಬಕ್ಕದಲೆಯ
ಮುದುಕನೊಬ್ಬ ಸಮುದ್ರದಲೆಗಳ ರಭಸದಲ್ಲಿ ಬಂದು,
ಬಿಡ್ತಿಗೆ ಕುಣಿದು ಓ ಹೋಯ್! ಎಂದರೆ ಯಾರೆನಿಸುತ್ತದೆ ನಿಮಗೆ?
ಇವರು ಕಡಲ ಕಿನಾರೆಯ ಚಂದದ ನಗೆಯ ಅಡಿಗರಲ್ಲವೆ?
ಇದು ಅಡಿಗರೇ ಹೌದು, ಕನ್ನಡಕರೊಬ್ಬರೇ ಅಡಿಗರು; ಬೇರಿಲ್ಲ.

ಹೌದೆಂಬ ವಯಸ್ಸಿನಲ್ಲೇ ಹೊಸ ನಾಡ ಕಟ್ಟಲು ಹೋಗಿ
ಆಚೆ ಸೀಮೆಯ ಮೋಹ ಮುರಳಿಗೆ ಮರುಳಾದವರು.
ಎರಡು ಲೋಕಗಳ ಗೂಢವನರಿತು
ಒಂದರ ಎದುರಿಗೆ ಇನ್ನೊಂದನ್ನಿಟ್ಟು ಮಯ ಮರೆತಾಗಲೇ
ಕವಿತೆ ಕಣ್ಣಾಗಿ ಕೆಳಗಿಳಿದು ಬಂದು ತಮ್ಮನ್ನ
ನೋಡಿಕೊಂಡವರು.
ಅಸಲಿ ನಕಲಿಗಳ ನಡುವೆ ಚಿನ್ನದ ಗೆರೆ ಕೊರೆದು
ಹದ್ದುಗಳ ನಿರ್ಧರಸಿದವರು.
ಕಾವ್ಯವನ್ನೇ ಜೀವನಾಧಾರ, ಅಸ್ತ್ರ ಆಧಾರ,
ಹಂಕಾರ ಹೂಂಕಾರಾದಿಗಳ ಮಾಡಿಕೊಂಡು
ಬೀಸಿಬಂದ ಬಿರುಗಾಳಿಗಳ ಕಾವ್ಯದಿಂದಲೇ ಎದುರಿಸಿದವರು.
ಕವಿ ನೀನಾದರೆ ನಾನಲ್ಲ; ನಾನಾದರೆ ಕವಿ ನೀನಲ್ಲವೆಂದು
ಠೇಂಕರಿಸಿ ಎದುರಾಳಿಗೆ ಏಟು ಕೊಟ್ಟವರು.

ಹರವಂಚಿ ಬಿದ್ದಿದ್ದಾವೆ ನೀವು ಟಂಕಿಸಿದ ಪ್ರತಿಮೆಗಳೆಷ್ಟೊ
ಅರ್ಥಕ್ಕಾಗಿ ಕಾಯುತ್ತ. ಹುಡುಕುತ್ತ ಹೋದರೆ ನಾವು

ನಮ್ಮ ಕನ್ನಡಿಗಳಲ್ಲಿ ನಿಮ್ಮದೇ ಬಿಂಬವ ಕಂಡು
ಭೂತವೆಂದು ಬೆದರಿದ್ದೇವೆ.
ಆಗ ನೀವಾಗಿ ಮುಂದೆ ಬಂದು ಪರ್ಯಾಯ ಪರಿಧಿಗಳ
ಗೌರವಿಸಿ ಹೇಳಿದಿರಿ:
ಬಿರುಗಾಳಿಗ್ಯಾಕೆ ಹೆದರುತ್ತೀರಿ? ಕನಸಿವೆ ನಿಮ್ಮಲ್ಲಿ
ಕಾಲನಿಗಿಂತ ತರುಣವಾದ ಕಾವ್ಯವಿದೆಯೆಂದು
ನನ್ನಂಥವರ ಮುನ್ನಡೆಸಿ ಹೊಸಕ್ಷಿತಿಜ ತೋರಿದವರು.
ಕಂಚಿನ ಮೂರ್ತಿಯಾಗಿ ಸರ್ಕಲಲ್ಲಿ ನಿಲ್ಲುವುದಕ್ಕೆ
ಅರ್ಹರಾದರೂ, ಸೊಗಸಿನ ನುಡಿಗಳ ಪೇರಿಸಿ ನೀವು
ಗುಡಿ ಕಟ್ಟಿಕೊಳ್ಳಲಿಲ್ಲ ನಿಮ್ಮ ಸುತ್ತ. ಶ್ರೋತೃಸುಖ
ನುಡಿಯಲಿಲ್ಲ.

ಅಡಿಗರೇ,
ನನ್ನ ಶೋಧನೆಗೆ ಕೆಳಗಿಳಿದಾಗ ಮೊದಲು ಸಿಕ್ಕವರೇ
ನೀವು; – ಕೂತಿದ್ದೀರಿ ಕುಡಿಯಲುಗದ ಸೊಡರು
ಕಣ್ಣು ಪಿಳುಕಿಸದೆ, ಮಾತಾಡದ ನ್ಯಾಯಾಧೀಶರಂತೆ.
ಈಗಲೂ ನಮ್ಮೆಲ್ಲ ಕಾರ್ಯಕ್ರಮಗಳ ಸನ್ನಿಧಿಯ
ನೀವೇ ವಹಿಸುತ್ತಿದ್ದೀರಿ; ಮುಂದೆಯೂ.
ನಿಮಗೆ ನಮಸ್ಕಾರ.

## ಹೆಣ್ಣು

ಹೆಣ್ಣೆಂದರೆ ನೀರು.
ಹನಿ ಹನಿ ಕೂಡಿ ಹಳ್ಳವಾಗಿ ಹೊಳೆಯಾಗಿ ಹರಿದು
ಗುಡ್ಡ ಬೆಟ್ಟಗಳಲ್ಲಿ,  ಹೊಲಗದ್ದೆಗಳಲ್ಲಿ ಹಸಿರಾಗಿ,
ಹಿತ್ತಲ ಬೇಲಿಗೆ ಹಾಗಲ ಬಳ್ಳಿಯಾಗಿ,
ಕಾಯಾಗಿ ಮಕ್ಕಳ ತಾಯಾಗಿ
ಅತ್ತೆ ಕತ್ತೆಯೂ ಆಗಿ,
ನೆರೆ ಬಂದು ಕೊಳೆ ಇಸ ಕೊಚ್ಚಿ ಸಾಗರ ಸೇರಿ
ಮತ್ತದೇ ಇತ್ಯಾದಿ ಉಗಿಯಾಗಿ ಹೊಗೆಯಾಗಿ
ಋತುವಾಗಿ ಋತುಮತಿಯಾಗಿ ಮನೆ ಬೆಳಗಿ
ಪದಾರ್ಥದ ಕವನವಾಗಿ,
ಕರ್ತೃ ಕರ್ಮ ಕ್ರಿಯಾಪದವಾಗಿ,
ಅರೆ ಕೊರೆಗಳ ಪೂರ್ಣ ವಿರಾಮವಾಗಿ

ಕೊಚ್ಚಿಕೊಂಬ ಮಕ್ಕಳ ವಿಶೇಷಣವಾಗಿ
ತಾನು ಮಾತ್ರ ಆರಕ್ಕೇರದೆ ಮೂರಕ್ಕಿಳಿಯದೆ
ಮನೆಯ ನಿಭಾಯಿಸುತ್ತಾಳೆ,
ಎಲ್ಲವೂ ಗಂಡಿನಿಂದಲೇ ಆಯಿತೆಂಬಂತೆ
ಗಂಡಿನಹಂಕಾರದ ಹೂಂಕಾರವಾಗಿ,
ಲೋಕದ ಓಂಕಾರವಾಗಿ!

## ಗಾಂಧೀಜಿ

ನಮ್ಮಪ್ಪನ ವಯಸ್ಸಿನವರು ಗಾಂಧೀಜಿ,
ನಾನವರ ನೋಡಿರಲಿಲ್ಲ; ನನ್ನಪ್ಪ ನೋಡಿದ್ದ.
ಆದರೆ ಕಲ್ಪನೆಯಲ್ಲಿ ಮಾತಾಡಿದ್ದೇನೆ ಬೇಕಾದಷ್ಟು ಸಲ:
ಹರಟಿದ್ದೇವೆ, ನಗಾಡಿದ್ದೇವೆ, ಪೋಲಿ ಜೋಕು ಹೇಳಿ-
ಕೇಳಿದ್ದೇವೆ. ನಾನೊಮ್ಮೆ: ನಿಮ್ಮ ಕನಸಿನಲ್ಲಿ ಕಸ್ತೂರ್ ಬಾ
ಎಂದಾದರೂ ಬಂದಿದ್ದಾರೆಯೇ ತಾತ? ಅಂತ ಕೇಳಿದ್ದಕ್ಕೆ
ಕತ್ತಲುಗಿ ಬೊಚ್ಚು ಬಾಯಲ್ಲಿ ಹೋ ಅಂತ ಕಿವಿಯಿಂದ
ಕಿವಿತನಕ ನಕ್ಕದ್ದನ್ನು ನಾನೆಂದೂ ಮರೆಯಲಾರೆ.
ಹಲ್ಲಿಲ್ಲದ ಅವರ ನಗೆ ನನಗಿಷ್ಟ.
ನಗೆಯಿಲ್ಲದ ಅವರ ಮುಖ ಕಲ್ಪಿಸಿಕೊಳ್ಳುವುದೂ ಕಷ್ಟ.

ಬಲುಗಟ್ಟಿ ಮುದುಕ. ತಪ್ಪು ಕ್ಷಮಿಸುತ್ತಿರಲಿಲ್ಲ.
ಬಯ್ದು ಬುದ್ಧಿ ಹೇಳುತ್ತಿದ್ದ. ಸುಖ ದುಃಖ ಕೇಳುತ್ತಿದ್ದ.
ಕೈಯಾರೆ ಕಾಡು ಕಡಿದು ರಸ್ತೆ ಮಾಡಿದ್ದ. ಮುಂದಾಳಾಗಿದ್ದ
ಬೆಂಬಲಿಗರಿಗೆ. ಕಂದೀಲು ಹಿಡಿದ ಕೈ ಎತ್ತಿ ಹಿಂದೆ
ಉಳಿದವರಿಗೆ ದಾರಿ ತೋರಿದ್ದ. ಆಗಲೇ ಶುರುವಾಯ್ತು: ಚೌಕಾಶಿ!
ಕತ್ತಲೆ ಬೆಳಕುಗಳ ಬೇರ್ಪಡಿಸಿರೆಂದು ಹಟ ಹಿಡಿದರು
ಕೆಲರು. ಬದುಕಿಗೆ ಎರಡೂ ಕಣ್ಣು ಬೇಕೆಂದು
ಪಟ್ಟು ಹಿಡಿದ ಮುದುಕ ಕೊನೆತನಕ ಸಡಿಲಿಸಲಿಲ್ಲ.
ಆಗಲೇ ಅವರಲ್ಲೊಬ್ಬ ಗನ್ನು ಹಿಡಿದು ಢಮಾರೆನ್ನಿಸಿದ.
ಗಾಂಧೀಜಿ ಹೇ ರಾಂ ಎಂದು ಸತ್ತಾಗ ಏನಾಯ್ತು ಗೊತ್ತಲ್ಲ?
ಗರ್ಭಗುಡಿಯಲ್ಲೊಬ್ಬ ದೇವರಿಲ್ಲ!

ಶ್ರೀಗಂಧದಲ್ಲಿ ಸುಟ್ಟು ಬೂದಿಯ ಸಮಾಧಿ ಮಾಡಿದರು;
ಪಕ್ಕದಲ್ಲಿ ಆಳುದ್ದ ಮೂರ್ತಿಯ ನಿಲ್ಲಿಸಿದ್ದಾರೆ.

ಮೂರ್ತಿಗೂ ಆಳುದ್ದ ನೆರಳಿದೆ, ಅವರಿಗಿದ್ದಂಥೆಯೇ!
ಗಾಂಧೀಜಿಯಂತೆ ಅವರ ಮೂರ್ತಿಯೂ ಅನಾಥವೇ.
ರಕ್ಷಿಸುವವರಿಲ್ಲ, ಧೂಳಲು ಕೊಳೆ ಕಳೆವ ಸಿಬ್ಬಂದಿಯಿಲ್ಲ.
ಮಂತ್ರಿ ಬಂದು ಏಣಿಯೇರಿ ಮಾಲೆ ಹಾಕಿ ಭಾರೀ
ಭಾಷಣ ಬಿಗಿವಾಗಷ್ಟೆ ಮೂರ್ತಿಯ ತಲೆಯ ಮೇಲೆ
ಕಾಗೆ ಕೂರುವುದಿಲ್ಲ.

ಸಾಯಲೇಬೇಕಾಗಿತ್ತು ಸತ್ತಿರಿ ಗಾಂಧೀಜಿ, ಹುತಾತ್ಮರ
ಅಜೆಂಡಾದಂತೆ ಮಾಡುವುದ ಮಾಡಿ ಸತ್ತು ಮಹಾತ್ಮರಾದಿರಿ;
ಇಲ್ಲದಿದ್ದರೆ ಈಗಿದ್ದ ಮರ್ಯಾದೆಯೂ
ಇರುತ್ತಿರಲಿಲ್ಲ.

ನೀವು ಉಸಿರಾಡುವ ಮಾನವರ ನಂಬಿದಿರಿ. ಅವರು
ಸಂಕೇತವ ನಂಬಿದರು. ಅದಕ್ಕೇ ಬೆಲೆ ಬಂದ ಮೇಲೆ
ಸಂಕೇತವೇ ಉಸಿರಾಡುವುದೆಂದು ನಂಬಿಸಿದರು.

ಸಮಾಧಿಯಲ್ಲಿ ಶಾಂತಿ ಸಿಕ್ಕಿದೆ ನಿಮಗೆ.
ನಿಜ ಹೇಳಬೇಕೆಂದರೆ ಅವತಾರಗಳಿಂದ ನಾವೇನೂ
ಕಲಿಯಲಿಲ್ಲ, ಕೊಚ್ಚಿಕೊಳ್ಳುವುದನ್ನು ಬಿಟ್ಟು.
ಉಳಿದಂತೆ ನೀವಿದ್ದಾಗಿನದೇ ಜಗಳ ಮುಂದುವರಿಸುವುದು,

ನಮ್ಮ ಪಾಲಿಗಿದ್ದದ್ದೇ-
ಎಂದು ವಿದಾಯ ಹೇಳಿದ್ದೆ.

ಈಗ ಗಾಂಧೀಜಿ ಬೆಳೆಯುತ್ತಿದ್ದಾರೆ-ಇಬ್ಬರಲ್ಲೂ:
ನನ್ನಲ್ಲಿ ಉಸಿರಾಟವಾಗಿ, ಅವರಲ್ಲಿ ಸಂಕೇತವಾಗಿ!
ವರ್ಷಕ್ಕೊಮ್ಮೆ ತಪ್ಪದೆ ಬರುತ್ತಾರೆ ಗಾಂಧೀಜಿ ನನ್ನ
ಕಲ್ಪನೆಗೆ. ಆ ದಿನ ಹಳೆಯ ಹರಟೆಗಳ ಸುರು
ಮಾಡುತ್ತೇವೆ ಮತ್ತೆ,
ಮಂತ್ರಿ ಬಂದು ಏಣಿಯೇರಿ ಮೂರ್ತಿಗೆ ಮಾಲೆಹಾಕಿ
'ಕತ್ತಲೆ ಬೆಳಕುಗಳ ಬೇರ್ಪಡಿಸುವುದು ಸುಲಭ
ಅದೆ ನಮ್ಮ ಮೊದಲ ಕಾರ್ಯಕ್ರಮ' ಎಂದು ಭಾಷಣ
ಬಿಗಿದಾಗ, ಇಬ್ಬರೂ ಬಿದ್ದು ಬಿದ್ದು ನಗುತ್ತೇವೆ.

ನಕ್ಕು ನಕ್ಕು ಗಾಂಧೀಜಿ ಇತಿಹಾಸದಲ್ಲಿ ಬೀಳುತ್ತಾರೆ,
ನಾನು ನಿಮ್ಮ ಮುಂದೆ ಈ ಪದ್ಯ ಓದುತ್ತೇನೆ.
ಜೈಹಿಂದ್!

## ನಿವೃತ್ತರು

ಮುಪ್ಪು ಅಡರಿದ ಸಂಜೆ ಹಣ್ಣೆಲೆಯ ಹಾಸಿನಲಿ
ಪಯಣವಾದವರಿವರು ನಿವೃತ್ತರು.
ಕೀಲೆಣ್ಣೆಯಿಲ್ಲದೇ ಕಿರುಗುಡುವ ಕೈಕಾಲು
ಉಸಿರಿಂದ ದಿನಗಳನು ಎಣಿಸುವವರು.

ಕಾಲರಾಯನ ತಾಜಾ ಲೀಲಾವಿಲಾಸಗಳ
ಪ್ರದರ್ಶಕ ಪಳೆಯುಳಿಕೆ, ಮಾದರಿಗಳು.
ಸಾವು ಬದುಕಿನ ನಡುವೆ ನಿರ್ಲಿಪ್ತ ನಿಲ್ದಾಣ
ವೃದ್ಧಾಶ್ರಮದ ಹಳೆಯ ಪ್ರಜೆಗಳಿವರು.

ಎಷ್ಟು ಗಡಿಬಿಡಿ ಗೌಜು ಕಾಂಪೌಂಡಿನಾಚೆಯಲಿ!
ವ್ಯವಹಾರವಂಚಿತರು ಅದರೊಂದಿಗೆ.
ಎಲ್ಲಾ ವಿದಾಯಗಳ ಹೇಳಿಯೇ ಬಂದವರು,
ನಡೆಯಲಾರದ ನಾಣ್ಯ ಆ ಲೋಕಕೆ.

ಬೆಳಗಾಯಿತೆ? ಸುಪ್ರಭಾತಕ್ಕೆ ಏಳುವರು,
ಅವೇ ಅಂಗೈಗಳನು ನೋಡಕೊಳುತ.
ಅದೆ ಬೆಳಗು ಅದೆ ಗಾಳಿ ಎಲ್ಲ ಹಳಸಲು ಬದುಕು,
ಅವೇ ಆಕಳಿಕೆಗಳ ಆಕಳಿಸುತ.

ಒಮ್ಮೊಮ್ಮೆ ಹೊಂಬಿಸಿಲು ಹಸಿರಲ್ಲಿ ಹಸೆ ಹುಯ್ದು
ಸಣ್ಣ ಕುಸಿಗಳ ನೆನಪು ತರುವದುಂಟು.
ನೆನ ನೆನೆದು ನವೆ ಆನಂದಗಳು ಹೊರಬಂದು
ಬೆರಳು ಬೆರಳಿಗೆ ಹೆಣೆದು ಕುಣಿವುದುಂಟು.

ಬಿಸಿಲು  ಬಲಿತರೆ ಮರೆತ ವಾಸ್ತವದ ಅರಿವಾಗಿ
ಅರಳು ಮರುಳಿನ ಆಟ ಮುಂದುವರಿಸುವರು.
ಮುದಿನಾಯಿಗಿಂತ ತಡಮಾಡಿ ಮಲಗುತ್ತಾರೆ,
ನಿದ್ದೆ ಮುಟ್ಟದು ಇವರ ಕಣ್ಣುಗಳನು.

ಸೋಲುಗಳು ಶಾಪಗಳು ಬೇಡವೆಂದರು ಬರುವ
ಬಚ್ಚಿಟ್ಟ ನನ್ನಿಗಳು ಗಾಬರಿಗಳು-
ದಟ್ಟ ಕತ್ತಲೆ ಗಟ್ಟಿ ಶಿವಲಿಂಗವಾದಂತೆ
ತಟ್ಟುವುದು ಮುಚ್ಚಿಟ್ಟುದೆಲ್ಲವನ್ನು.

ಫೋನು ರಿಂಗಿಸಿದಾಗ ಎತ್ತಿದರೆ ಆಚೆ ತುದಿ
ಮೌನ ತಾಳಿದರಿವರ ಗೋಳು ಬೇಡ.
ಹೋ ಬಂತು ಕರೆ ಎಂದು ಹೌಹಾರಿ ನಡುಗುವರು
ಏಕಾಂತ ಮೂಲೆಯಲಿ ಹುದುಗಿಕೊಳುತ.

ಬದುಕು ಸಾವಿನ ನಡುವಿನೀ ಖಾಲಿ ಕಂದಕವ
ಕರುಣೆಯಲಿ ದಾಟಿಸುವರುಂಟೆ ಇಲ್ಲಿ?
ಚೌಕಾಶಿಗವಕಾಶವಿಲ್ಲ ಕಾಲನ ಜೊತೆಗೆ
'ಬದುಕ ಮನ್ನಿಸು ಪ್ರಭುವೆ' ತೆರೆ ಬೀಳಲಿ.

## ಕವಿ ವೀರಪ್ಪ ಮೊಯಿಲಿ

ಇವರು ಮೊಯಿಲಿ ಅವರು-ನೊಂದವರ ಬೆಂದವರ
ಗಾಯಗಳು ಹದಗೊಂಡು ಅರಳಿದವರು.
ಹೆತ್ತವರ ಹೊತ್ತವರ ಪುಣ್ಯವಂತರ ಕನಸು
ಕಾಲೋಚಿತವನರಿತು ರೂಪುದಳೆದವರು.

ಒಲೆಯ ಉರುವಲದಂತೆ ಉರಿವ ಜನತೆಯ ತಾಪ
ಅಲ್ಲೋಲ ಕಲ್ಲೋಲಗಳಲಿ ಕುದಿದು
ರಾಜಕಾರಣಕಿಳಿದು ಚಮಚಗಿರಿಗಳನೊಡೆದು
ಕಸಿದ ಕನಸುಗಳನ್ನು ತಿರುಗಿ ಕೊಟ್ಟವರು;

ರಾಮಾಯಣವ ಬರೆದು ರಾಮರಾಜ್ಯವ ಹುಡುಕಿ
ಮಳೆಬಿದ್ದ ಹೃದಯದಲಿ ಬೆಳೆದವರು!

ನುಡಿಯ ಗುಡಿ ಕಟ್ಟಿದಿರಿ ವಿದ್ಯೆಗಳ ಸಾಕಿದಿರಿ
ಎತ್ತಿ ಹಿಡಿದಿರಿ ಬೃಹದ್ದೇಶಿಯೆಂದು;
ಖುದ್ದಾಗಿ ಕೋಲು ಮೇಸ್ತ್ರಿಯ ಕೆಲಸ ಮಾಡಿದಿರಿ,
ಸಾರಿದಿರಿ ಕನ್ನಡವೆ ಸತ್ಯವೆಂದು.

ಬೇರೆ ಕಲರುಗಳನ್ನು ಬೆರಕೆ ಮಾಡದೆ ಶುದ್ಧ
ಹಸಿರಲದಿದ್ದದ ಹೊಸಾ ಕನಸುಗಳನು
ಕಣ್ಣ ತುಂಬಾ ಕೊಟ್ಟು ನಮ್ಮ ಕಳಿಸಿದಿರಯ್ಯ,
ತೋರಿ ಹಂಪಿಯ ಹೊಳೆವ ಕ್ಷಿತಿಜವನ್ನು.

ನಿಮ್ಮ ಕೀರ್ತಿಯ ಗಾಳಿ ನಮ್ಮ ಕಡೆ ಬೀಸಿದರೆ
ನಿಮ್ಮದೇ ನೆನಪು ನಮಗೆ.
ಅಷ್ಟೋ ಇಷ್ಟೋ ದಾರಿ ನಡೆದವಯ್ಯ
ನಿಮ್ಮ ಕಣ್ಣುಗಳ ಬೆಳಕಿನೊಳಗೆ.

## ಭಾಗ ೩-ಅಮೆರಿಕ

## ಅಮೆರಿಕದ ರಾಣಿಗೆ

೧

ಅಲೆ ಅಲೆ ಮಾಯಾಜಾಲದ ಬಲೆಹೆಣೆದು,
ಕಾಣದ ಠಾವಿನಲಿ ಕುಂತು,
ಹೊಸನಾತ ಹೊಸನಾತವೆಂದು ಹಲುಬುತ,
ಅಮಾಯಕ ಕೀಟಗಳು ಬಳಿ ಸುಳಿದೊಡನೆ
ಆಹಾಹಾ-
ಬಂದಳಗೊ ಶೋಕೀ ರಂಗೀಲೇ
ಮಿಡ್‌ನೈಟ್ ಮಸಾಲೇ
ಬೆದೆಯಿಂದ ಕುದಿವ ಮೈ ತುಳುಕುತಾ,
ಬಡಪಾಯಿಗಳ ಪಂಚೇಂದ್ರಿಯಗಳಿಗೆ
ಪ್ರತ್ಯೇಕ ಕಚಗುಳಿಯಿಡುತಾ,
ಸುಧೀರ್ಘ ಚುಂಬನದಲ್ಲಿ ಮೈಮರೆಸಿ
ಜೇಬಿಗೆ ಕೈಜಾರಿಸುವ ಜಾರೆಯರೊಡತಿಗೆ
ನಮಸ್ಕಾರ.

೨

ಆಹ್ ಸರ್ಕಸ್ ರಾಣಿ!
ಹುಲಿಸಿಂಹ ಚಿರತೆಗಳಾದಿ ಪ್ರಾಣಿಲೋಕವ
ಮುದದ ಮದದಲಿ ಮೈಮರೆಸಿ,

ಧಾತುಗುಂದಿಸಿ, ಕುರಿಮಾಡಿ ಕುಣಿಸುವಾಖಿ!
ನಖಶಿಖಾಂತ ಆಕ್ರಮಿಸಿಕೊಂಡು
ತನ್ನ ಕಟ್ಟಳೆಗೆ ಬಗ್ಗಿಸಿಕೊಂಬ
ಹಂಟರವಾಲಿಗೆ ನಮಸ್ಕಾರ.

೩

ಬಳಿಬಂದ ಗ್ರಹಗಳಿಗೆ
ಪರ್ಯಾಯ ಪರಿಧಿಯ ರಚಿಸಿ ಸೆಳೆಯುತಾ
ಲೋಕದ ದುಃಖಂಗಳ ತಟ್ಟಿ ಮಲಗಿಸುವಂತೆ
ಅಭಿನಯಿಸುತಾ,
ತಂಟೆ ಮಾಡುವ ತುಂಟರಿಗೆ
ಕಿಡಿ ಚೆಲ್ಲುವ ಮದ್ದು ಸಿಡಿಸಿ
ಮ್ಯಾಲೇಳುವ ಹೊಗೆಯ ಗೋಪುರದ
ಗುಮ್ಮನ ತೋರಿ ಬೆದರಿಸುತಾ,
ಸದರಿ ಕುಳಗಳ ನಿಟ್ಟುಸಿರುಗಳನ್ನು
ಅವರ ಕ್ರೆಡಿಟ್ ಕಾರ್ಡಿಗೇ ಜಮಾಯಿಸುತಾ-

ಎಲ್ಲೋ ಕುಮತು ಎಲ್ಲರ ಉಸಾಬರಿ ಮಾಡುವ
ಜಗದ್ರಕ್ಷಕಿಗೆ
ನಮಸ್ಕಾರ.

೪

ಇವಳು ಮಾಡಿದ್ದೆಲ್ಲ ಕಾನೂನು ಸಮ್ಮತ,
ಜನ ದನ ಪ್ರಜೆಗಳಿಗೆ ಒಮ್ಮತ,
ಉಳಿದವರೆಲ್ಲ ಇವಳೆದುರು ಯಕ್ಕಶ್ಚಿತ
ಅಸಹ್ಯಕರವೆಂದರೆ ಇದ್ಯಾವ ಹೊಸಕರವೆಂದು
ಹೆದರುವ ಮಂದಿ ಅಸಂಗತ.

ಚಮಚಾಗಿರಿಯ ಶಿಖರವೇರಿ
ಧ್ವಜನೆಟ್ಟ ಸಾಹಸಿಗರಿಗೆ ಇನಾಮು ಹಂಚುವ,
ಡೈನಮೆಟ್ ಬೆಳಕಿನಲ್ಲಿ
ಚಿನ್ನದ ಹಲ್ಲಿನ ನಗೆಸೂಸುವ,
ಕದ್ದು ಮಣ್ಣು ತಿನ್ನುವ ಇಲ್ಲವೆ ಸಾಯುವ

ಆಯ್ಕೆಗಳ ನಮಗೇ ನೀಡಿದ ದಯಾಳು ತಾಯಿ
ಶ್ರೀಮಂತ ರಾಣಿಗೆ ನಮಸ್ಕಾರ.

೫

ಅಮೆರಿಕದ ರಾಣಿಗೆ
ಕನ್ನಡಿಯ ಹುಚ್ಚು.
ಕಣ್ಣೊಂದು ಬಿಟ್ಟು ಕನ್ನಡಿಗಿಲ್ಲ
ಬೇರೆ ಇಂದ್ರಿಯ.
ಅಂತೆಯೇ ಸದರಿ ರಾಣಿಗೆ ಕನ್ನಡಿಯೇ
ಕಣ್ಣು, ಕಿವಿ, ಮೂಗು ಪಂಚೇಂದ್ರಿಯ!

ಸದಾ ಕನ್ನಡಿಯೆದುರು ನಿಂತು,
ತಂತಾನೇ ಚೆಲುವೆಯೆಂದು ಹೊಗಳಿಕೊಂಬ,
ಎದುರು ಬಂದವರು ತನ್ನನ್ನು
ರೇಪು ಮಾಡುವರೆಂದು ಕೊಚ್ಚಿಕೊಂಬ-
ಸ್ವಘೋಷಿತ ಜಗನ್ಮೋಹಿನಿಗೆ
ನಮಸ್ಕಾರ.

## ಕನಸು ಮಾರುವ ಮಾರ್ಕೆಟ್ಟು

ಶಿಕಾಗೋದಲ್ಲಿ ಪುಟ್ಟ ಪುಟ್ಟ ಪೆಟ್ಟಿ ಅಂಗಡಿಗಳ
ಸಾಲು ಸಾಲು ಮಾಡಿ ಪೆಟ್ಟಿಗೆಯಲಿಟ್ಟಂತೆ
ಅದೊಂದು ಬಗೆಯ ಸಂಕೀರ್ಣ; ಅಂದರದು
ಕನಸು ಮಾರುವ ಮಾರ್ಕೆಟ್ಟು!
ಒಂದೊಂದಂಗಡಿಯ ಮುಂದೊಂದು ಬಟನಿದೆ.
ಬಟನಿಗೊಂದು ಬಿಲ, ಬಿಲದಡಿ ಒಬ್ಬ ಸುಂದರಿ-
'ಬಾ ರಾಜಾ ಐತೆ ಮಜ!' ಎಂದು ಕೈ ಮಾಡಿ
ಕಣ್ಣು ಹೊಡೆವ ಚಿತ್ರ!
ನೀವು ೫೦ ಸೆಂಟಿನ ನಾಣ್ಯವ ಬಿಲದಲ್ಲಿ ಬಿಟ್ಟರೆ
ಬಾಗಿಲು ತೆರೆಯುತ್ತದೆ. ಒಳಗೆ ಒಬ್ಬರೇ
ಕೂತುಕೊಂಬಷ್ಟು ಸ್ಥಳ.
ಒಳಹೊಕ್ಕರೆ ನೀವು, ನೀವಿರುವಷ್ಟು ಸಮಯ
ಸದರಿ ಸುಂದರಿ ಬೇರೆಯವರ ಕರೆಯುವುದಿಲ್ಲ,

ಹೊರಗೆ ಕಾಣಿಸಿಕೊಂಬುದೂ ಇಲ್ಲ.
ಇದಪ್ಪ ಗುಟ್ಟು ಕಾಪಾಡುವ ವ್ಯವಹಾರ ನೀತಿ.

ಒಳಗೆ ಕೂತಿರಲ್ಲ-
ನಿಮ್ಮೆದುರು ಎರಡಡಿ ಉದ್ದಗಲದ ತೆರೆ,
ಅದರ ಮ್ಯಾಲೆ ನಿಮ್ಮನ್ನ ಕರೆದ ಸುಂದರಿ ಬಂದು
ನಿಮ್ಮ ಕಡೆಗೊಂದು ಚುಂಬನ ತೂರಿ
ನಿಮ್ಮೆದುರಿಗೇ, ನೀವು ಬೆರಗಾಗುವಂಥ,
ಇನ್ನಿಲ್ಲವೆಂಬಂಥ ಮೈಮಣಿತ ಕುಣಿತಗಳಿಂದ
ಬಿಸಿ ಬಿಸಿ ಮೈಮಸಾಲೆಯ ಕನಸು ತಯಾರಿಸಿ
ಐದೇ ನಿಮಿಷ ಸ್ವರ್ಗದ ಸ್ಯಾಂಪಲ್ ತೋರಿಸಿ,
ಇನ್ನಷ್ಟು ಮತ್ತಿಷ್ಟೆಂದು ನೀವು ಗೋಗರೆವಾಗಲೇ
ಮಟಾಮಾಯವಾಗುತ್ತಾಳೇ!

ಹೊರಬಂದರೆ ಇನ್ನೊಂದು ಪೆಟ್ಟಿಗೆಯಲ್ಲಿ ಇನ್ನೊಬ್ಬಳು,
ಮತ್ತೊಂದರಲ್ಲಿ ಮತ್ತೊಬ್ಬಳು-
ಹೀಗೇ ಸಾಲು ಸಾಲು ಸುಂದರಿಯರು;
ಮರಳುಗಾಡಲ್ಲಿ ಉಪ್ಪು ನೀರು ಮಾರುವವರು.
ಕುಡಿದಷ್ಟೂ ಧಗೆ ಹೆಚ್ಚು.
ಧಗೆ ಹೆಚ್ಚಿದಷ್ಟೂ ನೀರು ಕುಡಿ.
ಇಗೊ ಪೆಟ್ಟಿಗೆ ಖಾಲಿ ಇದೆ,
ಬಟನ್ನೊತ್ತಿ ಒಳಗೆ ನಡೆ.

## ಚಂದ್ರಾಮ ಸತ್ತ!

ವಿಷಯ ಗೊತ್ತಾಯಿತ?
ಚದುರಂಗವ ಹೆಣೆದು ಚಂದ್ರನೊಳಗಣ ಹರಿಣವ
ಬೇಟೆಯಾಡಿದರಲ್ಲ ಅಮೆರಿಕನರು,-
ವಿಷಬಾಣ ಇವನಿಗೂ ತಾಗಿ
ಚಂದ್ರಾಮ ಸತ್ತುಬಿದ್ದ!
ಉರಿಯುವ ಸೊಡರ ನೀರಲದ್ದಿದ ಹಾಗೆ
ಅಮವಾಸ್ಯೆಯ ಮುನ್ನಾದಿನ ಸಾಗರದಲ್ಲಿ
ಮುಳುಗಿದವನು ಮ್ಯಾಲೇಳಲೇ ಇಲ್ಲ.
ಆ ದಿನ ಯದ್ವಾತದ್ವಾ ಬಿರುಗಾಳಿ ಬೀಸಿದ್ದು,

ಕ್ಷಿತಿಜ ನಡುಗಿದ್ದು,
ತುಂತುರು ಮಳೆ ಹನಿದು ಬೆಳಿಗ್ಗೆ ಹುಲ್ಲಿನ ಮ್ಯಾಲೆ
ಇಬ್ಬನಿ ಬದಲು ಹನಿ ನೆತ್ತರು ಕಂಡದ್ದು,
ಇಡೀ ರಾತ್ರಿ ತಾರೆಗಳು ಉರಿದುರಿದು ಉದುರಿದ್ದು
ನೋಡಿ, ಆಗಬಾರದ್ದೇನೋ ಆಗಿದೆಯೆಂದು
ನಮಗಾಗಲೇ ಅನಿಸಿತ್ತು.

ಪಾಪ ಕವಿಯಾಗಿದ್ದ ಚಂಧ್ರ.
ಇವನ ಕಾವ್ಯದ ತುಂಬ ಬರೀ ಹುಡುಗಿಯರೇ
ಮಿನಿಯುಡುಗೆಯ ಬೆಡಗಿಯರೇ!
ಅಯ್ಯಾ ಉದಯೋನ್ಮುಖ ಕವಿಯೇ
ಪರವಾಯಿಲ್ಲಯ್ಯಾ ನಿನ್ನ ಕಾವ್ಯ ಎಂದು ಹೊಗಳಿದರಂತು
ಹಿಗ್ಗುತಾ ಕುಗ್ಗುತಾ ದಿನಕೊಂದು ಚಂದ ನಾಚುತಾ
ಕಣ್ಣು ಹೊಡೆವ ಚಂದ್ರಮುಖಿಯರಿಗೆ
ಫೋಜು ಕೊಡುತಾ, ಮಜ ಮಾಡುತಾ
ಕುಡುಗೋಲಿಂದ ವಿರಹಿಗಳ ಹೆಂಗರುಳನಿರಿಯುತಾ
ಕಿವಿಯಿಂದ ಕಿವಿತನಕ ನಗುತ್ತಿದ್ದ.

ಬದ್ಧತೆ ಬೇಕಯ್ಯಾ ಕಾವ್ಯಕ್ಕೆ ಎಂದು
ಎಡಗೈ ವಿಮರ್ಶಕ ಬರೆದರೆ
ಮೋಡಗಳಿಂದ ಹೊರಬಂದು ಗಂಭೀರ ನಿಂದು
ಕಾಳ್ಗತ್ತಲೆಯ ಮುಖಕ್ಕೆ ಬೆಳಕೆರಚಿ
ಭೀಕರವ ಮರೆಮಾಚಿ,
ಕತ್ತಲೆಯ ಗುಟ್ಟುಗಳ ಡೀಕೋಡಿಸುತ್ತ
ಬೆಳ್ಳಂಬೆಳಗು ಕನಸುಗಳ ಸುರಿಸುತ್ತ
ಇಡೀ ಬಯಲನ್ನ ತೂಬುಹಾಕಿ ತುಂಬಿ ಬಿಡುತ್ತಿದ್ದ
ಬೆಳ್ದಿಂಗಳಿಂದ!

ಅಂಥವನು ಪಾಪ ನೀರಲದ್ದಿದ ಮ್ಯಾಲೆ ಇದ್ದಿಲಾದನಂತೆ
ಅವನ ಮೂಳೆಗಳಿಂದ ಟಾಲ್ಕಂ ಪೌಡರು ಮಾಡುವ
ಕಂಪನಿಗಳೆಷ್ಟೋ ಹುಟ್ಟಿವೆಯಂತೆ ಅಮೆರಿಕದಲ್ಲಿ.
ನಮ್ಮವರೂ ಹಿಂದೆ ಬಿದ್ದಿಲ್ಲ,
ಪಳೆಯುಳಿಕೆಯ ಮ್ಯಾಲೆ ಹೌಸಿಂಗ್ ಬೋರ್ಡ್
ಮನೆ ಕಟ್ಟಿಸುವ ನೀಲಿ ನಕ್ಷೆ ತಯಾರಿಸಿರುವರಂತೆ,

ವ್ಯವಹಾರವಾಗಲೇ ಕುದುರಿದೆಯಂಥೆ
ಅಮೆರಿಕದವರೊಂದಿಗೆ.

ಈ ಕವಿತೆಯ ಕೊನೆಯ ಓದುಗನಿಗೆ ಹೇಳುತ್ತೇನೆ-
ಚಂದ್ರ ನಿಜವಾಗಿ ಕವಿಯಾಗಿದ್ದ ಇವರೆ,
ಅವನ ಕವಿತೆ ಈಗಲೂ ಕೇಳಿಸುತಾವೆ
ನಮ್ಮ ಮಾತನ್ನ ನಮಗೇ ತಿರುಗಿಸುವ ಕ್ಷಿತಿಜಗಳಿಂದ;
ನಮ್ಮ ಕನಸಿಗಾದ ಹುಣ್ಣುಗಳಿಂದ.

## ನ್ಯೂಯಾರ್ಕಿನ ೪೨ನೇ ರಸ್ತೆಯ ಹೋಟಲಲ್ಲಿ ರಾತ್ರಿ ಕುಣಿದ ಕಾಮಕಸ್ತೂರಿ

ಪಡಖಾನೆಯ ಗಾಜಿನ ಚೂರುಗಳಲು ಮೇಲೆ
ಲಕಲಕಿಸುತ್ತ ಮೂಡಿದನು ಸೂರ್ಯ,
ಬೆಳಗಿನ ಸಮಯ.

ಮುರಿದ ಕಿಡಿಕಿ, ಚೇರು,
ಅಸ್ತವ್ಯಸ್ತ ಟೇಬಲ್ಲು, ಮ್ಯಾಲೆ ಬಾಕೀ ಬಿಲ್ಲು:
ರಾತ್ರಿ ಘಮ್ಮೆಂದಿದ್ದ ಕಾಮಕಸ್ತೂರಿಯ ಮೈಯಲ್ಲಿ
ವಾಂತಿಯ ಗಲೀಜು.
ಅಲ್ಲೆ ಬಿದ್ದಿದೆ ಕೂದಲಲ್ಲಿದ್ದ ಗುಲಾಬಿಯ ಇದ್ದಿಲು,
ನೆಲದಲ್ಲಿ ಇಂಗದ ವೈನು, ಬೀರಿನ ಜಿಡ್ಡು,
ಜೀಣರ್ವಾಗದ ಮಾಂಸದ ತುಂಡು.

ಕಂಬಕೆ ಅಂಟಿ ಗಂಭೀರ ಕುಂತಿದ್ದಾಳೆ
ಹಲವರ ಏಕಾಂತಗಳ ಅಕ್ರಮ ಆಕ್ರಮಿಸಿ,
ಬಲಗಳ ಹೀರಿ ಹಿಪ್ಪೆಯ ಮಾಡಿ ತಿಪ್ಪೆಗೆಸೆದಾಕ.
ದಿಟ್ಟಿಸಿ ನೋಡುತ್ತಿವೆ ಮೊಲೆತೊಟ್ಟು.

ಏನೆಲ್ಲ ಇವೆ ಇವಳ ನಿರ್ಜನ ನೀಲಿಕಣ್ಣಲ್ಲಿ:
ಸೀದ ಬೇಸಿಗೆ,
ಹಳಸಲು ನಗೆ,
ಕೊಳೆತ ನೆನಪು,
ಸಾಕ್ಸಿನ ಗಬ್ಬುವಾಸನೆಯ
ಸೆಕ್ಸಿನ ಕೊಳೆ ಕೊಚ್ಚೆ,

ಪತ್ರಿಕೆಯ ರದ್ದಿಯಲಿ
ಪೂತನಿಯ ಮೊಲೆಹೀರಿ ಬಿದ್ದ ಕೂಸು,
ತರಿದೊಗೆದು ಗುಡ್ಡೆಹಾಕಿದ ಸ್ತನಗಳು,
ಬಗಿದ ಬಸಿರುಗಳು-
ಇವನ್ನೆಲ್ಲ ಆಕ್ರಮಿಸಿ ಮುಚ್ಚುವ
ನೋಡಿದರೆ ಕಣ್ಣಿರಿವ ಲೋಹದ ಬೆಳಕುಗಳು,
ಮೈಪರಚುವ ಬೆಳ್ಳಿಯ ಥಳಕುಗಳು!

ಇವಳ ಎದೆಯಲ್ಲೆರಡು ಬೆಟ್ಟಗಳು.
ಬೆಟ್ಟಗಳ ಕೆಳಗೆ
ರಭಸದಲ್ಲಿ ಚಿಮ್ಮುತಿರುವ ಬಿಸಿನೀರಿನ ಬುಗ್ಗೆಗಳು...

ಅದರಿಂದಾಳ ಅಂತರಾಳದ ಒಳಗೆ ಶಾಂತ ಸರೋವರ.
ಅಲ್ಲಿ ಅರಳಬಹುದೆ ಒಂದು ಸಹಸ್ರದಳ ಕಮಲ?

## ಟೀವಿ

ನೋಡಿ ನೋಡಿ ಇದರ ಮೋಡಿಯ
ಟೀವಿಯೆಂಬ ಒಕ್ಕಣ್ಣಿನ ಕನ್ನಡಿಯ೧

ಹರಿವ ಕಂಗಳ ತನ್ನಲ್ಲೆ ಕೀಲಿಸಿಕೊಂಬುದಕೆ
ಗಮ್ಮತ್ತುಗಳ ಕುಣಿವುದೇನು
ಮಜಮೋಜುಗಳ ತುಳುಕುವುದೇನು
ಕಂಗಳ ರೇಪು ಮಾಡುವುದೇನು
ಇಸ್ಪೀಟೆಲೆಯಂತೆ ದೃಶ್ಯಗಳ
ರೀಶಫಲ್ ಮಾಡುವುದೇನು!

ನಾವು ನೋಡಿದ ಒಂದು ತರುಮರವಿಲ್ಲ
ಪ್ರಾಣಿ ಪಕ್ಷಿಗಳಿಲ್ಲ.
ಕಿಟಕಿ ಗಾಜಿನ ಮೇಲೆ ಹೊಳೆವ
ಅಕಾಲ ಬಿಸಿಲು ಅಥವಾ ಬೆಳಂದಿಂಗಳು.

ಮೈ ಪರಚಿಕೊಂಬ ರಸ್ತೆ
ಹಲ್ಲು ಕಿರಿವ ದೀಪಗಳು
ಗಿಜಿ ಗಿಜಿ ಅಪರಿಚಿತರು

ಸ್ವಾಮಿಗಳು ದಳ್ಳಾಳಿಗಳು ವ್ಯಾಪಾರಿಗಳು
ಹೈಫೈ ಗರತಿಯರು, ಸೂಳೆಯರು
ಬೆರಳು ಚೀಪುವ ಮಂತ್ರಿಗಳು
ರಾಜಕಾರಣಿಯ ಹೃದಯ ಚಿಕಿತ್ಸೆಯ ವೈದ್ಯರು
ಕತ್ತು ಚೆಲ್ಲಿದ ಕಚೇರಿಯ ಧ್ವಜಗಳು.

ದೇಗುಲ ಕುಸಿದು ಹೂತು ಹೋದ ಗಂಟೆಗಳು
ಮ್ಯಾಲೆದ್ದು ಬಂದು ವರ ಕೊಡುವ ದೇವರ ಮೂರ್ತಿಗಳು
ಅವರ ಪಾದ ಮುಟ್ಟಿದರೆ
ಎಲ್ಲಿಂದಲೋ ಮಿಡಿವ ಗಂಟೆಗಳು
ಇದು ಪವಾಡವೆಂಬ ಪೂಜಾರಿಗಳು.

ಮರುಕ್ಷಣವೆ ಮರುಭೂಮಿಗೆ
ಅಪ್ಪಳಿಸುವ ಮುಗಿಲುಗಳು
ಕೆಳಗಡೆ ತಾಯಿ ಬರೆದ
ಮೊಳಕೆಯ ಚಿತ್ರಗಳು
ಅದನ್ನು ನೋಡುತ್ತ
ಮುಳುಗುತ್ತಿರುವ ಸೂರ್ಯ!
ದಯವಿಟ್ಟು ಸ್ವಿಚಾಫ್ ಮಾಡ್ರಿ!

## ಭಾಗ ೪-ಆಕಾಶ-ಬಯಲು

## ಪೂರ್ಣ

ಸಾಗರದ ಸಾರಾಂಶಕ್ಕೆ ರೆಕ್ಕೆ ಮೂಡಿ
ಹಾರುತ್ತದೆ ಆಕಾಶಕ್ಕೆ.

ಹನಿಯಾಗಿ ಭೂಮಿಗೆ ಬಿದ್ದು,
ಹಸಿರುಧರ್ಮವರಳಿ
ಮಾತಿಗೆ ಮೊದಲಿಟ್ಟು ತೊದಲಿದರೆ ಅಕೋ
ಶಬ್ದ ಭೋರ್ಗರೆದು ನದಿಯಾಗಿ ಹರಿದು
ಸಾಗರ ಸೇರಿದರೆ,
ಬಿಡಿಯಾದ ಕಥೆ ಇಡಿಯಾಗಿ

ಪೂರ್ಣದಿಂದ ಪೂರ್ಣವಾಯಿತಲ್ಲವೆ
ಸಾವಳಗಿ ಶಿವಲಿಂಗಾ!

## ನನ್ನ ಇಂದಿನ ಪ್ರೀತಿ

“ನಿನ್ನ ಇಂದಿನ ಪ್ರೀತಿಯ ಬಗ್ಗೆ ಹೇಳ್” ಂದಳು ಗೆಳತಿ.

ಮುಗಿದ ನಿನ್ನೆ ಬೆನ್ನಿಗಿದೆ. ಬರುವ ನಾಳೆ ಎದುರಿಗಿದೆ.
ನಿನ್ನೆ ನಾಳೆಗಳಿಂದ ಭಿನ್ನವಾಗಿಸಿ ಹೇಳಬಹುದೆ
ಇಂದಿನ ಪ್ರೀತಿಯನ್ನ ಭಾಷೆಯಲ್ಲಿ?

ವಾಕ್ಯವ ಹೇಳುವ ಮೊದಲು ಕರ್ತೃವಿನ ಆಯ್ಕೆಯಾಗಬೇಕು.
ಕ್ರಿಯಾಪದದ ಹೊಣೆ ಅರಿತವನು, ಅವ್ಯಯ ಪ್ರತ್ಯಯಗಳ
ವ್ಯವಹಾರ ಬಲ್ಲವನು, -ಅಂಥವನಿಗೆ ಇದ್ದರೆ ವಿಶೇಷಣ,
ಬಿರುದಾವಳಿಗಳ ಅಂಟಿಸಿ ಹುರಿದುಂಬಿಸಬೇಕು. ಅವನೇ
ತನ್ನ ಪ್ರಯಾಣದ ಉದ್ದೇಶ, ಗುರಿ, ಕಾರಣಗಳ ಶೋಧಿಸಿ,
ಕರ್ಮದ ಕರ್ಮತ್ರಯ ಸೋಸಿ, ಇಲ್ಲಿಯತನಕ
ತರಬಲ್ಲಷ್ಟು ಕರ್ಮವ ಹೊತ್ತು
ಮುಂದಡಿ ಇಡಬೇಕು.

ಪ್ರಸ್ತುತದಲ್ಲಿ ‘ನಾನು’ ಕರ್ತೃವಾದರೆ ‘ನೀನು’ಕರ್ಮ.

ನಿನ್ನಂಥ ಭಾರವಾದ ಕರ್ಮವ ಹೊರಲು
ಕರ್ತೃ ಧೀರನಾಗಿರಬೇಕಲ್ಲವೆ?
ಹೊರುವುದಕ್ಕೆ ಅರ್ಹವಾದ ಕರ್ಮವೆಂದಾದರೆ ಅದಕ್ಕೂ
ಅಂದರೆ ನಿನಗೂ ವಿಶೇಷಣ ಇರಲೇಬೇಕಲ್ಲವೆ?
ಪ್ರೀತಿಯ ಮಾತು ನೋಡು: ಶಬ್ದಗಳಲ್ಲಿ
ಮಾದಕ ಮಾಧುರ್ಯವಿರಬೇಕು. ಅಕ್ಕಪಕ್ಕದ ಪದಾರ್ಥಗಳು
ಕೈಕೈ ಹಿಡಿದು ಕರ್ಮದ ಭಾರವ
ಸಮನಾಗಿ ಹಂಚಿಹೊರುವಂತೆ ಪದಮೈತ್ರಿ ಇರಬೇಕು.

ಇಗೊ:
“ಧೀರನಾದ ನಾನು ಸುಂದರಿಯಾದ ನಿನ್ನನ್ನು”
ಹೊತ್ತು ಮುಂದಡಿ ಇಡಬೇಕು.

ನಮಗಿನ್ನೂ ಕ್ರಿಯಾಪದ ಸಿಕ್ಕಿಲ್ಲವೆಂದು ನೆನಪಿರಲಿ.
ಕ್ರಿಯೆಯೇ ಪ್ರೀತಿಯ ಪ್ರಾಣ. ಅದಿಲ್ಲವೋ
ನಡುನೀರಿನಲ್ಲಿ ನಮ್ಮ ಪ್ರೀತಿಯ ವಾಕ್ಯ ಮುಳುಗಡೆಯಾಗಬೇಕಷ್ಟೆ.
ಅವಸರ ಬೇಡ: ಮಧ್ಯೆ ವಿರಾಮದಲಿ ನಿಂತು,
ಅರೆವಿರಾಮದಲಿ ತಂಗಿ, ದಣಿವಾರಿಸಿಕೊಂಡು;
ಮುಂದುವರಿಯಲಿ ವಾಕ್ಯದ ಯಾತ್ರೆ.

ಆಗಲೇ ಚಡಪಡಿಸುತ್ತಿದೆ ಕ್ರಿಯಾಪದ, ವಾಕ್ಯದ
ನಡೆಯ ತರುಬಿ.
ಎದುರಿಗೆ ಥರಾವರಿ ಕ್ರಿಯಾಪದಗಳಿವೆ ಸಾಲಾಗಿ. ನಿಷೇಧವೇ?
ಗುಣಾತ್ಮಕವೆ? ಸಮುಚಿತವಾದ ಕ್ರಿಯಾಪದದ ಆಯ್ಕೆ
ಮಾಡಿಕೊಳ್ಳಬೇಕು:
"ಧೀರನಾದ ನಾನು ಸುಂದರಿಯಾದ ನಿನ್ನನ್ನು... ಪ್ರೀತಿಸುವೆ"
ಎನ್ನಬೇಕಲ್ಲವೆ?-ಹಾಗಂದರೆ ಭವಿಷ್ಯತ್ಕಾಲವಾಯಿತು!
ಗೊತ್ತಿಲ್ಲದ ನಾಳೆಯೆಂದರೆ-ಅದು ಆಸೆ ಇಲ್ಲವೆ ಮೋಸಗಳ
ಮಾಯಾಲೋಕ! ಮುಂದಿನ ಪ್ರೀತಿಯ ಬಗ್ಗೆ ಇವತ್ತೇ
ಹೇಳುವುದು ಹ್ಯಾಗೆ? ನಾಳೆಯ ಬಿಸಿಲುಗುದುರೆ ಏರಿದವರು
ಬಯಸಿದ ಗುರಿ ತಲುಪುವ ಗ್ಯಾರಂಟಿ ಏನಿದೆ?
ಬದಲು-
"ಪ್ರೀತಿಸಿದೆ" ಎಂದರೆ ನಿನ್ನೆಯ ವಿಚಾರವಾಯಿತು.
ನಮಗೆ ಬೇಕಾದ್ದು ಇಂದಿನೀಕ್ಷಣದ ಪ್ರೀತಿ!

ಕರ್ತೃವಿಗೋ ಹೊತ್ತ ಕರ್ಮದ ಭಾರ.
ಕ್ರಿಯಾಪದ ಕಾಲೂರುವತನಕ ಕೆಳಕ್ಕಿಳಿಸುವಂತಿಲ್ಲ.
ಕ್ಷಿತಿಜದ ಆಚೆಗಿರುವ ನಾಳೆ ಸರಿಯುತ್ತಿದೆ ಮುಂದೆ ಮುಂದೆ.
ಹೆಜ್ಜೆಹೆಜ್ಜೆಗೆ ಭಾರವಾಗುವ ಕರ್ಮ ಹೆಗಲ ಮೇಲೆ. ಭೂತ ಭವಿಷ್ಯದ
ಎರಡು ಎಜ್ಜುಗಳ ಬೆಸೆವ ಜಿನುಗು ಬ್ರಿಜ್ಜಿನ ಮೇಲೆ
ನಿಂತಿದ್ದೇನೆ, ಜಾರುತ್ತಿದೆ ಕಾಲ. ಕೆಳಗೆ ಹರಿಯುವ ನೀರು!
ಕೇಳು ಪ್ರಿಯೆ-
"ಧೀರನಾದ ನಾನು ಸುಂದರಿಯಾದ ನಿನ್ನನ್ನು ಪ್ರೀತಿಸುವೆ ಅಲ್ಲ ಪ್ರೀತಿಸಿದೆ!"

"ವಾಕ್ಯದ ಕೊನೆ ಅವಸರವಾಯ್ತು, ಅಷ್ಟೇ ಕಹಿಯಾಗಿತ್ತು.
ಆಗಲೇ ಬಾಗಿದೆ ಸಂಜೆ ಕ್ಷಿತಿಜದಗುಂಟ.

ವಾಕ್ಯದ ಶಬ್ದಗಳು ಸ್ಮಾರಕಗಳಾಗಿ
ನಮ್ಮೆರಡು ಭೂತಗಳು ಮೂಡಿವೆ ನೀರಿನಲ್ಲಿ!''

"ಹಿಂದಣ ನೆನಪು ಮುಂದಣ ಕನಸು
ಇಂದಿನೀಕ್ಷಣ ಪ್ರತ್ಯಕ್ಷವಾಗುವುದು ಸಾಧ್ಯವಿಲ್ಲವೆ?''

"ಬಯಲಗಾತ್ರಕ್ಕೆ ಬಲೂನುಬ್ಬಿದರೂ
ತೂಕವಿರುವುದಿಲ್ಲ.
ಬಲೂನಿನಲ್ಲಿರುವ ಗಾಳಿಗೆ
ಮಾತೇ ಬರುವುದಿಲ್ಲ!''

ಅದಕ್ಕೇ
ಭಾಷೆ ಅಭಾಷೆಯಾಗಿ ಶಬ್ದ ನಿಶ್ಯಬ್ದವಾಗಬೇಕೆಂದ
ಸಾವಳಗಿ ಶಿವಲಿಂಗ.

## ಕೊಳಲೂದಿ ಕುಣಿಯುವ ಹುಡುಗ

ಅವ್ ನೋಡ ಕೊಳಲೂದಿ ಕುಣಿಯುವ ಹುಡುಗ
ಹುಚ್ಚು ಕೆರಳಿಸತಾನ ಅಂಗಾಂಗದೊಳಗ
ಹೆಗಲಿನ ಗೊಂಗಡಿ ನೆತ್ತೀ ತುರಾಯಿ
ಗರಿಬಿಚ್ಚಿ ಕುಣಿಧಾಂಗ ಶ್ರಾವಣದ ಸೋಗಿ||

ಕಲ್ಲೆಂದು ಮೆಲ್ಲಗೆ ಸೊಲ್ಲಿಲ್ಲದೆ ಬಂದಾ
ಎಡದ ಕೈಯಲಿ ಎನ್ನ ಸೋರ್ಮುಡಿಯ ಹಿಡಿದಾ
ಬಲಗೈಲಿ ಮುಡಿಗೆ ಮಲ್ಲಿಗೆ ಸುತ್ತಿ ನಲಿದಾ
ಮುಂಗುರುಳು ನ್ಯಾವರಿಸಿ ಕಣ್ಣು ಹಬ್ಬಾದ||

ತಡೆಯಲಾಗಲೆ ಇಲ್ಲ ನಮ್ಮ ಮೈ ನವಿರಾ
ಮೈತುಂಬ ಸಳಸಳ ತುಳುಕ್ಯಾವ ಬೆವರಾ
ಹಟ್ಟೀ ಸ್ವಾಮಿಯೆ ನಿನ್ನ ಕಟ್ಟಳೆಯ ಹೊರತಾ
ಅರೆಗಳಿಗೆ ಇರಲಾರೆ ನಾ ನಿನ್ನ ಮರೆತಾ||

ನಿಲ್ಲೊ ಗೊಲ್ಲರ ಹುಡುಗ ಕೊಳಲೂದಬ್ಯಾಡ
ನಮ್ಮ ರಾಗದ ಹುಚ್ಚ ಕೆರಳಿಸಬ್ಯಾಡ
ಮಂದಿ ಏನಂದಾರು ನಾ ಹಿಂದೆ ಬರಲು
ವಾರೀಗಿ ದೇವರು ಕೋಪಗೊಂಡಾರು||

ತಿಳಿಯಬಲ್ಲವರೆಲ್ಲ ತಿಳಿ ಹೇಳಿರವ್ವಾ
ಸುರರ ಜಾತಿಗೆ ನಾನು ಹೊರತಾದೆನವ್ವಾ
ನಾವು ಹಂಗಿಗರವ್ವ ಚೆಲುವನ ಕಲೆಗೆ
ಕಲೆಯೊಂದಿಗೇ ಇವನ ಮುಗ್ಧ ಒಲುಮೆಗೆ||

## ಸೂರ್ಯನ ನೆರಳು

೧

ಲೋಕದಲ್ಲಿರೋದು ಏಕಮೇವ ಸತ್ಯವೆಂತೋ
ಅಂತೆ ವಿಶ್ವಕೊಬ್ಬನೇ ಸೂರ್ಯ-ಅದು ನಾನೇ!
-ಅಂತ ಕೊಚ್ಚಿಕೊಂಡ ಸೂರ್ಯನನ್ನು ಕೇಳಿದಳಂತೆ
ಸಂಜ್ಞೆ ಎಂಬ ಮಡದಿ:

ಅಧೆಂಗಾದೀತು ಪತಿದೇವನೆ,
ಪ್ರೀತಿಗೆ ಎರಡಾದರೂ
ಸಂದೇಹಕ್ಕೆ ಸಾವಿರ ಸತ್ಯಗಳಲ್ಲವೆ?

ಹೆಂಗಸು ಬುದ್ಧಿಗೆ ಹೊಳೆವುದಿಷ್ಟೇ ಎಂದು
ಸುಮ್ಮನಾದರು  ಸೂರ್ಯನಾರಾಯಣಸ್ವಾಮಿ.
ಸುಮ್ಮನಾಗಲಿಲ್ಲ ಮಡದಿ!

ಭೂಮಿಯ ಮ್ಯಾಲಿನ ತನ್ನ ನೆರಳಿಗೇ
ಜೀವ ಭರಿಸಿ, ‘ಛಾಯೆ’ ಎಂದು ಹೆಸರು ಕೂಗಿ,
ನೀನು ನನ್ನಂತಾಗಿ ಗಂಡನ ಕೂಡೆಂದು
ಕಳಿಸಿದಳು ಸೂರ್ಯನ ಬಳಿಗೆ.

ಹುರಿಗೊಂಡ ಬುಗುರಿ ಸೂರ್ಯ
ಅಸಲಿ ನಕಲಿಗಳ ಗುಟ್ಟುತಿಳಿಯದೆ
ನೆರಳಿನ ಒಳಸುಳಿಗಳ ಸೆಳೆತಕ್ಕೆ ಒಳಗಾಗಿ
ಕೂಡಿಯೇ ಬಿಟ್ಟ ನೆರಳಿನ ಜೊತೆಗೆ!

ಎಷ್ಟೆಂದರೂ ಭೂಮಿಗೆ ಹುಟ್ಟಿದ ಚಂಚಲ
ನೆರಳಲ್ಲವೇ ಛಾಯೆ?
ಗಂಡ ಸನಿಹದಲ್ಲಿದ್ದಾಗ ವಿನಯದಲಿ
ಕರಗಿ ಕಾಣದಿದ್ದವಳು,

ದೂರದಲ್ಲಿದ್ದಾಗ ಬೆಳೆದು ಅರ್ಧ ಭೂಮಿ-
ಯನ್ನ ಆವರಿಸಿದಳು!

ನೆರಳು ಕೆನೆಗಟ್ಟಿ ಕತ್ತಲಾಗುವ ಮಡದಿಯರ
ಗುಟ್ಟು, ಕೊನೆಗೂ ತಿಳಿಯಲಿಲ್ಲ ಬೆಳಕಿನ ದೇವರಿಗೂ!

ಲೋಕವ ಬೆಳಗುವ ಬೆಳಕಿಗೆ
ಭೂಮಿಯ ಬುಡ ಕಾಣದ ಕುರುಡು!

೨

ಇಷ್ಟಾಯಿತಲ್ಲ, ಸೊಂಟದ ಬಿಸಿ ಆರಿದ ಮ್ಯಾಲಾದರೂ
ಮಡದಿಯ ನಿಜ ತಿಳಿದನ?
ಕೂಡಿದ ನೆರಳು ಮೂಲವಲ್ಲ, ಎಂದರಿತನ?
ಬಿಡುದ ದೇವರ ವಿಷಯ ನಮಗ್ಯಾಕೆ?

ಇತ್ತ ಛಾಯೆಯ ಹಸನಾದ ಮೋರೆಯಲಿ
ಶಿಶು ಜನನದ ಬೇನೆ ತಲೆದೋರಿ
ಮೂಡುಬೆಟ್ಟದ ತುಂಬ ಬಾಣಂತಿಯ ಸಡಗರ!
ಕೋ ಅಂತ ಬೆಳಗಿನಬ ಕೋಳಿ ಕೂಗಿ,
ಸೂರ್ಯದೇವರು ಕದ ತಟ್ಟಿದರೆ ಅಗೋ ಅಗೋ-
ಬೊಗಸೆ ತುಂಬ ಮುಂಜಾನೆಯ ಹಿಡಿದುಕೊಂಡೇ
ಬಂದವೆರಡು ಮಕ್ಕಳು: ಶನಿ ಮತ್ತು ಯಮವ!
ನಮ್ಮನ್ನು ಕಾಡುವುದಕ್ಕೆ ಇನ್ನೆರಡು ಸತ್ಯಗಳು!

೩

ಈಗ ಹೇಳು: ಲೋಕದಲ್ಲಿರೋದು ಒಂದು ಸತ್ಯವ?
ಹಗಲಿಗೊಂದೇ ಕಣ್ಣಾದರೆ ಕತ್ತಲೆಗೆ ಸಾವಿರ!
ಹಗಲಿಗೆ ಒಂದೇ ಸತ್ಯವಾದರೆ, ಕತ್ತಲೆಗೆ
ಕಣ್ಣು ಹೊಡೆದು ಚಳ್ಳೇಹಣ್ಣು ತಿನ್ನಿಸುವ
ಸತ್ಯಗಳು ಸಾವಿರಾರು!

ಚಿತೆಯ ಗತಿಗಾಣದೆ
ಅನೇಕ ನಕ್ಷತ್ರಗಳು ಸತ್ತಿದ್ದಾವೆ ಆಕಾಶದಲ್ಲಿಲ,
ನಮ್ಮ ಪಾಲಿಗಿನ್ನೂ ಅವುಗಳ ಬೆಳಕಿದೆ!

ಕೆಲವು ಇತ್ತೀಚೆಗೆ ಹುಟ್ಟಿದ್ದಾವೆ,
ಅವುಗಳ ಬೆಳಕಿನ್ನೂ ತಲುಪಿಲ್ಲ ನಮಗೆ!
ಸೂರ್ಯನಿಗೆ ಇದ್ಯಾವುದರ ಅರಿವೂ ಇಲ್ಲ!

ಹೋಗಲಿ ಆಕಾಶದ ನೆಲೆಗಟ್ಟು ನೀಲಿ ಎಂದನಲ್ಲ ಸೂರ್ಯ,
ಅದಾದರೂ ನಿಜವೇ ಹೇಳಿ.
ಸೂರ್ಯನಿಗೆ ಕ್ಯಾರೇ ಅನ್ನದ, ಅವನಿದ್ದಾಗ ನಂದಿ
ಇಲ್ಲದಾಗ ಬಡಿವಾರ ಮಾಡುವ ತಾರೆಗಳೆಷ್ಟೋ ಇವೆ
ನಮ್ಮೀ ವಿಶ್ವದಲ್ಲೆ! ಅದು ಗೊತ್ತೆ ರವಿಗೆ?
ಇದೂ ಹೋಗಲಿ, ಸೂರ್ಯನೂ ಒಂದು ದಿನ
ಇದ್ದಿಲಾಗುವ ತಾರೆ ತಾನೆ? ಬಿಡು ಬಿಡು.
ಮೂಲವೆಂದು ಭ್ರಮಿಸಿ ನೆರಳಿನೊಂದಿಗೇ
ಸಂಸಾರ ಮಾಡಿದವನಿಗೆ
ಕಣ್ಣಿವೆಯೆಂದು ನಂಬುವುದು ಹ್ಯಾಗೆ?

ಸೂರ್ಯನಿಗೆ ಬಿದ್ದ ನಮ್ಮೀ ನೆರಳು
ನಮ್ಮ ಸತ್ಯದ ತಿರುಳು!
ಇಷ್ಟು ತಿಳಿದರೆ ಸಾಕು.

## ಗೆಳತಿಗೆ

೧

ಮತ್ತೆ ಬಂದಿದ್ದೇವೆ
ನಮ್ಮ ಎಳೆತನಕ್ಕೆ ಸಾಕ್ಷಿಯಾದ
ನದಿ ದಂಡೆಗೆ;
ಸಾಗರಕ್ಕೆ ನದಿ ಬಂದಂತೆ.

ಅಚಲ ಕುಂತಿದ್ದಾಳೆ ಗೆಳತಿ,
ನದಿಯಲೆಗಳ ಲೀಲೆಯ
ಅವಲೋಕಿಸುತ್ತ.
ಸರಿಯುತ್ತಾವೆ ಒಂದಾದ ಮೇಲೊಂದು,
ಹಾಗೆಯೇ ಇನ್ನೊಂದು,
ಒಂದಲೆಗೆ ಇನ್ನೊಂದಲೆ ಹೆಣೆಯುತ್ತ,
ಹಿಂದೆ ಸರಿಸುತ್ತ, ಮುಂದುವರಿಯುತ್ತ.

ನೆನಪಿದೆಯೇನೆ?:
ಕನಸಿನ ಬಲೆ ಹೆಣೆದು ಯಕ್ಷಿಯ ಚಂದವ
ಹಿಡಿವ ಕವಿತೆ ಕಟ್ಟೋಣವೆಂದು ನೆನೆವಷ್ಟರಲ್ಲಿ
ಮೋಡಗಳ ರಾಡಿಯಲ್ಲಿ ಚಂದ್ರ ಮುಳುಗಿ
ಕತ್ತಲಾವರಿಸಿತು.
ಫಳ್ಳನೆ ಬೆಳಕು ಮಿಂಚಿ
ಚಂದ್ರನೊಳಗಿನ ಜಿಂಕೆ
ಕೆಳಕ್ಕೇ, ಕೋಣೆಯೊಳಕ್ಕೇ ನೆಗೆದಂತೆ
ಕರವಸ್ತ್ರ ಬಿತ್ತು!

ಎತ್ತಿಕೊಂಡರೆ ಘಮ್ಮಂತ ವಾಸನೆ ಅಡರಿ, ನೋಡಿದೆ:
ನಾಲಕ್ಕು ಅಂಚಿನಲಿ ಎಲೆ ಹೆಣೆದು ಹಬ್ಬಿದೆ ಕಸೂತಿಯ
ಬಳ್ಳಿ. ಮೂರು ಎಲೆಗಳಿಗೊಂದು ಕಳಿತ ನೇರಳೆ ಹಣ್ಣು.
ನಡುವೆ ಅರಳಿದೆ ಅಂಗೈಯಗಲ ಕೆಂಪು ಹೃದಯ!

ಬಾಡದ ಮುದ್ದು ಇಟ್ಟಿರಬಹುದು.
ಬಿಸಿ ಇನ್ನೂ ಹಾಗೇ ಇದೆ!
ಅಂಗಿಯ ಎಡಜೇಬಿನಲ್ಲಿಟ್ಟುಕೊಂಡು,
ಹಿಂದೆ ಅಡಗಿನಿಂತ ನೇರಳೆಹಣ್ಣಿನ ಕಣ್ಣಿನವಳಿಗೆ
ಹೇಳಿದೆ:

ಯಕ್ಷಿಯ ನಾನು ಕಂಡಿಲ್ಲ,
ಕಂಡಿರುವೆನೆಂದು ಹೇಳಿದ್ದು ನಿಜ.
ನೀನೇ ಅವಳೆಂದು ಹೇಳುವುದಾದರೆ
ನನ್ನ ತಕರಾರಿಲ್ಲ.

ಎಲ್ಲಿದ್ದೆಯೋ ಮಾರಾಯ್ತಿ, ಸೈ ಅಂತ ನೆಗೆದು
ಗೆಜ್ಜೆಯ ಹೆಜ್ಜೆಯಿಟ್ಟೆ ನೋಡು ನನ್ನ ಕವನಗಳಲ್ಲಿ!-
ವಸ್ತ್ರ ಹಾರಾಡುತ್ತ ಹೊರಟಿತು ಪಯಣ.

ತುದಿಯಿರದ ದಾರಿಯಲಿ ಬೆನ್ನಿಗ್ಯಾರೂ ಇಲ್ಲ
ನೀ ಬಂದಿಯೇ ನನ್ನ ಭವಿಷ್ಯಂತಿ.
ಕಣ್ಣಂಚಿನಲ್ಲಿತ್ತು ಯಾರು ಅರಿಯದ ಕ್ಷಿತಿಜ.
ಹತ್ತು ಬಾ ಎನುತಿತ್ತು ಬಿಸಿಲಗುದುರೆ.

ಗಂಡಿನದೇನಿದ್ದರೂ ಹಂಕಾರದ ಹೂಂಕಾರ
ನನ್ನ ಮುಂದೆ ಯಾರಿಲ್ಲೆಂದು, ದೂರ ಕಂಡ
ತನ್ನ ಬಾಲವ ತಾನೇ ನುಂಗುತ್ತ,
ವೈರಿಯ ಗೆದ್ದೆನೆಂದ ಮತ್ಸ್ಯರಾಜನ ಹಾಗೆ
ಹೂಂಕರಿಸಿದಾಗ ಅನಿರೀಕ್ಷಿತ ಸಾವಿನೇಟಿಗೆ
ಸಾಯುವುದು,-ಇಷ್ಟೆ.

ಹೆಣ್ಣು ಹಂಗಲ್ಲ ನೋಡು:
ಮೈನೆರೆದು ಕನಸಿನ ಗುಲಾಬಿಗೆ ನೀರೆರೆದು
ಅದರ ಸುತ್ತ ನೀಳಗೂದಲ ಬಲೆ ಹೆಣೆದು
ಕಾಯುವದು.
ಗಂಡು ಬಂದು ಗುಲಾಬಿಗೆ ಕೈ ಹಾಕಿದ್ದೆ ತಡ
ಗಪ್ಪನೆ ಹಿಡಿದು ಬಲೆಸುತ್ತಿ, ತೋಳಕೋಳದಲಿ ಬಂಧಿಸಿ
ಗುಲಾಬಿಯ ಮೆಲ್ಲಗೆ ಕಿತ್ತು,
ಮುಳ್ಳು ಹೊರಕ್ಕೆಸೆದು,
ಪರಿಮಳವ ಗಂಡಿಗೆ ನೀಡಿ
ತಾನು ಮಾತ್ರ ಪಕಳೆಯಲಿ ತೃಪ್ತಿಯ ಹೊಂದಿ
ಮುಳ್ಳಿವೆ ಹೊರಗಡೆ ಹೋಗದಿರೆಂದು
ತಾಕೀತು ಮಾಡಿ
ಮನೆಯ ಕಟ್ಟುವುದು

ಮೂರು ತಿಂಗಳಾಯಿತೇ,-
ಸುರು ಬೆರಳೆಣಿಕೆಯ ಲೆಕ್ಕ.
ಹುಣಸೆ ಹಣ್ಣು, ಹಳೆ ಮಣ್ಣಿಗೆ ಮೂಗರಳಿ,
ನೀರಲ್ಲಿ ತೇಲುವಿರುವೆಯ ದಡ ಮುಟ್ಟಿಸಿ
ಸಕ್ಕರೆ ಚೆಲ್ಲುವದು....
ಮಕ್ಕಳು ಮರಿ ಮಾಡಿ, ಅವರ ಹೆರಿಗೆಯನ್ನೂ ಮಾಡಿ
ಕರುಳಬಳ್ಳಿಯ ಹಬ್ಬಿಸಿ
ಸುಖಬಾಳಿರೆಂದು ಬಳಗವ ಹರಸಿ
ಮಕ್ಕಳಿಗಿಂತ ಮುಂಚೆಯೇ ಹೋಗಿ
ಸಾವಿನ ಬಾಗಿಲು ತಟ್ಟುವುದು!

ಗಂಡಿನ ಸಾವುಗಳೆಲ್ಲ ಆಕಸ್ಮಿಕವೆ
ಯಾಕೆಂದರೆ ಸಾವಿಗೆ ಇವನ ಮೇಲೆ
ಇವನಿಗೆ ಸಾವಿನ ಮೇಲೆನಂಬಿಕೆ ಇಲ್ಲ!

೩

ನೆನಪಿದೆಯೇನೆ?-
ಕಟ್ಟಿದ್ದೆವಲ್ಲ ಇಲ್ಲಿಯೇ, ಇದೇ ಮಳಲಿನಲ್ಲಿ ಮನೆಯೊಂದನ್ನ?
ವಿಶಾಲ ಬೆಡ್‌ರೂಮನ್ನ,
ಗೀಚಿದ್ದೆವಲ್ಲ ಜೋಡಿ ಹೆಸರುಗಳನ್ನ!

ಕಲ್ಪಿಸಿದ್ದೆವು ಗೆಳತಿ ಇದೇ ಬೆಡ್‌ರೂಮಿನಲ್ಲಿ
ನಮ್ಮಿಬ್ಬರ ಟೆಕ್ನಿಕಲರಿನ ತಸಬೀರುಗಳನ್ನ
ನೇತುಹಾಕುವ ರೀತಿ ಮತ್ತು ಸ್ಥಳಗಳನ್ನ!

ಈಗ ನೋಡು:
ಮನೆಯಲ್ಲಿ ಮಕ್ಕಳು ನೇತಾಡುತ್ತಿದ್ದ
ಮಳೆಬಿಲ್ಲುಗಳಿಲ್ಲ!
ಹಿತ್ತಲಲ್ಲಿ ಹಸಿರಿಲ್ಲ, ಹುಲ್ಲಿನೆಸಳಿಲ್ಲ!
ಸಂತೆಸೇರಿದ ದುರ್ದೈವಗಳೆಲ್ಲ ತುಳಿದು
ದರೋಡೆಗೊಳಗಾದಂತೆ
ಮಣ್ಣಾಗಿದೆ ಮನೆ.

ಅಳಿದುಳಿದ ಅವಶೇಷಂಗಳಲ್ಲಿ
ಅಲೆದಾಡುತಿವೆ ಎರಡು ಭೂತಗಳು,
ಸವೆದು ಕರಿಬಿಳಿಯಾದ ತಸಬೀರಿನ ಮೇಲಿನ
ಕಾಲನ ಧೂಳೊರೆಸುತ್ತ!
ಭೂತಗಳ ಗುರುತು ಸಿಕ್ಕಿತೆ ಗೆಳತಿ?
ನಾನು ಮತ್ತು ನೀನು!

೪

ದಾಖಲಾಗುವುದಿಲ್ಲ ಕಣ್ಣೀರು, ಚರಿತ್ರೆಯಲ್ಲಿ.
ಬಹುಬೇಗ ಒಣಗುತ್ತವೆ ಒಣ ಹವೆಯಲ್ಲಿ.
ಇಲ್ಲವೆ ಇಂಗಿ ಹೋಗುತ್ತವೆ ಮಣ್ಣಿನಲ್ಲಿ.
ನೋಡು ಅಲ್ಲೇ ಇದೆ ಕಪ್ಪು ಕಲೆ,

ಕಣ್ಣೀರೊಣಗಿ ಉಳಿದದ್ದು.
ನಿನ್ನ ಹೆಸರ ಬರೆದಿದ್ದೇನೆ, ಅದರಡಿಯಲ್ಲಿ,
ಸುತ್ತ ಗೆರೆ ಕೊರೆದು
ನೆನಪಿನ ಗೋರಿಯ ಮೇಲೆ ಬರೆದಂತೆ.

ತಾಳು, ನೆನಪಿನ ಮೇಲಿನ ಕಪ್ಪುಕಲೆಗಳ
ಒರೆಸಿ ಸ್ವಚ್ಛ ಮಾಡುತ್ತೇನೆ.

೫

ಕಾಲು ಉರುಳುತ್ತದೆ, ಋತು ಬದಲಿ
ಏನೇನೋ ನಡೆಯುತ್ತದೆ.
ಅಂದುಕೊಂಡದ್ದು ಆಗೋದಿಲ್ಲ.
ಆದದ್ದಕ್ಕೆ ಸಮ್ಮತಿಯಿಲ್ಲ.
ಕ್ರಮ ಮರೆತ ಕನಸು ತಲೆಕೆಳಗಾಗಿ
ಹಿಂದೆ ಸರಿಯುತ್ತವೆ.
ನಕ್ಕದ್ದು ಅತ್ತಂತೆ, ಕುಣಿದದ್ದು ಲಾಗ ಹಾಕುತ್ತದೆ.

ನಾವು ಆಡಿದ್ದು ಮಾಡಿದ್ದು
ಹರಿದುಹೋಗಿದೆ ನದಿಯ ತೆರಗಳೊಡನೆ.
ನಿನ್ನೆಯ ಸತ್ಯ ಇಂದಿನ ಚೇಷ್ಟೆಯಾಗಿ
ಕೂಸು ಜೋಗುಳ ಹಾಡಿ ನಮ್ಮನ್ನ ಮಲಗಿಸುತ್ತಿದೆ!

ಯೌವನದ ದಿನಗಳು ಹಿಂದೆ ಸರಿದ ಹಾಗೆ
ನಾವು ದುರ್ಬಲರಾಗಿ ಸಣ್ಣಸಣ್ಣವರಾಗಿ
ಪರಸ್ಪರ ಮುಟ್ಟುವುದರೊಳಗೆ
ನಡುವೆ ಬಂದು ಬಿಟ್ಟಿದೆ ದೇಹ
ಪ್ರೀತಿಯನ್ನಳೆವ ಮಾಪಕವಾಗಿ!

ಗಾಳಿ ಬೀಸಿದಾಗೊಮ್ಮೆ ಸವೆಯುವುದದರ ಚಾಳಿ.
ಹಸುಗಾಯಿ ಹಣ್ಣಾಗಿ ಮಾಗಿದನುಭವದ ಕಳೆ
ನಿನ್ನ ಮುಖದಲ್ಲೀಗ ಹೊಳೆಯುತ್ತಿದೆ.
ಕೊಡುವುದೇನೋ ಇತ್ತು ಪಡೆವುದೇನೋ ಇತ್ತು
ಕೊಟ್ಟು ಪಡೆದೆವು ಏನೆಂದು ತಿಳಿಯದೇನೆ.
ಕಸಿಯಬಲ್ಲನೆ ಹೊರತು ಕೊಡಲುಬಾರದ ಕಾಲ
ನಮಗ್ಯಾಕೆ ಬೇಕು ಅಂಥವನ ಗೊಡವೆ?

ನನಗಾಗಿ ಒಂದಷ್ಟು ಆಯುಷ್ಯವನ್ನ
ಇಟ್ಟಿದ್ದರೆ-ಬಾ ಇತ್ತ.
ಬದುಕುವುದಕ್ಕೆ ಏನು ಬೇಕು?
ಒಂದಷ್ಟು ಭ್ರಮೆಗಳು, ಅಷ್ಟಿಷ್ಟು ಕನಸುಗಳು!
ತರುಣ ಕನಸುಗಳುಂಟು, ಹಸೀ ಭ್ರಮೆ ನೂರುಂಟು!
ಮೈಚಳಿ ಬಿಟ್ಟ ಮುದಿಮರವೂ ಚಿಗುರಲುಂಟು!
ಕೊಡುವುದಕೆ ಪಡೆವುದಕೆ ಇನ್ನು ಇದೆ ಅಷ್ಟಿಷ್ಟು
ಕ್ಷಿತಿಜವನ್ನು ಎತ್ತಿಹಿಡಿಯಲು ಇಷ್ಟು ಸಾಕು.

## ಚಕಮಕಿ ಬೆಂಕಿ

ಚಕಮಕಿ ಬೆಂಕಿ ಶಾಶ್ವತವಲ್ಲಯ್ಯಾ.
ಅದ ಹಿಡಿದು ಹತ್ತಿಯಲ್ಲಿಟ್ಟು
ತೂಗಿ ಮಗುವಿನಂತೆ
ಪಾಲನೆ ಪೋಷಣೆ ಮಾಡಬೇಕು.
ವರುಷದ ಬೆಳವಣಿಗೆಯ ಕ್ಷಣದಲ್ಲಿ ಬೆಳೆದು
ಎದುರೆದುರೆ ಎದ್ದು ನಿಲ್ಲುತ್ತದೆ ನೋಡು:
ಅಗೊ ಅಗೊ ಈಗ ನೀನೆ ಮಗು ಅವನಿಗೆ!-
ಮಗು-ನಿನ್ನ ತಂದೆಯ ಚೆನ್ನಾಗಿ,
ಮೈಕೈ ಸುಡದ ಹಾಗೆ ನೋಡಕೋಪ್ಪಾ...

## ನೆಲ ಮುಗಿಲು

ಮ್ಯಾಲಿನ ನೀಲಿ,
ಕೆಳಗಿನ ಭೂಮಿ,
ಮಧ್ಯೆ ನಾವಿದ್ದೇವೆ
ಹಸಿರಿನ ಹಾಗೆ.

ಮಳೆಯಾಗಿ ಸುರಿದರೂ
ನೀಲಿ ಮ್ಯಾಲೇ ಇದೆ.
ಉಗಿಯಾಗಿ ಮ್ಯಾಲೇರಿದರು
ಭೂಮಿ ಕೆಳಗೇ ಇದೆ.

ಹೆಪ್ಪುಗಟ್ಟಿದ ಪ್ರೀತಿ ಹನಿಯಾಗಿ ಸುರಿದರೂ
ಸುರಿದದ್ದು ಉಗಿಯಾಗಿ ಮತ್ತೆ ಮ್ಯಾಲೇರಿದರು
ಎರಡರ ಮಧ್ಯೆ ನೀರೊಂದೆ ನಿಜ,
ನಮ್ಮ ಪ್ರೀತಿಯ ಹಾಗೆ.

ಹರಿಯುತ್ತದೆ ಪ್ರೀತಿ ಮ್ಯಾಲೆ ಕೆಳಗೆ
ಲಾಳಿಯ ಹಾಗೆ,
ಕತ್ತಲೆ ಬೆಳಕುಗಳ ನೇಯುತ್ತ;

ಇಲ್ಲಿ ಹಾಸು ಹೊಕ್ಕುಗಳ ಹೆಣೆಯುತ್ತ
ಹಸಿರು ಬೆಳೆಯುತ್ತೀಯೋ
ಸಾವಳಗಿ ಶಿವಲಿಂಗಾ.

## ಚಂದ್ರ

೧

ಸಣ್ಣವನಿದ್ದಾಗ ನನಗೂ ಬೇಕೆನಿಸಿದ ಚಂದ್ರ.
ಅವನು ನನ್ನ ಕಡೆ ನೋಡಿದ್ದೆ ತಡ
ಗಕ್ಕನೆ ಹಿಡಿದು ಕಣ್ಣ ಕನ್ನಡಿಯೊಳಗೆ
ಬಂಧಿಸಿಟ್ಟೆ.

ಕಣ್ಣು ಪಂಜರ
ಅದರಲ್ಲಿ ಚಂದಿರ.
ಅವನೊಂದು ಪಕ್ಷಿ,
ನಾ ಅದಕೆ ಸಾಕ್ಷಿ.

ಪಟಪಟ ರೆಕ್ಕೆಯ ಬಡಿದು
ಕನ್ನಡಿಯ ಮನೆಯಲ್ಲಿ ಹೆಂಗಿರಲಿ
ರಾಮ ರಾಮಾ ಅಂದ.

ಕೂಗಬೇಡ ಚಿನ್ನಾ,
ನೀನೇ ನನ್ನ ಪ್ರಾಣ
ರೆಕ್ಕೆ ಪುಕ್ಕ ನೊಂದರೆ
ನನ್ನ ಕಣ್ಣಿಗೆ ತೊಂದರೆ!

೨

ಬೆಳ್ದಿಂಗಳೆಂದರೆ ಅರಳಿದ ಮಲ್ಲಿಗೆಯೆನ್ನು.
ಹಾಗೆಯೇ ಬೆರಗಿನ ಕಣ್ಣೂ ಎನ್ನು.
ಮಗುವೇನ ಮಾಡುತ್ತದೆ?
ಮಲ್ಲಿಗೆಯ ದಳ ದಳ ಕಿತ್ತೆಸೆದುಃ
ಮರೆತು ಕೈ ತಟ್ಟಿ ನಗುತ್ತದೆ.
ದಳ ದಳ ಬಿದ್ದಲ್ಲಿ ತಾರೆಗಳು!
ಇರುಳಿನ ಮುಡಿಗೆ ಇನ್ನಷ್ಟು ಮಲ್ಲಿಗೆ ಹೂಗಳು!

೩

ಬೆಳ್ದಿಂಗಳೆಂದರೆ ಶಬ್ದವಲ್ಲ, ಕಲ್ಪನೆಯಲ್ಲ,
ಕಣ್ಣ ಮುಂದಿನ ಮಾಯೆಯಲ್ಲ,
ಮೈಮರೆಸುವ ಮತ್ತಲ್ಲ.
ಅದಲ್ಲ ಇದಲ್ಲವೆಂದು ಹೀಗಳೆವುದಲ್ಲ!
ಇದೆಲ್ಲವೂ ಅಲ್ಲವೆಂಬ
ಆದರೂ ಹೌದೆಂಬ ನಂಬಿಕೆ.
ನಂಬಬೇಕಣ್ಣಾ ಅದು ಬೆಳ್ದಿಂಗಳೆಂದುಃ

೪

ಬೆಳ್ದಿಂಗಳು ಮಲ್ಲಿಗೆ ಹೂವಾಗಿರಲಿ,
ಹೂವಿಗೆ ಬೆರಗಾಗುವ ಕಣ್ಣುಗಳಿರಲಿ,
ಕಣ್ಣುಗಳಲ್ಲಿ ಹೂ ಬಿಂಬಿಸಿ
ಹೂವಿನಲಿ ಕಣ್ಣರಳಲಿ
ಎಂಬ ನಂಬಿಕೆಯಿರಲಲಿ
ಸಾವಳಗಿ ಶಿವಲಿಂಗಾ.

## ಕೆಮರಾ

ಬೆಳಗಿನ ಸಮಯ.
ಕನಸಿನಲ್ಲಿ ನಾನೊಂದು ಕೆರೆಯಾಗಿ
ತರುಮರಗಳ ಫ್ರೇಮಿನ ಕನ್ನಡಿಯಾಗಿದ್ದೆ
ಆಕಾಶಕ್ಕೆ.

ತಂಗಾಳಿಯಾಗಿ ಬೀಸಿತ್ತು ನನ್ನುಸಿರು
ಜಲತರಂಗವ ನುಡಿಸುತ್ತ.

ಹಕ್ಕಿಯ ಚಿಲಿಪಿಲಿಗೆ
ಎಚ್ಚರವಾಗಿ ನಿನ್ನೆ ಸಂಜೆ ಭೂಮಿಯ ಮ್ಯಾಲೆ ಮಡಿಚೆಟ್ಟ ಬಯಲು
ಬಿಚ್ಚಿಕೊಂಡಿತು ಮೆಲ್ಲಗೆ.

ನೀಲೀಗೋಡೆ ಹಿನ್ನೆಲೆಗಿರಲು
ಕೆಂಪು ಹಳದಿಗಳಿಂದ ಪೇಂಟು ಮಾಡಿರ್ಯೋರೊ
ಮೂಡಣ ಬೆಟ್ಟವ.
ಓಡೋಡಿ ಬಂದವು ಬಾನಂಗಳಕ್ಕೆ ಅಗೊ
ಚಿನ್ನದ ಕುದುರೆ ಓಕುಳಿಯಾಡುತ.
ಕನಸಿನ್ಲಲಿ ವಿಹರಿಸಿ ಈಗಷ್ಟೆ ಎದ್ದವನು
ಸೂರ್ಯದೇವನು ಬಂದ ಆಕಳಿಸುತ.

ಬಾನಂಗಣದಿಂದ ಕೆಳಕ್ಕೇ
ನೇರ ನನ್ನೆದೆಗೇ ಅವತರಿಸಿ
ಮುಖಶುದ್ಧಿ ಮಾಡಿಕೊಂಡು
ಕುರುಳು ತೀಡಿಕೊಳ್ಳುತ್ತಿರಲು;

ಅರೆರೇ-
ನನ್ನ ಹೃದಯ ಕಂಪಿಸಿ
ಚಿಳಿಮಿಳಿ ಮೀನು
ತೆರೆ ತೆರೆ ತಳ್ಳಿ
ತಳ್ಳಂಕವಾಡುತ್ತಿರಲು
ಥಕ್ಕನೆಚ್ಚರವಾಯ್ತು!

ಕಂಡದ್ದು ಕನಸಲ್ಲ!
ಕೆರೆಯಲ್ಲ, ನಾನು ಕೆಮೆರಾ ಆಗಿದ್ದೆ!
ಕಣ್ಣಿನ ಪಕಳೆ ತೆರೆದು ಹಿಡಿದ
ಸೂರ್ಯನ ಚಿತ್ರದ
ನೆಗೆಟಿವಿನ್ನೂ ನನ್ನ ಹೃದಯದಲ್ಲಿದೆ।

ಇದಕ್ಕೆ ನೀನೇ ಪ್ರಮಾಣು
ಸಾವಳಗಿ ಶಿವಲಿಂಗಾ!

## ಲಂಬಾಣಿ ಹುಡುಗಿ

ನಾವೆಲ್ಲ ಅಲ್ಲೇ ಇದ್ದು
ಅಷ್ಟೊಂದು ಗಲಾಟೆ ಮಾಡುತ್ತಿದ್ದರೆ-
ಆ ಲಂಬಾಣಿ ಹುಡುಗಿ,
ಎಲ್ಲರೆದುರಿನಲ್ಲೇ ಅಂಗೈಯಲ್ಲಿ
ಕನ್ನಡಿಯ ಹಿಡಿದು ನೋಡಿಕೊಂಬುವುದೆ?

ಏನೀ ಅವಸ್ತೆ?
ತನ್ನೆದುರು ತನ್ನನ್ನೇ ಇಟ್ಟು
ನೋಡಿಕೊಂಬ ವಿಕಳಾವಸ್ಥೆ!
ಬಿಂಬದ ಜೊತೆ ನೆರೆವ ಬಯಕೆ|

ಎಲಗೆಲಗೇ ಚೆಲುವೆ,
ಹೊರ ಮರೆತು ಒಳಗಿಣಿಕಿ ನೋಡುವವಳೆ,
ಒಳಗನ್ನ ಹೊರತಂದು ಬೆರೆಯಬಯಸಿದವಳೇ
ನೀನು ಸುಂದರಿಯಾಗುವುದಕ್ಕೆ
ನಮ್ಮ ನೋಟ ಬೇಡವೇ?

ಅಗೋ ನೋಡಿರಯ್ಯಾ-
ಕಣ್ಹುಬ್ಬು ಕುಣಿಸುವಳು,
ಕೆನ್ನೆ ಕೆಂಪಾಗುವಳು,
ಮಾತಾಡುತಿರುವಳು ಯಾರೊಂದಿಗೆ?

ನಾವಿದ್ದೂ ಕಾಣದ ಕುರುಡಿಯ
ಅಂಗೈಯಲ್ಲಿ ಕನ್ನಡಿಯೆ ಶಿವನೆ!

## ಪ್ರೇಮದ ಓಲೆ

೧

ಪ್ರೇಮದ ಓಲೆಯ ಬರೆದಳು ಚೆಲುವೆ
ದುರದ ಇನಿಯನಿಗೆ.
ಕ್ಷೇಮ ಸಮಾಚಾರ ತಿಳಿಸೆಂದು ಬರೆದಳು
ಇಂತು ಈ ನಿನ್ನವಳಿಗೆ.

ಉತ್ತರ ಬರಲಿಲ್ಲ, ಪತ್ರವೂ ಬರಲಿಲ್ಲ
ಮತ್ತೊಂದು ಬರೆದಳು ಚೆಲುವೆ:

೧

“ನಮ್ಮವರು ನನ್ನನ್ನ ಏನೇನೊ ಅನ್ನುವರು
ಹೊರ ಮರೆತು ಒಳಗೇನೇ ನೆನೆವೆ?
ಪರಗ್ಯಾನ ಪರಚಿತ್ತ ಏನೀ ವಿಕಳಾವಸ್ಥೆ?”
ನಿಮಗು ಸಹ ಹೀಗೆ ಆಗುವುದೆ?

ಕೌಲೆತ್ತು ಬಂದಿತ್ತು ಮನದಲ್ಲೆ ಕೇಳಿದೆನು-
ಉತ್ತರ ಬರಬಹುದೆ ಇದಕಾದರು?
ಬಲಗಾಲನೆತ್ತಿತ್ತು, ಶುಭಸನ್ನೆ ಮಾಡಿತ್ತು,
ಕತ್ತನ್ನ ತೂಗಿತ್ತು ಮ್ಯಾಲೆ ಕೆಳಗು.

ನನ್ನ ಅಂಚೆವಿಳಾಸ ಸರಿಯಾಗಿ ಗೊತ್ತಲ್ಲ?
ಕೆಳಗಿದೆ ನೋಡಿರಿ ಮರೆತಿದ್ದರೆ.

ಪತ್ರವೂ ಬಾರದೆ ಉತ್ತರವೂ ಬಾರದೆ
ಮತ್ತೊಂದು ಬರೆದಳು ಚೆಲುವೆ:

೨

ದಾಸಯ್ಯ ಊರಾಡಿ ನಮ್ಮನೆಗೆ ಬಂದಿದ್ದ
ಗೊಲ್ಲರ ಬಡವಿಯ ಕತೆ ಹೇಳಿದ:

ಗಲಿರೆಂಬ ಜಂಗಿನ ಜೋಗಿ ಜಂಗಮ ಬಂದ
ಹಟ್ಟಿಯ ತುಂಬೆಲ್ಲ ಬೆಳಕಾಡಿತೊ!
ಅಂಗಳ ರಜ ಗುಡಿಸಿ ರಂಗೋಲೆ ಗೆರೆ ಎಳೆವ
ಬಡವಿಯ ಹೃದಯವೆ ಕಳವಾಯಿತೊ!

ಮಾರನೆ ದಿನದಿಂದ ಜಂಗಮ ಬಾರದೆ
ಕುಂತೆ ಇರುವಳು ನೋಡಿ
ಗೊಲ್ಲರ ಬಡವಿ.

ಬಡವಿಯ ಹೆಸರು ಕೇಳಿದೆ-
“ಅಯ್ಯೋ ಮರೆತೇ ಹೋಗಿದೆ.”

ಮರೆತ ಹೆಸರಿನ ಬಡವಿ ನಾನೇ ಹೌದೆ?
ಈ ಪತ್ರಕಾದರು ಉತ್ತರಿಸಿ ತಪ್ಪದೆ
ಕತೆಯ ನೆನೆದಾಗೆಲ್ಲ ಅಳು ಬರುತಿದೆ.

ಪತ್ರವೂ ಬರಲಿಲ್ಲ ಉತ್ತರವೂ ಬರಲಿಲ್ಲ.
ಮತ್ತೊಂದು ಬರೆದಳು ಚೆಲುವೆ:

೪

ನಿನ್ನೆ ರಾತ್ರಿ
ಕಂಡರಿಯದ ಹಕ್ಕಿಯೊಂದು
ಕೇಳರಿಯದ ಹಾಡು ಹೇಳಿ
ಬೆರಗಿನಲಿ ಮ್ಯಾಲೆ ನೋಡಿದೆ:

ಅಂಬರದ ಅಂಗಳದಿ ಚಂದ್ರಾಮನೆಂಬುವ
ಬಿಳಿ ನವಿಲು ಗರೆಗೆದರಿ ಕುಣಿದು,

ಅಗೊ ನವಿಲ ಗರಿಯಲ್ಲಿ
ಮಿನ ಮಿನ ಮಿನುಗುತಿವೆ
ತಾರಾಖಚಿತ ಚಿಕ್ಕೆಗಣ್ಣು!

ನನ್ನ ಕಣ್ಣಿಂದ್ಯಾರೊ ಚಂದ್ರನ್ನ ನೋಡುವರೆ?
ಹೌದೆನಿಸಿ ಹುಡುಕಿದೆ ಮನೆಯ ತುಂಬ,
ಯಾರೊ ಆಗಂತುಕರು ಉರುಳಾಡಿಧಂಗಿತ್ತು
ಹಾಸಿಗೆ ಕೆದರಿತ್ತು ಅಸ್ತವ್ಯಸ್ತ!

ಮ್ಯಾಲಿನುಪ್ಪರಿಗೆಯಲಿ ಜ್ಯೋತಿ ಉರಿಯುತ್ತಿತ್ತು
ಗಾಳಿಗಲುಗದೆ ಶಾಂತ ಚಿತ್ತ.
ತನ್ನ ಪಾಡಿಗೆ ತಾನು ಒಂಟಿ ಹಾಡನು ಗುನುಗಿ
ನದಿಯು ಹರಿಯುತ್ತಿತ್ತು ಆತ್ಮತೃಪ್ತ!

ಈ ಪತ್ರಕಾದರು ಉತ್ತರ ಕೊಡಿರಯ್ಯ
ನಿನ್ನೆ ಬಂದಿದ್ದವರು ನೀವು ತಾನೆ?

ಪತ್ರವೂ ಬರಲಿಲ್ಲ ಉತ್ತರವೂ ಬರಲಿಲ್ಲ
ನಿಶ್ಯಬ್ಧವಾದಳು ಚೆಲುವೆ!

## ಬೆಳಕಿನ ಕೋಲಿನವರು

ಕಗ್ಗತ್ತಲ ಕರಾಳದೊಳಗೆ
ಮನೆಯ ವಿವರಗಳು ಕರಗಿರುವಾಗ
ಛಾವಣಿಯ ಮ್ಯಾಲೆ ಕಳ್ಳರ ಪಿಸುದನಿ ಕೇಳಿಸಿ
ಮೂಲೆಯಲ್ಲಿ ಹುದುಗಿ ಮೌನಿಯಾದೆ.

ಬೆಳಕಿನ ಕೋಲು ಹಿಡಿದು
ಕೆಳಗಿಳಿದು ಬಂದರು ಆರೇಳು ಜನ
ಕೋಲು ಬೆಳಕಿನವರು!

ತುಟಿಯ ಮ್ಯಾಲೆ ಬೆರಳಿಟ್ಟು
ಪರಸ್ಪರ ಸದ್ದಡಗಿಸಿ ಹುಡುಕಿದರು.
ಯಾರಿಲ್ಲವೆಂದು ಖಾತ್ರಿಯಾಗಿ
ಹೋ ಅಂತ ಚಪ್ಪಾಳೆ ತಟ್ಟಿ
ಬೆರಳಿಗೆ ಬೆರಳು ಹೆಣೆದಾಡಿ
ಗೆಜ್ಜೆಯ ಹೆಜ್ಜೆಹಾಕಿ
ತಕ್ಕತೈ ಕರಗ ಕುಣಿದರು.
ಕಾರಿರುಳ ಹಿಂಡಿ ಬೆಳ್ದಿಂಗಳ ಸೋರಿಸಿ
ಮನೆತುಂಬ ನಗೆಯ ಚೆಲ್ಲಾಡಿದರು!

ಶಬ್ದ ನಿಶ್ಯಬ್ದವಾಗಿ
ಮನೆಯೆಲ್ಲ ಬೆಳಕಿನ ಬಯಲಾದಾಗ
ಮೈ ಮನಸಿಗೆ ಬೆಳ್ದಿಂಗಳ ಲೇಪಿಸಿಕೊಂಡು,
ಮೈಮರೆತು ಶಬ್ದಮುಗ್ಧವಾದೆನೋ
ಸಾವಳಗಿ ಶಿವಲಿಂಗಾ.

## ಗಾಳಿಪಟ

ಕ್ಷಿತಿಜದ ಮ್ಯಾಲೆ
ಹಾರಾಡುವ ಗಾಳಿಪಟವ ನೋಡಿದ ಹುಡುಗ
ತನಗಿಲ್ಲದ್ದಕ್ಕೆ ಮರಗುತ್ತ ನಿಂತಿರಲು-
ಥಳ್ಳನೆ ಎಳೆಬಿಸಿಲು ಹೊಳೆದು
ಜಂಗಿನುಲಿಯ ಮುದಿಜಂಗಮ ಬಂದ.

ಬಾರೊ ಹುಡುಗಾ ಅಂದ.
ಬಂದರೆ ಮೊರದಗಲ ಅಂಗೈಯಲ್ಲಿದ್ದ ವಿಭಿನ್ನ
ಗಾಳಿಪಟ ಕೊಟ್ಟು
ಹಾರಿಸೋ ಕಂದ
ಅದು ಹಾರುವಷ್ಟು ಆಕಾಶ ನಿಂದೇ ಅಂದ.
ಅಂದು ಮಾಯವಾದ.

ಆ ಮುದಿ ಜಂಗಮ ಯಾರೆಂದಿರಿ?
ಸಾವಳಗಿ ಶಿವಲಿಂಗ!
ನಾನೇ ಆ ಹುಡುಗ.

## ಮುದುಕ ಮತ್ತು ದೇವತೆ

ಆಟಕ್ಕೆ ಹೋಗಿದ್ದ ಮೊಮ್ಮಗಳ ಕಾಯುತ್ತ
ಅಜ್ಜ ಕೂತಿದ್ದ ಪಾರ್ಕಿನಲಿ.
ಮೈ ಕೊರೆವ ಚಳಿಯಿತ್ತು, ಗಾಳಿ ಜೋರಾಗಿತ್ತು
ಮುದಿ ಮರವೆ ಅಲುಗಿತ್ತು ಪಕ್ಕದಲ್ಲಿ.

ಹಕ್ಕಿ ಉಲಿದಂತಾಯ್ತು ಮರದಲ್ಲಿ, ನೋಡಿದರೆ
ಬರಡು ಟೊಂಗೆಯಲೊಬ್ಬ ಮರಿದೇವತೆ;
ಎಳೆಯ ನಗೆಗಳ ನಕ್ಕು ಬಲಿತ ಶಬ್ದಗಳಲ್ಲಿ
ಕೇಳಿದಳು "ಮುದಿಯನೆ ಚಳಿಯೆ ನಿನಗೆ?"

ದೇವತೆಯ ದರುಶನಕೆ ಹರುಷಗೊಂಡನು ಮುದುಕ
ಅವಳ ಬಿರುನುಡಿಗಳಿಗೆ ಖೇದಗೊಂಡ.
ಶಾಲು ತಂದಿರಲಿಲ್ಲ ಥಂಡಿ ಹಿಂಡುತ್ತಿತ್ತು
ಕತ್ತು ಅಲುಗಾಡಿಸುತ ಬೇಡವೆಂದ.

ಇದ್ದುದಿದ್ದಂತೆಯೇ ಮುದಿಹೊಂಗೆ ಮರದಲ್ಲಿ
ಮಾಂದಳಿರು ತೂಗಿ ಕೋಗಿಲೆಯು ಕೂಗಿ
ಸುತ್ತ ತರುಮರ ಜಾತಿ ತೇಲಿದವು ಹಸಿರುಡೆಯ
ಚೈತ್ರ ಮಾಸದ ಹಿತದ ಸಡಗರದಲಿ.

ಬೆಚ್ಚಿದನು ಮುದುಕ ಅನಿರೀಕ್ಷಿತಕೆ. ಇದಕೆಲ್ಲ
ದೇವತೆಯ ಮಹಿಮೆ ಕಾರಣವೆ?

“ಅನುಮಾನವೆ ನರನೆ? ಹೇಳಿಂಥ ಅಘಟಿತವ
ಯಾರು ಮಾಡಲು ಸಾಧ್ಯ ನಾನಲ್ಲದೆ?

ಇದೊ ಬಂತು ಹೊಸಗಾಳಿ ಚಳಿ ಹೋಯಿತೇ ಮುದುಕ?
ನಾ ಯಾರ ಮಗಳೆಂದು ಗೊತ್ತಾಯಿತೇ?”
“ಮೈ ಬೆಚ್ಚಗಾಯಿತು ಧನ್ಯವಾದಗಳಮ್ಮ
ನನ್ನ ಅರಿವಿಗು ಬಂತು ನಿನ್ನ ಮಹಲಿಮೆ.

ಅಗೊ ಆಡಿ ಬಂದರು ಪುಟ್ಟ ದೇವರ ಹಿಂಡು
ಹಿಗ್ಗಿನ ಬಾಗಿಲು ತೆರೆದುಕೊಂಡೇ.
ನೀನು ಮಾಡಿದ ಚೈತ್ರಕೆಲ್ಲ ಹೂಮುಡಿಸಿದರು
ಅವರ ನಗೆ ಅರಳಿ ಹೊಂಬಿಸಿಲಾಗಿದೆ.

ಮಂಜೀನ ಒಳಗಿಂದ ಮುಂಜಾವು ಹೊಳೆದಂತೆ
ನನ್ನ ಕಡೆ ಬರುವಳಗೊ ಮರಿದೇವತೆ
ನಗೆಗೊಂದು ಹೊಸ ವಸಂತಗಳ ತರುವಳು ಮನೆಗೆ
ಅವಳ್ಯಾರ ಮೊಮ್ಮಗಳು ಗೊತ್ತಾಯಿತೇ?”

## ನೆರಳು

ಹೆಜ್ಜೆ ದನಿ ಕೇಳುವುದು ರಾತ್ರಿ,
ನೆರಳೊಂದು ಬಾಗಿಲತನಕ ಬಂದು
ಅನುಮಾನಿಸುತ ನಿಂದು-
ಬಾಗಿಲು ತೆರೆಯ ಹೋದರೆ
ಮಾಯವಾಗುವುದು ಕಳ್ಳ ಹೆಜ್ಜೆಯನಿಡುತ!

ಬಂದ ಉದ್ದೇಶವ ಮರೆತು
ಅವಸರದಲ್ಲಿ ಮರೆಯಾಗುವ,
ನನ್ನನ್ನೇ ಹೋಲುವ ಸದರಿ ನೆರಳು
ಯಾರದು?

ಇನ್ನೊಬ್ಬರ ನೆರಳಲ್ಲಿ ಕರಗುವುದ ಕಲಿತು
ಸ್ವಂತಕ್ಕೆ ನೆರಳಿಲ್ಲದಾದೆಯೋ
ಸಾವಳಗಿ ಶಿವಲಿಂಗ!

# ಚಂದ್ರ ಬಂದನು ಎಂದು ಸೆಟೆದು ಬಿದ್ದ

ಯಾರೋ ಗೂಡಿನ ಮುಂದೆ ಓಡಿ ಬಂಧಂಗಾಯ್ತು,
ಕದ ಬ್ಯಾಗ ತಗೀರೆಂದು ಕೂಗಿಧಂಗಾಯ್ತು.
ಅಬ್ಬೆ ಕದ ತೆರೆದರೆ,
ಕದ ತಳ್ಳಿ ಒಳನುಗ್ಗಿ
ಬೆನ್ನ ಹಿಂದಿಲೆ ಕದ ಮುಚ್ಚಿ ನಿಟ್ಟುಸಿರಿಟ್ಟ-
ಗುರುತಿಲ್ಲದ ಯಾರೋ ಪರವೂರಿನವ.

ಬೆಂದಹೂವಿನ ಹಾಗೆ ಎಳೆಯ ಮುಖ ಬಾಡಿತ್ತು.
ಮೈ ಮುಖ ಧೂಳಿನಲಿ ಉರುಳಾಡಿಧಂಗಿತ್ತು.
ಓರೆಗೂದಲು ಕಟ್ಟಿ ನವಿಲುಗರಿ ಸಿಗಿಸಿದ್ದ.
ಮುರಿದ ಕೈದುಗಳ ಕೈಯಲ್ಲಿ ಹಿಡಿದಿದ್ದ.

ಮೊನಚಾದ ನಕ್ಷತ್ರ ಎದೆಯೊಳಗೆ ನಾಟಿತ್ತು ,
ಹನಿ ಹನಿ ನೆತ್ತರು ನೆಲಕೆ ಸೋರಿತ್ತು.
ಬೇಟೆಯಲಿ ನೊಂದ ಮಿಗ ನರಳಿಧಂಗಿತ್ತು,
ಹಿಂದಿನಿಂದ್ಯಾರೊ ಬಂದಾರೆಂಬ ಭಯವಿತ್ತು.

ಕದಕೆ ಅಗಳಿಯ ಹಾಕಿ
ಹಡೆದವ್ವಾ ರಕ್ಷಿಸೆಂದ.
ಒಳಗಿದ್ದ ಕತ್ತಲ ಕಂಡು ಬದುಕಿದೆನೆಂದ,
ಅಂಬೆಗಾಲಿಡುತ ಅಬ್ಬೆಯ ಬಳಿಬಂದ.

ಬೆಂಬತ್ತಿ ಬರುವವರು ಯಾರು ಕಂದಾ?
ಎಂದಳಬ್ಬೆ. ಅವನಂದ:
ಚಂದ್ರ ಬರುತ್ತಿದ್ದಾನೆ ಹಿಂದಿನಿಂದ

ಯಾ ರೂಪದಿಂದಲೋ ಯಾ ಮಾಯೆಯಿಂದಲೋ
ಬೇಟೆಯಾಡುತ ಚಂದ್ರ ಬಂದೆ ಬರುವ,
ಈ ನಿನ್ನ ಕಂದನ್ನ ಕಾಪಾಡೆ ಎವ್ವ.

ಅವ್ವಾ ಅಂದನೆ ಕಂದ-ಅಜ್ಜಿಯ ಮೊಲೆತುಂಬಿ
ಚೆಲ್ಲಂತ ಚಿಮ್ಮಿದವು ಹಾಲು!

ಹಾಲು ಕಂಡದ್ದೆ ಹೋ ಹಾಲು ಬೆಳ್ದಿಂಗಳಿನ
ಚಂದ್ರ ಬಂದನು ಎಂದು ಸೆಟೆದು ಬಿದ್ದ!

## ಹೇಳ ಕೇಳದೆ ಸುಳಿದರ್ಯಾರ?

ಹೇಳ ಕೇಳದೆ ಸುಳಿದರ್ಯಾರ
ನಮ ಸೀಮೆಯಲಿ|
ತಿಳಿಸದೆ ಬಂದವರ್ಯಾರ ||ಪ||
ಆಡುತಾಡುತ ಬಂದು
ಬಂದ ದಾರಿಯ ಮರೆತು
ಚಿತ್ತದಲಿ ಚಕಿತರಾದವರಾ||ಅ.ಪ||

ತೆಳ್ಳಾನ ಹೊಟ್ಟೆವಳು ತಾವರೆಯ ಮುಖದವಳು
ಬ್ಯಾರೇ ಸೀಮೆಯ ನಿಲುವು ಶೈಲಿ|
ಹ್ಯಾಗೆ ಸಂಪಿಗೆ ಮೊಗ್ಗು ಹಾಗೆ ಆಕೆಯ ಮೂಗು
ಕಂಗಳೆಂದರೆ ಕಮಲ ನೀಲಿ|
ಮೊಲೆಗಳ ಭಾರಕೆ ಬಾಗಿದ ಬಾಲೆಯ
ಮುಡಿಯಿಂದ ಜಗಳ್ಯಾವು ಹೂವು||

ಮಾರಿ ಸಣ್ಣದು ಮಾಡಿ ದೂರದಲಿ ನಿಂತಾಳು
ತಿಳಿಯ ಬೆವರಿತ್ತು, ಹಣೆಯೊಳಗೆ|
ಅತಿಶಯದ ಕುಸುಮದ ವಾಸನೆ ಎಸೆದಾವು
ಸರಿದು ಬಂದಳು ಕ್ಷಿತಿಜದಂತೆ|
ಬೆದರಿದ ಎರಳೆಯೊ ದೇವರ ತರಳೆಯೊ
ನಿಜವ ತಿಳಿದವರ್ಯಾರು ಮಾಯೇ| ನಿಮ್ಮ||

ಯಾವುದೊ ಹೊಸಚಂದ್ರ ಭೂಮಿಗಿಳಿಧಾಂಗಿಹುದು
ಕಾಮಿತ ಫಲಿಸಿದ ಹಾಂಗ|
ಮೂರು ಲೋಕದ ಸುಖದ ಶಿಖರದ ಮ್ಯಾಗಿಂದ
ಕನಸು ಕೆಳಜಾರಿದ ಹಾಂಗ|
ಸಣ್ಣ ಮಿಂಚಿನ ಹಾಂಗ ಕಣ್ಣು ಹೊಡೆವಳು ಕನ್ಯೆ
ಚಿಮ್ಮುವ ಚೆಲುಮೆಯ ಹಾಂಗ|| ಹೆಂಗ?||

## ಬಾಹುಬಲಿ

ಅಂಬಾರದಾಚೆಯ ಬಯಲ ತುಂಬಿ
ಅಂಬುಜವರಳಿದೆ ಅಲ್ಲಿ,
ದುಂಬಿಯೊಂದು ಹಂಬಲಿಸಿ ಹಾಡುತಿದೆ
ಬಂಡೆ ಬೆಟ್ಟದಲ್ಲಿ.

ಪ್ರತಿಮಾಯೋಗದ ಚಿತ್ರ ಚರಿತ್ರನು
ಹುರಿಗೊಂಡಿದೆ ಬೆನ್ನು.
ಎಷ್ಟು ಭೇದಿಸಿದರಷ್ಟು ಅಭೇದ್ಯನು
ಬೆರಗಾಗಿದೆ ಬಾನು.

ಸಿರಿಭೂವಲಯದ ಸೀಮೆ ಸಾಲದೇ
ನಿಸ್ಸೀಮದ ಬಯಕೆ,
ಹೊದ್ದ ಮರೆವನೇ ಹರಿದು ಎದ್ದನೋ
ಮಿರಿಲೋಕದ ಗುರಿಗೆ.

ಮಣ್ಣಿನಲಿ ಹುಟ್ಟಿ ಮುಗಿಲಿನಲ್ಲಿ ತಲೆ
ಎತ್ತಿದವಗೆ ಶರಣು.
ಎರಡು ಲೋಕಗಳ ಗೂಢವರಿವ ಪರಿ
ಹೇಳಿದವಗೆ ಶರಣು.

## ನಮ್ಮ ಯಕ್ಷಿ

ತಿಂಗಳ ನಗೆಯವಳೋ
ನಮ್ಮ ಯಕ್ಷಿ| ಚಿಕ್ಕೆಗಳ ಮುಡಿಯುವವಳೊ
ಎದ್ದು ನೋಡೋ ಮುದ್ದು ಚಂದ್ರಾಮ ಕಾಡಿನಲಿ
ಕೈಲಾಸ ತೂಗಿರುವಳೋ! ||

ಗಿಂಡೀಯ ಮೊಲೆಯವಳೊ
ಚಿನ್ನದ| ಚೊಂಬಿನ ಮೊಲೆಯವಳೊ
ಚಿನ್ನದ ಚೊಂಬಿನ ಮೊಲೆಯಿಂದ ಬೆಳಕೀನ
ನೊರೆ ಹಾಲ ಸುರಿಸುವವಳೋ||

ಹಾಡಿಗೆ ಒಲಿಯುವವಳೊ
ಹುರಿಗೊಂಡ ನಾದದಲಿ ಅಡಗಿರುವಳೋ
ಗುಂಗು ಗುಂಗಿನ ನಾದ ಗುಂಭದ ಒಳಗಿಂದ
ಹಾಡಾಗಿ ಹೊಮ್ಮುವವಳೋ||

## ಕವಿತೆ ಕಣ್ಣಾಗಿ

ಮೊನ್ನೆ ತಾಯಿಯ ಹೆಸರು ಮರೆತೆ,
ನಿನ್ನೆ ತಂದೆಯ ಹೆಸರು ಮರೆತೆ,
ಇವತ್ತು ನನ್ನ ಹೆಸರೇ ಮರೆವಾಗಿ-
ಇಂಚಿಂಚು ಇಲ್ಲವಾಗುತ್ತ-ಇಲ್ಲವಾಗುತ್ತಿದ್ದಂತೆ
ಗಕ್ಕನೆ ಕವಿತೆ ಕಣ್ಣಾಗಿ
ನನ್ನ ನೋಡಿದಂತೆನಿಸಿ
ನಾಚಿಕೊಂಡೆ ಸಾವಳಗಿ ಶಿವಲಿಂಗಾ!

## ಯಾಕ ತಂಗಿ ಹಿಂಗ್ಯಾಕ ಹಾರ್ಯಾಡ್ತಿ

ಯಾಕ ತಂಗಿ ಹಿಂಗ್ಯಾಕ ಹಾರ್ಯಾಡ್ತಿ
ಪರಿ ಬಂದಂಗಾಡ್ತಿ||

ತೀರಿಧಾಂಗ ಎಲ್ಲಾ ಬಾಕಿ
ಆರಮೂರ ಭಿಡೆಗಳ ಬಿಟಕೊಟ್ಟಿ|| ಕೇಳವ್ವಾ ತಂಗಿ||

ಸೆರಗ ಹರದ ಹೊಸಲಾ ದಾಟಿ
ತಿರಗತೀಯೆ ಹುರಿಗೊಂಡ ಬುಗುರಿ
ಭರ್ತಿ ಸೇರಿ ಶಿವಾಪುರ ಸಂತಿ
ಖಬರಬೇಡಿ ಪರಭಾರೆ ನಿಂತಿ||

ಅಂಗೈಯಾಗ ಕನ್ನಡಿ ಹಿಡದಿ
ಗೀರು ಗಂಧ ಕಾಡಿಗಿ ತೀಡಿಕೊಂಡಿ|| ಕೇಳವ್ವಾ ತಂಗಿ||

ಮೊಗಮ್ಮಾಗಿ ರಿದಮ್ಮ ಹಾಡಿ
ಸೊಲ್ಲಿಗೊಮ್ಮಿ ದಿಲ್ಲಗಿಯಾಡಿ
ವಾರಿ ನೋಡಿ ಒಳಗs ನಕ್ಕಿ
ಕನ್ನಡಿ ಒಳಗ ಯಾವನ ಕಂಡಿ?

ಕನ್ನಡ್ಯಾಗಿನ ಅಂಬರದಾಗ
ಮೂಡಿದಾವ ಅಂಬುಜಗಳು ಮೂರಾ||
ಹುಚ್ಚು ಶಿವನ ಜೋಡೀಕಣ್ಣಾ
ಯೋಗ ಭೋಗ ಉಂಡಾವ ನೋಡವ್ವಾ|| ಕೇಳವ್ವಾ ತಂಗಿ||

ಸುರಸುಖದ ಮೂರನೆ ಕಣ್ಣಾ
ರುಚಿಗೆ ಮೆಚ್ಚಿ ಮುಚ್ಯಾವಲ್ಲ
ಶಿವಲಿಂಗನ ಪಾದಾ ನಂಬಿ
ಹಾಡತಾವ ಹಾರುವ ದುಂಬಿ||

***